ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 11 ಗುರುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 56 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಮೈಸೂರು ಮಿತ್ರ ಗುರುವಾರ 11 ಜೂನ್ 2026

ಜೂ.27, ನಾಡಪ್ರಭು ಕೆಂಪೇಗೌಡರ ಜಯಂತಿ ಅದ್ದೂರಿ ಆಚರಣೆಗೆ ಒಮ್ಮತದ ನಿರ್ಣಯ

ಜಿಲ್ಲಾಡಳಿತದ ಸಹಯೋಗದಲ್ಲಿ ಆಚರಿಸಲು ಒಕ್ಕಲಿಗರ ಸಂಘಟನೆಗಳ ಒಮ್ಮತದ ತೀರ್ಮಾನ



ಸಭೆಯಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿದರು.



ಸಭೆಯಲ್ಲಿ ಪಾಲ್ಗೊಂಡಿದ್ದ ಶಾಸಕ ಕೆ.ಹರೀಶ್‌ಗೌಡ ಹಾಗೂ ಒಕ್ಕಲಿಗ ಸಮುದಾಯದ ಮುಖಂಡರನ್ನು ಕಾಣಬಹುದು.

ಮೈಸೂರು,ಜೂ.10(ಪಿಎಂ)– ನಾಡಪ್ರಭು ಕೆಂಪೇಗೌಡ ಅವರ ಜಯಂತಿಯನ್ನು ಜೂ.27ರಂದೇ ಸಂಭ್ರಮ ಸಡಗರದಿಂದ ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತದ ಸಹಯೋಗದೊಂದಿಗೆ ಅದ್ದೂರಿಯಾಗಿ ಆಚರಿಸಲು ಒಕ್ಕಲಿಗರ ಸಂಘಟನೆಗಳು ಒಮ್ಮತದ ನಿರ್ಣಯ ಕೈಗೊಂಡವು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಬುಧವಾರ ರಾಜ್ಯ ಒಕ್ಕಲಿಗರ ಸಂಘ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘ ಸೇರಿದಂತೆ ವಿವಿಧ ಒಕ್ಕಲಿಗರ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಸಭೆಯಲ್ಲಿ ಚರ್ಚಿಸಿ ಅಂತಿಮವಾಗಿ ಈ ನಿರ್ಣಯ ಕೈಗೊಂಡರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಆಹ್ವಾನಿಸಿ ಜೂ.27ರ ಬದಲು ಮತ್ತೊಂದು ದಿನ ಜಯಂತಿ ಆಚರಣೆಗೆ ಈ ಹಿಂದೆ ತೀರ್ಮಾನ ಮಾಡಲಾಗಿತ್ತು. ಆದರೆ ಮುಖ್ಯಮಂತ್ರಿಗಳು ರಾಜ್ಯದ ಇತರ ಕೆಲಸಗಳ ನಿಮಿತ್ತ ಮುಂದಿನ ದಿನಗಳಲ್ಲಿ ಬರುವುದಾಗಿ ತಿಳಿಸಿದ ಹಿನ್ನೆಲೆಯಲ್ಲಿ ಎಂದಿನಂತೆ ಜೂ.27ರಂದೇ ಜಿಲ್ಲಾಡಳಿತದೊಂದಿಗೆ ಸೇರಿ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸುವ ತೀರ್ಮಾನವನ್ನು ಇಂದಿನ ಸಭೆಯಲ್ಲಿ ಮಾಡಲಾಯಿತು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಸಮುದಾಯದ ವಿಚಾರ ಬಂದಾಗ ಪಕ್ಷಾತೀತವಾಗಿ ನಡೆದುಕೊಳ್ಳುವುದು ಮುಖ್ಯ. ಈ ನಿಟ್ಟಿನಲ್ಲಿ ಒಮ್ಮತದಿಂದ ಕೆಂಪೇಗೌಡ ಜಯಂತಿಯನ್ನು ಆಚರಿಸೋಣ. ಮುಂದಿನ ಬಾರಿ 3 ತಿಂಗಳು ಮುನ್ನ ಕೆಂಪೇಗೌಡ ಜಯಂತಿ ಆಚರಣೆಯ ಸಿದ್ಧತೆ ಕೈಗೆತ್ತಿಕೊಳ್ಳಬೇಕು. ಈ ಬಾರಿ ಹೆಚ್ಚಿನ ಪ್ರಚಾರ ಕೈಗೊಂಡು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಸಮುದಾಯದ ಶಕ್ತಿ ಪ್ರದರ್ಶಿಸುವ ಕೆಲಸವಾಗಬೇಕು ಎಂದು ತಿಳಿಸಿದರು.

ಶ್ರೀ ನಾಡಪ್ರಭು ಕೆಂಪೇಗೌಡ ಜಯಂತಿ ಮಹೋತ್ಸವ ಸಮಿತಿ ಅಧ್ಯಕ್ಷ ಪಿ.ಪ್ರಶಾಂತಗೌಡ ಮಾತನಾಡಿ, ಪ್ರಚಾರ ಸಮಿತಿ, ಆಹಾರ ಸಮಿತಿ, ಪ್ರತಿಭಾ ಪುರಸ್ಕಾರ ಸಮಿತಿ, ಸ್ವಾಗತ ಸಮಿತಿ, ಹಣಕಾಸು ಸಮಿತಿ ಹೀಗೆ 7ಕ್ಕೂ ಹೆಚ್ಚು ಸಮಿತಿಗಳನ್ನು ರಚಿಸಲಾಗುತ್ತಿದೆ. ಸಮುದಾಯದ ಆಸಕ್ತರು ಯಾರೂ ಬೇಕಾದರೂ ಮುಂದೆ ಬಂದು ಜಯಂತಿ ಯಶಸ್ವಿಗೆ ಕೆಲಸ ಮಾಡಬಹುದು. ಮಾತ್ರವಲ್ಲದೆ, ಈ ನಿಟ್ಟಿನಲ್ಲಿ ನಾವು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಹಾಲಿ ಶಾಸಕ ಕೆ.ಹರೀಶ್‌ಗೌಡ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಅವರ ಮಾರ್ಗದರ್ಶನದಲ್ಲಿ ಸಮಿತಿಗಳನ್ನು ರಚಿಸುವುದಾಗಿ ತಿಳಿಸಿದರಲ್ಲದೆ, ಇದಕ್ಕೆ ಸಭೆಯ ಒಪ್ಪಿಗೆ ಪಡೆದರು.

> ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಂದಿನ ದಿನಗಳಲ್ಲಿ ಪ್ರತ್ಯೇಕವಾಗಿ ಅಭಿನಂದನೆ ಸಲ್ಲಿಸುವ ಕಾರ್ಯ ಮಾಡಲಾಗುವುದು. ಸದ್ಯ ಕೆಂಪೇಗೌಡರ ಜಯಂತಿಯನ್ನು ಪಕ್ಷಾತೀತವಾಗಿ ಯಶಸ್ವಿಯಾಗೊಳಿಸುವ ನಿಟ್ಟಿನಲ್ಲಿ ಎಲ್ಲರನ್ನೂ ಒಳಗೊಂಡಂತೆ ಕಾರ್ಯಕ್ರಮ ರೂಪಿಸಿ. ಅದಕ್ಕೆ ಬೇಕಾಗುವ ಸಹಕಾರವನ್ನು ನೀಡಲಾಗುವುದು. ಜಯಂತಿಯನ್ನು ಅರ್ಥಪೂರ್ಣ ಹಾಗೂ ಅದ್ದೂರಿಯಾಗಿ ನಡೆಸಲು ತಯಾರಿ ನಡೆಸಿ.
> –ಕೆ.ಹರೀಶ್‌ಗೌಡ, ಶಾಸಕರು.

ಜಿಲ್ಲೆಯ ಎಲ್ಲಾ ಹಾಲಿ ಹಾಗೂ ಮಾಜಿ ಶಾಸಕರು ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು. ಕಾರ್ಯಕ್ರಮವನ್ನು ಸಂಪೂರ್ಣವಾಗಿ ಸ್ವಾಮೀಜಿಯವರ ಸಾನಿಧ್ಯದಲ್ಲಿ ನಡೆಸಲಾಗುತ್ತಿದ್ದು, ಸಮುದಾಯದ ಎಲ್ಲರೂ ಸಹಕಾರ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕೆಂದು ಕೋರಿದರು.

ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಕೆ.ವಿ.ಶ್ರೀಧರ್, ಮೈಸೂರು–ಚಾಮರಾಜನಗರ ಜಿಲ್ಲಾ ಸಂಘದ ಅಧ್ಯಕ್ಷ ಎಂ.ಮರಿಸ್ವಾಮಿ, ಗೌರವಾಧ್ಯಕ್ಷ ಆಲತೂರು ಜಯರಾಮ್, ಉಪಾಧ್ಯಕ್ಷ ರವಿಕುಮಾರ್ ರಾಜಕೀಯ, ಬನ್ನೂರು ಮಹೇಶ್, ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ನಿರ್ದೇಶಕರಾದ ಒಂಟಿಕೊಪ್ಪಲು ಗುರುರಾಜ್, ರವಿ, ಬಿ.ಪಿ.ಬೋರೇಗೌಡ, ಗಿರೀಶ್‌ಗೌಡ, ಜಿ.ಕುಮಾರ್‌ಗೌಡ, ಎಂ.ಸುಶೀಲ ನಂಜಪ್ಪ, ಉಮೇಶ್, ಸಮುದಾಯದ ಮುಖಂಡರಾದ ಬೀಡನಹಳ್ಳಿ ಸತೀಶ್‌ಗೌಡ, ನೇಗಿಲಯೋಗಿ ರವಿಕುಮಾರ್, ಕರ್ನಾಟಕ ಕಾವಲುಪಡೆ ಅಧ್ಯಕ್ಷ ಮೋಹನ್ ಕುಮಾರ್‌ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಸದಸ್ಯೆ ಲಕ್ಷ್ಮಿದೇವಿ, ರಾಕೇಶ್‌ಗೌಡ, ತಾಲೂಕು ಒಕ್ಕಲಿಗರ ಸಂಘದ ಕೃಷ್ಣೇಗೌಡ, ಕೆ.ಜಿ.ಕೊಪ್ಪಲು ರಾಜಣ್ಣ, ಜೆ.ಪಿ.ನಗರ ಕೃಷ್ಣ, ನಿವೃತ್ತ ಪೊಲೀಸ್ ಅಧಿಕಾರಿ ಮರಿಗೌಡ ಇನ್ನಿತರರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸಮಿತಿಗಳ ರಚನೆ

ಶ್ರೀ ನಾಡಪ್ರಭು ಕೆಂಪೇಗೌಡ ಜಯಂತಿ ಮಹೋತ್ಸವ ಸಮಿತಿಗೆ ಮತ್ತೊಮ್ಮೆ ಪ್ರಶಾಂತ್‌ಗೌಡರನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಪ್ರಚಾರ ಸಮಿತಿ ಅಧ್ಯಕ್ಷರಾಗಿ ಆರ್.ರಾಕೇಶ್‌ಗೌಡ, ನಗರ ಸಮಿತಿ ಅಧ್ಯಕ್ಷರಾಗಿ ಚೇತನ್ ವಿಷಕಂಠೇಗೌಡ, ಗ್ರಾಮಾಂತರ ಸಮಿತಿ ಅಧ್ಯಕ್ಷರಾಗಿ ಹಿನಕಲ್ ರಾಜಕುಮಾರ್, ಮೆರವಣಿಗೆ ಸಮಿತಿ ಅಧ್ಯಕ್ಷರಾಗಿ ನಿವೃತ್ತ ಪೊಲೀಸ್ ಅಧಿಕಾರಿ ಮರೀಗೌಡ, ಪ್ರತಿಭಾ ಪುರಸ್ಕಾರ ಸಮಿತಿ ಅಧ್ಯಕ್ಷರಾಗಿ ಪ್ರೇಮಾ ಶಂಕರೇಗೌಡ, ಸಾಧಕರ ಪುರಸ್ಕಾರ ಸಮಿತಿ ಅಧ್ಯಕ್ಷರಾಗಿ ಬಿ.ಪಿ.ಬೋರೇಗೌಡ, ಆಹಾರ ಸಮಿತಿ ಅಧ್ಯಕ್ಷರಾಗಿ ಕೆಜಿ.ಕೊಪ್ಪಲು ರಾಜಣ್ಣ ಹಾಗೂ ಎಲ್ಲಾ ಸಮಿತಿಗಳಿಗೂ 150ಕ್ಕೂ ಹೆಚ್ಚು ಸದಸ್ಯರನ್ನು ನೇಮಿಸಿ ಕಾರ್ಯಕ್ರಮದ ಯಶಸ್ಸಿಗೆ ದುಡಿಯುವಂತೆ ಕೋರಲಾಯಿತು.

ಆರೋಗ್ಯಕರ ಜೀವನಶೈಲಿಗೆ ಸ್ವಚ್ಛ ಪರಿಸರ ಅಗತ್ಯ

ಜಯದೇವ ಹೃದ್ರೋಗ ಸಂಸ್ಥೆಯ ಮುಖ್ಯಸ್ಥ ಡಾ.ಸದಾನಂದ ಅಭಿಮತ



ಮೈಸೂರಿನ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು.

ಮೈಸೂರು, ಜೂ.10(ಎಂಕೆ)– ಮರಗಳು ಮಾನವನ ಜೀವನಾಡಿಯಾಗಿದ್ದು, ಉತ್ತಮ ಪರಿಸರವು ಉತ್ತಮ ಆರೋಗ್ಯಕ್ಕೆ ಅಡಿಪಾಯವಾಗಿದೆ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್. ಸದಾನಂದ ತಿಳಿಸಿದರು.

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಕಾರ್ಯಕ್ರಮಕ್ಕೆ ಗಿಡ ನೆಟ್ಟು ನೀರೆರೆಯುವ ಮೂಲಕ ಜಾಗೃತಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಇಂದಿನ ದಿನಗಳಲ್ಲಿ ಅತ್ಯಂತ ಅಗತ್ಯವಾಗಿದೆ.

ವಿಶ್ವ ಪರಿಸರ ದಿನವನ್ನು ಕೇವಲ ಒಂದು ದಿನಕ್ಕೆ ಸೀಮಿತಗೊಳಿಸದೆ, ಜೂನ್ ತಿಂಗಳ ಪೂರ್ತಿ ಪ್ರತಿದಿನ ಒಂದೊಂದು ಗಿಡ ನೆಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಬೇಕೆಂದು ಕರೆ ನೀಡಿದರು.

ಹೃದಯ ಸಂಬಂಧಿ ಕಾಯಿಲೆಗಳ ತಡೆ ಹಾಗೂ ಆರೋಗ್ಯಕರ ಜೀವನಶೈಲಿಗೆ ಸ್ವಚ್ಛ ಪರಿಸರ ಅತ್ಯಗತ್ಯವಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಸಂಕಲ್ಪ ಮಾಡಬೇಕು ಎಂದರು. ಈ ವೇಳೆ ಜಯದೇವ ಸಂಸ್ಥೆಯ ವೈದ್ಯರು, ಸಿಬ್ಬಂದಿ ಮತ್ತಿತರರಿದ್ದರು.

ಮೈಸೂರು ಜಿಲ್ಲಾ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ











ಮೈಸೂರು: ಮೈಸೂರು ಜಿಲ್ಲಾ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘದ ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಜಿಲ್ಲಾಧ್ಯಕ್ಷ ಎಂ.ಎಂ.ಮಹದೇವ್, ಉಪಾಧ್ಯಕ್ಷೆ ವೀಣಾ ಆರ್.ಬಿ., ಕಾರ್ಯಾಧ್ಯಕ್ಷ ಡಾ.ಉಮೇಶ ಬೇವಿನಹಳ್ಳಿ, ಪ್ರಧಾನ ಕಾರ್ಯದರ್ಶಿ ಕ್ಯಾತವಾರಹಳ್ಳಿ ಎಂ.ಮಹೇಶ, ಖಜಾಂಚಿ ಮಧುಸೂದನ ಹೆಚ್.ಕೆ., ಪ್ರಧಾನ ಸಂಘಟನಾ ಕಾರ್ಯದರ್ಶಿ ಡಾ.ಆಶಾ ಎಂ.ಆರ್., ಕಾರ್ಯದರ್ಶಿ ಸಂಜಯ್ ಸಿ.ಪಿ., ಜಂಟಿ ಕಾರ್ಯದರ್ಶಿ ಡಾ.ರವಿಕುಮಾರ್ ಆರ್., ಸಂಚಾಲಕರಾಗಿ ಗಂಗಾಧರ್ ಆಯ್ಕೆಯಾಗಿದ್ದಾರೆ.

ಜಿಲ್ಲಾಧ್ಯಕ್ಷ ಎಂ.ಎಂ.ಮಹದೇವ್ ಮಾತನಾಡಿ, ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯಲು ಶ್ರಮಿಸಲಾಗುವುದು. ಉಪನ್ಯಾಸಕರಿಗೆ ಕಾರ್ಯಾಗಾರ, ಇಲಾಖೆ ಮಟ್ಟದಲ್ಲಿ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಆಯೋಜನೆ, ಆರೋಗ್ಯ ಶಿಬಿರಗಳ ಜೊತೆಗೆ ಉಪನ್ಯಾಸಕರ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು ಎಂದರು.

ಜಿಲ್ಲೆಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಹಿತಾಸಕ್ತಿ ರಕ್ಷಣೆ, ಶೈಕ್ಷಣಿಕ ಗುಣಮಟ್ಟ ವೃದ್ಧಿ ಹಾಗೂ ಸಂಘದ ಬಲವರ್ಧನೆಗೆ ಎಲ್ಲರ ಸಹಕಾರದೊಂದಿಗೆ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದರು.

ನೂತನ ಪದಾಧಿಕಾರಿಗಳನ್ನು ಕುವೆಂಪು ನಗರದ ಸುಂದರ ಬಳಗದಿಂದ ಅಭಿನಂದಿಸಲಾಗುವುದು ಎಂದು ಬಳಗದ ಪುಟ್ಟ ಸ್ವಾಮಿಗೌಡ ತಿಳಿಸಿದರು.

ಸಂತೋಷ್‌ಲಾಡ್‌ಗೆ ಸಚಿವ ಸ್ಥಾನ ನೀಡಿ



ಮೈಸೂರು, ಜೂ.10(ಜಿಎ)–ನೂತನ ಸಚಿವ ಸಂಪುಟದಲ್ಲಿ ಶಾಸಕ ಸಂತೋಷ್ ಲಾಡ್ ಅವರಿಗೆ ಮತ್ತೊಮ್ಮೆ ಸಚಿವ ಸ್ಥಾನ ನೀಡಬೇಕು ಎಂದು ಕರ್ನಾಟಕ ಕ್ಷತ್ರೀಯ ಮರಾಠ ಪರಿಷತ್ ಮುಖಂಡರು ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪರಿಷತ್ ಮುಖಂಡ, ಹುಣಸೂರು ತಾಲ್ಲೂಕು ಪಂಚಾಯತ್ ಮಾಜಿ ಸದಸ್ಯ ಗಣಪತಿ ಹಿಂದಲ್ಕರ್ ಮಾತನಾಡಿ, ಕಾರ್ಮಿಕ ಸಚಿವರಾಗಿ ಸಂತೋಷ್ ಲಾಡ್ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಸರ್ಕಾರವನ್ನು ಸಮರ್ಥವಾಗಿ ಪ್ರತಿನಿಧಿಸಿದ್ದಾರೆ. ಅವರಿಗೆ ಮತ್ತೊಮ್ಮೆ ಅವಕಾಶ ನೀಡುವುದರಿಂದ ಸಮುದಾಯಕ್ಕೂ ಬಲತುಂಬಲಿದೆ ಎಂದರು. ಸಮುದಾಯದ ಶಾಸಕ ಶ್ರೀನಿವಾಸ ಮಾನೆ ಅವರನ್ನೂ ಸಚಿವ ಸ್ಥಾನಕ್ಕೆ ಪರಿಗಣಿಸಬಹುದು. ಸಮಾಜದ ಏಳ್ಗೆಗೆ ರಾಜಕೀಯ ಪ್ರಾತಿನಿಧ್ಯ ದೊರಕುವುದು ಅಗತ್ಯ ಎಂದರು. ಗೋಷ್ಠಿಯಲ್ಲಿ ಪರಿಷತ್‌ನ ಹುಣಸೂರು ತಾಲ್ಲೂಕು ಘಟಕದ ಅಧ್ಯಕ್ಷ ಲೋಕನಾಥ್ ರಾವ್ ಕದಂ, ನಿರ್ದೇಶಕರಾದ ಮಂಜು, ದಿಲೀಪ್, ಸದಸ್ಯರಾದ ರಮೇಶ್, ಚೇತನ್, ಗೋವರ್ಧನ್ ಉಪಸ್ಥಿತರಿದ್ದರು.

ಗಾಂಜಾ ಮಾರಾಟ: ಮೂವರ ಬಂಧನ

475 ಗ್ರಾಂ ಗಾಂಜಾ, 3 ಮೊಬೈಲ್, ಆಟೋ, ನಗದು ವಶ

ಮೈಸೂರು, ಜೂ.10(ಎಂಕೆ)– ಗಾಂಜಾ ಮಾರಾಟ ಮಾಡುತ್ತಿದ್ದ ಮೂರು ಆರೋಪಿಗಳನ್ನು ಬಂಧಿಸಿರುವ ವಿಜಯನಗರ ಠಾಣೆ ಪೊಲೀಸರು, ಬಂಧಿತರಿಂದ 40 ಸಾವಿರ ರೂ.ಮೌಲ್ಯದ 475 ಗ್ರಾಂ ಗಾಂಜಾ, ಮೂರು ಮೊಬೈಲ್, ಒಂದು ಆಟೋ ಹಾಗೂ 2,500 ರೂ.ನಗದನ್ನು ವಶಕ್ಕೆ ಪಡೆದಿದ್ದಾರೆ.

ಮೈಸೂರಿನ ಮೇಟಗಳ್ಳಿ ಲೋಕನಾಯಕ ನಗರದ ಮನೋಜ್(25), ಹಿನಕಲ್‌ನ ಚಂದು(20) ಹಾಗೂ ಹೊಸಪೇಟೆ ಜಿಲ್ಲೆ ಹಗರಿಬೊಮ್ಮನಹಳ್ಳಿಯ ಚಿರಂಜೀವಿ(21) ಬಂಧಿತ ಆರೋಪಿಗಳು. ಜೂ.8ರಂದು ರಾತ್ರಿ 9.30ರ ವೇಳೆ ಬೆಳವಾಡಿ ಮುಖ್ಯ ರಸ್ತೆಯ ಪಂಚಚಾರ್ಯ ಬಡಾವಣೆ ಬಳಿ ಕಾಲೇಜ್ ಬ್ಯಾಗ್‌ನಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದಾಗ ಮೂವರು ಆರೋಪಿಗಳು ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಬಂಧಿತರಿಂದ 475 ಗ್ರಾಂ ಗಾಂಜಾ, 3 ಮೊಬೈಲ್, ಒಂದು ಆಟೋ(ಕೆಎ.09.ಎಸಿ.0314) ಹಾಗೂ 2,500 ರೂ.ನಗದನ್ನು ವಶಕ್ಕೆ ಪಡೆದಿರುವ ಪೊಲೀಸರು, ಬಿಎನ್‌ಎಸ್ 173 ಆಕ್ಟ್ ಅಡಿಯಲ್ಲಿ ಪ್ರಕರಣ ದಾಖಲಿಸಿ ವಿಚಾರಣೆ ಮುಂದುವರೆಸಿದ್ದಾರೆ.

ಆರ್.ವಿಜಯ ನಿಧನ



ಮೈಸೂರು,ಜೂ.10–ಮೈಸೂರಿನ ಚಂದ್ರಗುಪ್ತ ರಸ್ತೆ, ಕ್ಲಾಕ್ ಟವರ್ ಸಮೀಪದಲ್ಲಿರುವ ನಾರಾಯಣ ಆಟೋ ಸರ್ವೀಸ್ ಮಾಲೀಕರಾದ ದಿವಂಗತ ನಾರಾಯಣರಾವ್ ಅವರ ಪತ್ನಿ ಆರ್.ವಿಜಯ (76) ಬುಧವಾರ ಬೆಳಗ್ಗೆ ನಿಧನರಾದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ವಿನಯಮಾರ್ಗದ ನಿವಾಸಿಯಾದ ಇವರು ಪುತ್ರ ಆರ್.ಎನ್. ಚಂದ್ರಶೇಖರ್ (ಮಾಂಡೋವಿ ಮೋಟಾರ್ಸ್‌ನ ಸರ್ವೀಸ್ ಹೆಡ್), ಸೊಸೆ ಜಿ.ಸಂಗೀತ, ಮೊಮ್ಮಕ್ಕಳಾದ ಚಿರಾಗ್ ರಾಂಪುರೆ ಮತ್ತು ವಿವೇಕ್ ರಾಂಪುರೆ ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ಕಿರಣ್



ಕೆ.ಆರ್.ಮಿಲ್ ಕಾಲೋನಿ ನಿವಾಸಿ ಲೇಟ್ ರಾಮಚಂದ್ರ ಅವರ ಪುತ್ರ ಹಾಗೂ ಶ್ರೀ ಕೃಷ್ಣ ರಾಜೇಂದ್ರ ಕಾನ್ಸುಮರ್ ಕೋ–ಆಪರೇಟಿವ್ ಮಿಲ್‌ನ ಅಧ್ಯಕ್ಷ, ಆರ್.ಎಸ್.ಎಂಟರ್ ಪ್ರೈಸಸ್ ಮಾಲೀಕರೂ ಆದ ಕಾಂಗ್ರೆಸ್ ಮುಖಂಡ ಆರ್.ಕಿರಣ್ (36) ಬುಧವಾರ ನಿಧನರಾದರು. ತಾಯಿ, ಪತ್ನಿ,ಪುತ್ರ,ಪುತ್ರಿ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕೆ.ಆರ್.ಮಿಲ್ ಕಾಲೋನಿ ರುದ್ರಭೂಮಿಯಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿದೆ.

ಎ.ಶ್ರೀನಿವಾಸ್



ಮೈಸೂರಿನ ರಾಘವೇಂದ್ರನಗರದ ನಿವಾಸಿ, ಟ್ಯಾಕ್ಸಿ ಚಾಲಕ ಎ.ಶ್ರೀನಿವಾಸ್(37) ಮಂಗಳವಾರ ನಿಧನರಾದರು. ಮೃತರು ತಾಯಿ, ಪತ್ನಿ, ಅಕ್ಕಂದಿರು ಹಾಗೂ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಹುಟ್ಟೂರಾದ ಮಧುಗಿರಿಯ ತಾಳಕಟ್ಟೆಯಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ದಾಖಲೆ ಆಡಳಿತ...!

ಮೈಸೂರಲ್ಲಿ ಬಿಜೆಪಿ ವಿಶೇಷ ಪೂಜೆ; ಮ್ಯಾರಥಾನ್ ಮೂಲಕ ಸಂಭ್ರಮಾಚರಣೆ




ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ಸತತ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನೂರೊಂದು ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ರಾಮಕೃಷ್ಣನಗರದಲ್ಲಿ ಮ್ಯಾರಥಾನ್ ನಡೆಸಲಾಯಿತು.

ಮೈಸೂರು, ಜೂ.10(ಎಂಕೆ)– ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರ ನಿರಂತರ 12 ವರ್ಷ ಪೂರೈಸಿದ ಹಿನ್ನಲೆಯಲ್ಲಿ ಮೈಸೂರಿನ ಅಗ್ರಹಾರದಲ್ಲಿರುವ ನೂರೊಂದು ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಹಾಗೂ ಮ್ಯಾರಥಾನ್ ಹಮ್ಮಿಕೊಳ್ಳಲಾಗಿತ್ತು. ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ನೇತೃತ್ವದಲ್ಲಿ ನೂರೊಂದು ಗಣಪತಿ ದೇವಸ್ಥಾನದ ಆವರಣದಲ್ಲಿ ಜಮಾವಣೆಗೊಂಡ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು, ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ 4,398 ದಿನಗಳ ದಾಖಲೆ ಮುರಿದು 4,399 ದಿನ ಪ್ರಧಾನಿಯಾಗುವ ಮೂಲಕ ದೀರ್ಘಾವಧಿ ಪ್ರಧಾನಿ ಎಂಬ ಗೌರವಕ್ಕೆ ಪಾತ್ರರಾದ ಮೋದಿ ಹೆಸರಿನಲ್ಲಿ ಅರ್ಚನೆ ಮಾಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲರಾಜೇ ಅರಸ್, ಯುವಮೋರ್ಚಾ ನಗರಾಧ್ಯಕ್ಷ ಆರ್.ರಾಕೇಶ್, ಮುಖಂಡರಾದ ಜೋಗಿ ಮಂಜು, ಜೈಶಂಕರ್, ಜಯರಾಮ್, ಕೆ.ಎಂ.ನಿಶಾಂತ್ ಮತ್ತಿತರರಿದ್ದರು.

ಮ್ಯಾರಾಥಾನ್: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಬಿಜೆಪಿ ಚಾಮುಂಡೇಶ್ವರಿ ನಗರ ಮಂಡಲದಿಂದ ಮ್ಯಾರಥಾನ್ ಆಯೋಜಿಸಲಾಗಿತ್ತು. ರಾಮಕೃಷ್ಣನಗರದ ಕೆ ಬ್ಲಾಕಿನ ಆಲದ ಮರದ ಬಳಿ ಆರಂಭವಾದ ಮ್ಯಾರಥಾನ್ ಪ್ರಮುಖ ರಸ್ತೆಗಳಲ್ಲಿ ಸಾಗಿ ಪರಮಹಂಸ ವೃತ್ತದಲ್ಲಿ ಮುಕ್ತಾಯವಾಯಿತು. ಇದಕ್ಕೂ ಮುನ್ನ ಮ್ಯಾರಾಥಾನ್‌ಗೆ ಬಿಜೆಪಿ ರಾಜ್ಯ ವಕ್ತಾರ ಎಂ.ಜಿ.ಮಹೇಶ್ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತವಿಂದು ಕಷ್ಟದಲ್ಲಿರುವ ದೇಶಗಳಿಗೆ ಆಹಾರ, ಔಷಧಿಗಳನ್ನು ಉಚಿತವಾಗಿ ನೀಡುವ ದೇಶವಾಗಿ ಮಾರ್ಪಟ್ಟಿದೆ. ಮೇಕ್ ಇನ್ ಇಂಡಿಯಾ ಮೂಲಕ ಸ್ವದೇಶಿ ನಿರ್ಮಿತ ಶಸ್ತ್ರಾಸ್ತ್ರ ನಿರ್ಮಾಣದಲ್ಲಿ ದಾಪುಗಾಲಿಟ್ಟಿದೆ. ರಸ್ತೆಗಳ ಅಭಿವೃದ್ಧಿ, ಡಿಜಿಟಲ್ ವಹಿವಾಟು ಸೇರಿದಂತೆ ಅನೇಕ ಯೋಜನೆಗಳ ಮೂಲಕ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದು ತಿಳಿಸಿದರು. ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯರಾದ ಎಂ.ಕೆ ಶಂಕರ್, ಹೇಮ ಗಂಗಪ್ಪ, ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ಪ್ರಧಾನ ಕಾರ್ಯದರ್ಶಿಗಳಾದ ಈರೇಗೌಡ, ಆರ್. ಸೋಮಶೇಖರ್, ಉಪಾಧ್ಯಕ್ಷರಾದ ಬಿ.ಸಿ.ಶಶಿಕಾಂತ್, ಶಿವು ಪಟೇಲ್, ಹೆಚ್.ಎಸ್ ಹಿರಿಯಣ್ಣ, ನಾಗರಾಜ ಜನ್ನು, ಎನ್.ಶುಭಶ್ರೀ, ರಾಮಕೃಷ್ಣಪ್ಪ, ಶೇಖರ್, ಬಸವಣ್ಣ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.06.2026 ಗುರುವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್, ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣೆ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃಧ್ರಸಿ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗೆ 9.30 ರಿಂದ
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯ ಮೂಲ ಸಂಸ್ಥಾನ, ಉತ್ತರಾದಿ ಮಠ, ಮೈಸೂರು, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಮೈಸೂರು ದಿಗ್ವಿಜಯ–2026, ಶ್ರೀ ಸತ್ಯ ಸಂಕಲ್ಪ ತೀರ್ಥರ ಹಾಗೂ ಶ್ರೀ ಸತ್ಯಸಂತುಷ್ಟ ತೀರ್ಥರ ದಿವ್ಯ ಸನ್ನಿಧಾನ, ಬೆಳಗ್ಗೆ 7.30 ರಿಂದ ಪಾದಪೂಜೆ, ಮುದ್ರಾಧಾರಣೆ ಹಾಗೂ ಧನ್ವಂತರಿ ಹೋಮ, ಗೋ ಪೂಜಾ, ಸಂಕಲ್ಪ ಸಹಿತ ಅಪೂವ ದಾನ, ಶ್ರೀಮನ್ಮೂಲರಾಮದೇವರ ಪೂಜೆ, ಸಂಜೆ 4.30 ರಿಂದ ಹರಿನಾಮ ಭಜನೆ (ಭಜನಾ ಮಂಡಳಿಗಳಿಂದ), ಸಾಂಸ್ಕೃತಿಕ ಕಾರ್ಯಕ್ರಮ, ವಿದ್ವಾಂಸರಿಂದ ಪ್ರವಚನ, ಗಣ್ಯರಿಗೆ ಸನ್ಮಾನ, ಶ್ರೀಪಾದಂಗಳವರ ಅನುಗ್ರಹ ಸಂದೇಶ, ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಪುರುಷೋತ್ತಮ ಸ್ತುತಿ ಲಹರಿ, ಸಂಜೆ 5.30 ರಿಂದ ವಿದ್ವಾನ್ ಗುಂಡಾಚಾರ್ಯ ಮತ್ತು ವಿದ್ವಾನ್ ಜಯಸಿಂಹ ಅವರಿಂದ ದಾಸವಾಣಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** ಅಂಜನಾನಂದನೋತ್ಸವ, ಡಾ.ಎನ್.ಕೆ.ರಾಮಶೇಷನ್ ಅವರಿಂದ ಶ್ರೀ ಸುಂದರಕಾಂಡ ಪ್ರವಚನ, ಸ್ಥಳ: ಶ್ರೀರಾಮ ಮಂದಿರ, ಶಿವರಾಂಪೇಟೆ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 8.45 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಮಾಂಬಳಂ ಎಂ.ಕೆ.ಎಸ್. ಶಿವ–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಸುತ್ತಮುತ್ತ : ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಪ್ರಮುಖ ಸಭೆ ಸಮಾರಂಭಗಳ ಪರಿಚಯಾತ್ಮಕ ಕಾರ್ಯಕ್ರಮ. ಪ್ರಸ್ತುತಿ–ಚಂದನಾ .ಸಿ ಹಾಗೂ ಅರ್ಚನಾ. ಪಿ ಆರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಸ್ನೇಹಾ ಹೆಚ್. ಎಸ್. ಮತ್ತು ಸಹನಾ ಹೆಚ್. ಎಸ್., 12.45 ಚಿತ್ರಗೀತೆಗಳು, 1.00 ಪ್ರಗತಿಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಹರ್ಷಿತಾ ಮತ್ತು ನಿಶ್ಚಲಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು– ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಬಾಳೆ–ಸಸಿ, ಕೃಷಿ ಹಾಗೂ ಮಾರಾಟ ಕುರಿತು ಸಂವಾದ ಭಾಗವಹಿಸುತ್ತಾರೆ– ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ರಾದ ಡಾ. ಎಚ್.ಆರ್. ಮನುಕುಮಾರ್ ಮತ್ತು ಮೈಸೂರಿನ ಪಿ.ಜಿ.ಆರ್. Farmsನ ಎನ್. ಮಹದೇವ ಪ್ರಸಾದ್, ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಯುವವಾಣಿ ಹಲೋ ಯುವವಾಣಿ–ನೇರ ಫೋನ್–ಇನ್ ಕಾರ್ಯಕ್ರಮ– ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತು ಸಾಮಾನ್ಯಜ್ಞಾನ ರಸಪ್ರಶ್ನೆ ಕಾರ್ಯಕ್ರಮ, ಪ್ರಸ್ತುತಿ–ನಿವೇದಿತ ಹೆಚ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ ಎಂ.ವೈ. ಕಾಮಾಶಾಸ್ತ್ರಿ ಅವರ ನಿರ್ದೇಶನದಲ್ಲಿ ನಿಲಯದ ಕಲಾವಿದರಿಂದ ವಾದ್ಯವೃಂದ, 10.00 ನಾಟಕ–ಆ ಭಾನುವಾರ, ರಚನೆ–ಸುಬ್ರಾಯ್ ಜಿ. ಭಟ್, ನಿರ್ಮಾಣ–ಉಮೇಶ್ ಎಸ್. ಎಸ್., 10.30 ಸವಿನೆನಪು

- **ವ್ಯವಸ್ಥಾಪಕರು** : ಮೈಸೂರು ಧ್ಯಾನ ಮಹಾಯಜ್ಞ ದುಃಖ ನಿವಾರಣೆಯ ಮಾರ್ಗ ಕಾರ್ಯಕ್ರಮ, ಸ್ಥಳ: ಶ್ರೀ ಬಂದಂತಮ್ಮ ಕಾಳಮ್ಮ ಸಮುದಾಯ ಭವನ, ಸರಸ್ವತಿಪುರಂ, ಬೆಳಗ್ಗೆ 5 ರಿಂದ ಸಂಜೆ 5 ರವರೆಗೆ
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 11 ಗುರುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 56 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ನನ್ನ–ಮೋದಿಯವರ ಬಾಂಧವ್ಯ ರಾಜ್ಯಸಭಾ ಸ್ಥಾನವನ್ನು ಮೀರಿದ್ದು

● ರಾಜ್ಯಸಭಾ ಸ್ಥಾನದ ಬಗ್ಗೆ ನನಗೆ ವ್ಯಾಮೋಹವಿಲ್ಲ; ಅದರ ಬಗ್ಗೆ ನಾನು ಬೇಡಿಕೆ ಇಟ್ಟಿರಲಿಲ್ಲ: ಮಾಜಿ ಪ್ರಧಾನಿ ದೇವೇಗೌಡರ ಸ್ಪಷ್ಟನೆ ● ಕಳೆದೆರಡು ದಿನಗಳಿಂದ ನಡೆಯುತ್ತಿರುವ ಅನಗತ್ಯ ಚರ್ಚೆಗೆ ತೆರೆ ಎಳೆದ ಮಾಜಿ ಪ್ರಧಾನಿಗಳು: ಸುಮ್ಮನೆ ಕೂರುವುದಿಲ್ಲ, ಪಕ್ಷ ಕಟ್ಟುವ ಕೆಲಸ ಮಾಡುತ್ತೇನೆ!




ಬೆಂಗಳೂರು, ಜೂ.10– ನನ್ನ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಬಾಂಧವ್ಯವು ರಾಜ್ಯಸಭೆ ಸ್ಥಾನವನ್ನು ಮೀರಿದ್ದು ಎಂದು ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡರು ಸ್ಪಷ್ಟಪಡಿಸಿದರು.

ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಕಿಕ್ಕಿರಿದ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿದರು. ಎಪ್ಪತ್ತು ವರ್ಷಗಳ ಸುದೀರ್ಘ ರಾಜಕೀಯ ಜೀವನ ಸವೆಸಿರುವ ನನಗೆ ರಾಜ್ಯಸಭೆ ಸದಸ್ಯನಾಗಬೇಕು ಎಂಬ ವ್ಯಾಮೋಹವಿಲ್ಲ. ಸುದೀರ್ಘ ರಾಜಕೀಯ ಜೀವನದಲ್ಲಿ ಅಧಿಕಾರಕ್ಕಿಂತ ಜನಸೇವೆಯೇ ಮುಖ್ಯವಾಗಿತ್ತು ಎಂಬುದನ್ನು ಅತ್ಯಂತ ವಿನಯಪೂರ್ವಕವಾಗಿ ಹೇಳಲು ಬಯಸುತ್ತೇನೆ ಎಂದರು. ಕಳೆದೆರಡು ದಿನಗಳಿಂದ ರಾಜ್ಯಸಭೆ ಸ್ಥಾನದ ವಿಚಾರದಲ್ಲಿ ತಮ್ಮ ■10ನೇ ಪುಟಕ್ಕೆ

12 ವರ್ಷಗಳ ಸಾರ್ಥಕ ಸೇವೆ

ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದ ಹೆಚ್.ಡಿ.ಕುಮಾರಸ್ವಾಮಿ

ಪ್ರಧಾನಿಗಳ ಮಹತ್ವಾಕಾಂಕ್ಷೆಯ ವಿಕಸಿತ ಭಾರತ ಕನಸು ಸಾಕಾರಕ್ಕೆ ಬದ್ಧತೆಯಿಂದ ದುಡಿಯುವುದಾಗಿ ಶಪಥ ಮಾಡಿದ ಕೇಂದ್ರ ಸಚಿವರು



ನವದೆಹಲಿ, ಜೂ.10– ಹನ್ನೆರಡು ವರ್ಷಗಳ ದಾಖಲೆಯ ಆಡಳಿತ ಪೂರೈಸಿ ಮುನ್ನಡೆಯುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ಅಭಿನಂದಿಸಿದರು. ನವದೆಹಲಿಯಲ್ಲಿ ಬುಧವಾರ ನಡೆದ ಎನ್.ಡಿ.ಎ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳ ಸಮಾವೇಶದಲ್ಲಿ ಕೇಂದ್ರ ■10ನೇ ಪುಟಕ್ಕೆ

ದಾಖಲೆ ಕನಸು ಕಂಡಿರಲಿಲ್ಲ...

ಎನ್‌ಡಿಎ ಸಭೆಯಲ್ಲಿ ಭಾವುಕರಾದ ಪ್ರಧಾನಿ ಮೋದಿ

ನವದೆಹಲಿ, ಜೂ.10– ಅತೀ ದೀರ್ಘಾವಧಿಗೆ ಪ್ರಧಾನಿಯಾಗಿ ಅಧಿಕಾರ ನಡೆಸಿದ ಹೆಗ್ಗಳಿಕೆಗೆ ಪಾತ್ರರಾಗಿರುವ ನರೇಂದ್ರ ಮೋದಿ ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಮುರಿದಿದ್ದಾರೆ. ಈ ಸಂದರ್ಭವನ್ನು ಆಚರಿಸಲು ದೆಹಲಿಯ ಭಾರತ್ ಮಂಟಪದಲ್ಲಿ ಎನ್‌ಡಿಎ ನಾಯಕರ ಸಮಾವೇಶವನ್ನು ಆಯೋಜಿಸಲಾಗಿತ್ತು. ಈ ಸಮಾವೇಶದಲ್ಲಿ ಎನ್‌ಡಿಎ ಮೈತ್ರಿಕೂಟದ ಎಲ್ಲಾ ನಾಯಕರಲ್ಲದೆ, ಎನ್‌ಡಿಎ ಆಡಳಿತವಿರುವ ಎಲ್ಲಾ 22 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಕೂಡ ಉಪಸ್ಥಿತರಿದ್ದರು.

ಈ ಸಮಾವೇಶದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ನಾನು ಮುಂದೊಂದು ದಿನ ಈ ದಾಖಲೆ ನಿರ್ಮಿಸುತ್ತೇನೆಂದು ಕನಸಿನಲ್ಲೂ ಅಂದುಕೊಂಡಿರಲಿಲ್ಲ. 12 ವರ್ಷ ಭಾರತಮಾತೆಯ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದ್ದು ದೇವರು ನನಗೆ ಕಲ್ಪಿಸಿಕೊಟ್ಟ ಅವಕಾಶ ಎಂದಿದ್ದಾರೆ.

ನಾಗರಿಕರ ಸಂಕಲ್ಪ: ಎನ್‌ಡಿಎ ನಾಯಕರ ಸಭೆಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ದೇಶದ ಜನತೆ ಈಗ ರಾಜಕೀಯ ಸ್ಥಿರತೆಯ ಪ್ರಾಮುಖ್ಯತೆಯನ್ನು ಮತ್ತು ಸ್ಥಿರ ಸರ್ಕಾರದ ನಿರ್ಣಾಯಕ ನಿರ್ಧಾರಗಳ ಮಹತ್ವ ವನ್ನು ಅರ್ಥಮಾಡಿಕೊಂಡಿದ್ದಾರೆ ಎಂದು ಹೇಳಿದರು. 'ವಿಕಸಿತ ಭಾರತ'ದ ಕನಸು ಯಾವುದೇ ಒಬ್ಬ ವ್ಯಕ್ತಿ ಅಥವಾ ಪಕ್ಷಕ್ಕೆ ಸೇರಿದ್ದಲ್ಲ, ಬದಲಿಗೆ ಅದು ದೇಶದ ಪ್ರತಿಯೊಬ್ಬ ನಾಗರಿಕನ ಸಂಕಲ್ಪವಾಗಿದೆ. ನನಗೆ ಜನರೇ ಜನಾರ್ದನ ಎಂದರು.



ಪ್ರಧಾನಿ ನರೇಂದ್ರ ಮೋದಿ

ರಾಷ್ಟ್ರ ಮಟ್ಟದಲ್ಲಿ ರಾಜಕೀಯ ಸ್ಥಿರತೆಯ ಪ್ರಾಮುಖ್ಯತೆಯನ್ನು ದೇಶದ ಜನತೆ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಅವರ ಪ್ರಬುದ್ಧತೆಯಿಂದಾಗಿಯೇ ನನಗೆ ಇಷ್ಟು ಸುದೀರ್ಘ ಕಾಲ ಸೇವೆ ಸಲ್ಲಿಸುವ ಅವಕಾಶ ಸಿಕ್ಕಿದೆ ಎಂದು ಪ್ರಧಾನಿ ಮೋದಿ ಹೇಳಿದರು. ■10ನೇ ಪುಟಕ್ಕೆ

ಜನರ ವಿಶ್ವಾಸಕ್ಕೆ ಸಿಕ್ಕ ಗೌರವ



ಪ್ರಧಾನಿ ಮೋದಿಯವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಭಿನಂದನೆ ಸಲ್ಲಿಸಿದ್ದು, ಇದು ಕೇವಲ ವರ್ಷಗಳ ಲೆಕ್ಕವಲ್ಲ, ಜನರು ಪದೇಪದೆ ನಿಮ್ಮ ನಾಯಕತ್ವದ ಮೇಲೆ ಇಟ್ಟ ವಿಶ್ವಾಸಕ್ಕೆ ಸಿಕ್ಕ ಗೌರವ ಎಂದು ಶ್ಲಾಘಿಸಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಕಿರಣ್
ನಿಧನ: 10-06-2026

ಶ್ರೀಯುತ ಕಿರಣ್.ಆರ್

ಅಧ್ಯಕ್ಷರು: ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಕನ್ಸ್ಯೂಮರ್ ಕೋ ಆಪರೇಟಿವ್ ಸೊಸೈಟಿ, ಕಾಂಗ್ರೆಸ್ ಯುವ ಮುಖಂಡರು ಹಾಗೂ ನ್ಯೂ ಆರ್. ಆರ್. ಎಂಟರ್‌ಪ್ರೈಸಸ್ ಮಾಲೀಕರಾದ ಇವರು ದಿನಾಂಕ 10-06-2026 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯ ಸಂಸ್ಕಾರವನ್ನು ಕೆ. ಆರ್. ಮಿಲ್ ಕಾಲೋನಿಯ ರುದ್ರಭೂಮಿಯಲ್ಲಿ ಇಂದು ದಿನಾಂಕ: 11-06-2026 ಗುರುವಾರ ಮಧ್ಯಾಹ್ನ 12:00 ಘಂಟೆಗೆ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ.. ನಾನೆಲ್ಲಾದ್ರು ನಿಮ್ಮನ್ನು ಬಿಟ್ಟು ಹೋದ್ರೆ ಏನ್ ಮಾಡ್ತೀರ?
ಗಂಡ : ಹಾಗೇನಾದ್ರು ಆದ್ರೆ ಪೇಪರ್ ಮತ್ತು ಟಿವಿನಲ್ಲಿ ಹಾಕ್ತೀನಿ.
ಹೆಂಡತಿ : ಏನಂತ ಹಾಕ್ತೀರಾ?
ಗಂಡ : ನೀನು ಎಲ್ಲೇ ಇರು, ಹೇಗೆ ಇರು, ಅಲ್ಲೇ ಚೆನ್ನಾಗಿರು!!!

ಮೈಸೂರು ಮಿತ್ರ
ಗುರುವಾರ, ಜೂನ್ 11, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒತ್ತಾಯದಿಂದ ಒಟ್ಟಿಗೆ ಇರೋದಕ್ಕಿಂತ, ಒಂಟಿಯಾಗಿ ಇರೋದೆ ಒಳ್ಳೆಯದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಧೈರ್ಯವಿದ್ದವನಿಗೆ ದೈವವೂ ಅನುಕೂಲ.

ನಿಮ್ಮ ಪತ್ರಗಳು

ಅದೃಷ್ಟದ ಆಟ..!

ಮಾನ್ಯರೆ,

ಕರ್ನಾಟಕದಲ್ಲಿ ಈಗ ಅದೇ ಪಕ್ಷದ ಹೊಸ ಸರ್ಕಾರ ಅಧಿಕಾರಕ್ಕೆ ಬಂದಿದೆ. ಒಂದು ರೀತಿಯಲ್ಲಿ ಇದನ್ನು ಹೊಸ ಬಾಟಲಿ, ಹಳೇ ಮದ್ಯ ಎಂತಲೋ ಅಥವಾ ಹೊಸ ಅಂಗಡಿ ಅದೇ ಬ್ರಾಂಡ್‌ಗಳ ಮದ್ಯ, ಪಾನೀಯಗಳು ಎನ್ನಬಹುದೇನೋ.

ಸುಮಾರು ಅರ್ಧ ಭರ್ತಿಯಾಗಿರುವ ಸರ್ಕಾರದ ಮಂತ್ರಿಗಳು, ನನಗೆ ಬೆಂಗಳೂರು ನಗರಾಭಿವೃದ್ಧಿ ಖಾತೆಯೇ ಬೇಕಾಗಿತ್ತು ಎಂದು ಜಲ ಸಂಪನ್ಮೂಲ ಪಡೆದವರು ರಾಜೀನಾಮೆ ಕೊಟ್ಟಿದ್ದರು. ಏಕೆಂದರೆ ಈ ಬೆಂಗಳೂರು ನಗರಾಭಿವೃದ್ಧಿಗೆ ವಾರ್ಷಿಕ ದೊರೆಯುವುದು 7 ಸಾವಿರ ಕೋಟಿ ರೂ.ಗೂ ಅಧಿಕ ಹಣವಂತೆ. ಆದರೆ, ಈ ಬೆಂಗಳೂರು ನಗರಾಭಿವೃದ್ಧಿ ಖಾತೆ ಪಡೆದವರಿಗೆ ಸಂತೋಷವಿಲ್ಲವಂತೆ. ಆಶ್ಚರ್ಯ! ಅದೂ ಸಂಪುಟದಲ್ಲಿ ಪ್ರಾಮಾಣಿಕ ಸಚಿವ ಎಂದು ಹೆಸರಿಸಲ್ಪಟ್ಟವರು. ಇಷ್ಟೊಂದು ದೊಡ್ಡ ಮೊತ್ತದ ಖಾತೆಯಲ್ಲಿ ಭ್ರಷ್ಟಾಚಾರ ವಾಸನೆ ಬರುತ್ತದೆ ಎಂದು ಅವರು ಹೀಗೆ ಹೇಳಿದ್ದಾರೆ ಎಂದು ಯಾರಾದರೂ ತಿಳಿದರೆ ಅದು ತಪ್ಪು. ಏಕೆಂದರೆ ಅವರಿಗೆ ಈ ಖಾತೆ ಇಷ್ಟವಿಲ್ಲದ್ದಕ್ಕೆ ಕಾರಣವನ್ನು ಅವರು ಹೈಕಮಾಂಡ್‌ಗೂ ಮನವರಿಕೆ ಮಾಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಸುದ್ದಿಯ ಪ್ರಕಾರ ಬೆಂಗಳೂರು ನಗರಾಭಿವೃದ್ಧಿ ಖಾತೆಗೆ ಸಂಬಂಧಿಸಿದಂತೆ ಬಿಡಿಎ, ಮತ್ತು ಬಿಎಂಆರ್‌ಡಿಎಗಳನ್ನು ಮುಖ್ಯ ಮಂತ್ರಿಗಳು ತಮ್ಮ ಬಳಿಯೇ ಉಳಿಸಿಕೊಂಡಿದ್ದಾರಂತೆ. ಇಂತಹ ಹಣದ ಹೊಳೆ ಹರಿಯುವ ಖಾತೆಗಳನ್ನು ಮುಖ್ಯಮಂತ್ರಿಗಳು ತಮ್ಮ ಬಳಿಯೇ ಇಟ್ಟುಕೊಂಡಿರುವುದರಿಂದ ತನ್ನ ಖಾತೆ ಬಡವಾಯಿತು ಎನ್ನುವ ಚಿಂತೆ ಈ ಪ್ರಾಮಾಣಿಕ ಮಂತ್ರಿಗಳಿಗಂತೆ.

ಇನ್ನು ಮೂಡಾ ಹಗರಣದಲ್ಲಿ ತಮ್ಮ ಕುಟುಂಬದ್ದೇನು ತಪ್ಪಿಲ್ಲ. ತನಿಖೆ ತಮ್ಮಂತೆಯೇ ಆಗಿ ಆ 14 ಸೈಟುಗಳನ್ನೂ ನ್ಯಾಯಾಲಯದ ಮೂಲಕವೇ ವಾಪಸ್ ಪಡೆಯುತ್ತೇವೆ ಎಂದು ಹಿಂದೊಮ್ಮೆ ಮೈಸೂರಿನಲ್ಲಿ ಹೇಳಿದ್ದ ಯತೀಂದ್ರ ಸಿದ್ದರಾಮಯ್ಯನವರಿಗೇ ಈಗ ಮೈಸೂರು ಮಾತ್ರವಲ್ಲ ಇಡೀ ರಾಜ್ಯದ ನಗರಾಭಿವೃದ್ಧಿ ಖಾತೆಯೇ ದಕ್ಕಿದೆ. ಕೇಳಿ ಪಡೆದದ್ದೋ, ಕೇಳದೆ ಕೊಟ್ಟದ್ದೋ ಕಾಕತಾಳಿಯವೋ ಗೊತ್ತಿಲ್ಲ.

ಇನ್ನೊಬ್ಬರು ನನಗೆ 2013ರಲ್ಲೇ ಮುಖ್ಯ ಮಂತ್ರಿ ಸ್ಥಾನ ಸಿಗಬೇಕಿತ್ತು. 2018ರಲ್ಲೂ ತಪ್ಪಿತು. 2023ರಲ್ಲೂ ತಪ್ಪಿತು. ಇದೀಗ 2026ರಲ್ಲೂ ಕೈತಪ್ಪಿದೆ ಎಂದು ಕಣ್ಣೀರು ಹಾಕಿದ್ದಾರೆ. 2013ರಲ್ಲಿ ತಮ್ಮನ್ನು ಸೋಲಿಸಿದವರು ಯಾರು? 2018ರಲ್ಲಿ ಯಾರಿಂದ ಕೈತಪ್ಪಿತು? 2023ರಲ್ಲಿ ದಲಿತ ಸಿಎಂ ಮಾಡುವ ಅವಕಾಶವನ್ನು ತಮ್ಮ ಪಕ್ಷದ ಹೈ ಕಮಾಂಡ್ ಹೇಗೆ ಕೈ ಚೆಲ್ಲಿತು? ಎನ್ನುವುದು ಅವರಿಗೆ ತಿಳಿದ ಸಂಗತಿಯೇ. ಆಗ ಕೇಳಿ ಬಂದ ಎರಡೂವರೆ, ಎರಡೂವರೆ ವರ್ಷದ ಅಧಿಕಾರ ಹಂಚಿಕೆಯ ಒಪ್ಪಂದವನ್ನು ಯಾವುದೇ ಒಪ್ಪಂದವಾಗಿಲ್ಲ ಎಂದು ಇಲ್ಲಿಯವರೆಗೂ ವಾದಿಸುತ್ತಾ ಬಂದಿದ್ದರು. ಕೊನೆಗೂ ಒಪ್ಪಂದವಾಗಿತ್ತು ಎನ್ನುವುದು ಈ ಅಧಿಕಾರ ಹಸ್ತಾಂತರದಿಂದ ಸಾಬೀತಾಗಿದೆ. ಎಂದರೆ ಸಿಎಂ ಯಾರಾಗಬೇಕು ಎನ್ನುವುದು 3 ವರ್ಷದ ಹಿಂದೆಯೇ ನಿರ್ಧರಿತವಾಗಿತ್ತು.

ಇನ್ನೊಬ್ಬರು ತಮ್ಮ ವಿರುದ್ಧವೇ ಪ್ರಕರಣಗಳಿದ್ದರೂ ಗೃಹ ಖಾತೆಯಂತಹ ಪ್ರಮುಖ ಖಾತೆಯನ್ನು ಪಡೆದಿದ್ದರೆ. ನೂರು ವರ್ಷಗಳ ಇತಿಹಾಸವಿರುವ, ರಾಷ್ಟ್ರದ ಪಿಲ್ಲರ್‌ನಂತಿರುವ ಆರ್‌ಎಸ್‌ಎಸ್ ವಿರುದ್ಧ ಕಿಡಿಕಾರುವುದರಲ್ಲೇ ಮಗ್ನರಾಗಿರುವ ಅವರು ಇದೀಗ ಅಧಿಕಾರ ಸಿಕ್ಕಿರುವುದರಿಂದ ಆರ್‌ಎಸ್‌ಎಸ್ ನೋಂದಣಿ ಮಾಡಿಸುತ್ತೇನೆ ಎಂದು ಹಾರಾಡುತ್ತಿದ್ದಾರೆ. ನೋಂದಣಿ, ಮಾಡಿಕೊಳ್ಳುವುದು, ಮಾಡಿಕೊಳ್ಳದಿರುವುದು ಅದರ ಸ್ವಾತಂತ್ರ್ಯ. ಎಸ್‌ಡಿಪಿಐನಂತ ಮತೀಯ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳುವ ಬದಲು ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯವಾಗಿರುವ ಅರ್‌ಎಸ್‌ಎಸ್ ವಿರುದ್ಧ ಹರಿಹಾಯುತ್ತಿದ್ದಾರೆ. ನೋಡಬೇಕು ಗೃಹ ಖಾತೆಯ ಹಣೆ ಬರಹವನ್ನು. ಇನ್ನು ಉಳಿದಿರುವ 20 ಖಾತೆಗಳಿಗಾಗಿ, ನನಗೆ ಅನ್ಯಾಯ, ನಮ್ಮವರಿಗೆ ಅನ್ಯಾಯ ಎಂದು ಹೋರಾಟಗಳು ನಡೆಯುತ್ತಿವೆ. ಇನ್ನೂ ಯಾವ ಯಾವ ಪ್ರಹಸನ ನಡೆಯುತ್ತವೆ ಎನ್ನುವುದನ್ನು ನೋಡಬೇಕಿದೆ.

–ಮುಳ್ಳೂರು ಪ್ರಕಾಶ್,. ಕನಕದಾಸನಗರ, ಮೈಸೂರು.

ಸಾರ್ವಜನಿಕರು ತಮ್ಮ ಆಸ್ತಿಗಳ ಬಗ್ಗೆ ಎಚ್ಚರಿಕೆಯಿಂದಿರಲಿ

ಮಾನ್ಯರೆ,

ಇತ್ತೀಚೆಗೆ ಮಧ್ಯರಾತ್ರಿ 12 ಗಂಟೆಯ ಸುಮಾರಿಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಹಾಗೂ ಮಧ್ಯವರ್ತಿಗಳು ಮಧ್ಯರಾತ್ರಿಯ ಅಭಿವೃದ್ಧಿ ಕಾರ್ಯ ಮಾಡುತ್ತಿರುವುದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಪತ್ರಿಕೆಯ ವರದಿಗಾರರು ಮತ್ತು ಛಾಯಾಗ್ರಾಹಕರು, ತಮ್ಮ ಪ್ರಾಣದ ಹಂಗನ್ನು ತೊರೆದು ಸರಿರಾತ್ರಿಯಲ್ಲಿ ಪ್ರಾಧಿಕಾರಕ್ಕೆ ಹೋಗಿ ವರದಿ ಮಾಡಿರುವುದು ಅವರ ಧೈರ್ಯವನ್ನು ಮೆಚ್ಚಲೇಬೇಕು. ಪ್ರಾಧಿಕಾರದ ಕೆಲವು ಅಧಿಕಾರಿಗಳು ಹಗಲು ಹೊತ್ತಿನಲ್ಲೇ ಕಚೇರಿಯಲ್ಲಿ ಇರುವುದಿಲ್ಲ. ಇನ್ನೂ ರಾತ್ರಿ ವೇಳೆ ಅದು ಮಧ್ಯ ರಾತ್ರಿಯಲ್ಲಿ ಕೆಲಸ ಮಾಡಲು ಮುಂದಾಗಿರುವುದು ಸಾರ್ವಜನಿಕರಲ್ಲಿ ತೀವ್ರ ಅನುಮಾನ ಮೂಡಿಸುತ್ತಿದೆ. ಪ್ರಾಧಿಕಾರದ ಪ್ರಭಾರ ಆಯುಕ್ತ ರಕ್ಷಿತ್‌ರನ್ನು ದಕ್ಷ ಅಧಿಕಾರಿ ಎಂದೇ ಸಾರ್ವಜನಿಕರು ಹೇಳುತ್ತಿದ್ದರು. ಈಗ ಇವರ ಮೇಲೂ ಸಾರ್ವಜನಿಕರಿಗೆ ಅನುಮಾನ ಮೂಡುತ್ತಿದೆ. ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ, ಪ್ರಾಧಿಕಾರದಲ್ಲಿ ಏನೋ ಗೋಲ್‌ಮಾಲ್ ನಡೆಯುತ್ತಿದೆ ಎಂದು ಸಾರ್ವಜನಿಕರೇ ಮಾತಾಡಿಕೊಳ್ಳುವಂತಾಗಿದೆ. ಏನೇ ಆಗಲಿ ಸಾರ್ವಜನಿಕರು ತಮ್ಮ ಆಸ್ತಿಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ ಮೈಸೂರು

ಸುರ್ಜೇವಾಲ ಕ್ಷುಲ್ಲಕ ಹೇಳಿಕೆ ನೀಡದಿರಲಿ

ಮಾನ್ಯರೆ,

ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡರಿಗೆ ರಾಜ್ಯಸಭೆಗೆ ಮತ್ತೆ ಸ್ಪರ್ಧಿಸಲು ರಾಷ್ಟ್ರೀಯ ಬಿಜೆಪಿ ನಾಯಕರು ಅವಕಾಶ ನೀಡದ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ವ್ಯಕ್ತಪಡಿಸಿರುವ ಅಭಿಪ್ರಾಯ ಖಂಡನಾರ್ಹ. ದೇವೇಗೌಡರಿಗೆ ಟಿಕೆಟ್ ನೀಡದಿರುವುದರಿಂದ ಸುರ್ಜೇವಾಲರಿಗೆ ಏನು ನಷ್ಟ ಉಂಟಾಗಿದೆ. ದೇಶದ ಅತ್ಯುನ್ನತ ರಾಜಕೀಯ ಪದವಿಯಾದ ಪ್ರಧಾನ ಮಂತ್ರಿ ಹುದ್ದೆಯನ್ನು ದೇವೇಗೌಡರು 1996ರಲ್ಲೇ ಏರಿ ಆಗಿದೆ.

93ರ ಈ ಇಳಿವಯಸ್ಸಿನಲ್ಲಿ ಅವರು ರಾಜ್ಯಸಭೆ ಸೇರಿದಂತೆ ಯಾವುದೇ ಚುನಾವಣೆಗೂ ಸ್ಪರ್ಧಿಸದೇ ಇರುವುದು ಅವರ ಆರೋಗ್ಯ ದೃಷ್ಟಿಯಿಂದ ಒಳ್ಳೆಯದು. ರಾಜ್ಯ ಸಂಪುಟ ರಚನೆಯ ನಂತರ ಒಡೆದ ಮನೆಯಂತಾಗಿರುವ ರಾಜ್ಯ ಕಾಂಗ್ರೆಸ್ ಅನ್ನು ಸರಿಪಡಿಸುವುದರ ಬದಲು ಇಂತಹ ರಾಜಕೀಯ ಪ್ರೇರಿತ ಹಾಗೂ ಕ್ಷುಲ್ಲಕ ಹೇಳಿಕೆ ನೀಡುವುದನ್ನು ಸುರ್ಜೇವಾಲ ನಿಲ್ಲಿಸುವುದು ಒಳ್ಳೆಯದು.


–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.



ನಿವೇದಿತ ಹೆಚ್.
ಇಂಗ್ಲಿಷ್ ಉಪನ್ಯಾಸಕಿ
ಮಹಾರಾಜ ಕಾಲೇಜು
ಮೈಸೂರು.

ಮಂಥನ

ಇಂದಿರಾ: ಕನ್ನಡದ ಪರಿಪೂರ್ಣ ಕಥಾನಕ



"ಕೆರೂರು ವಾಸುದೇವಾಚಾರ್ಯರ ಇಂದಿರಾ ಕನ್ನಡದ ಮಹತ್ವ ಪೂರ್ಣ ಕಾದಂಬರಿ. ತಂತ್ರ-ಕುತಂತ್ರ, ಮುಗ್ಧತೆ, ಜೊತೆಗೆ ನವಿರಾದ ಪ್ರೇಮ, ಪ್ರಣಯ, ತುಂಟಾಟ, ರಮ್ಯ ನಿಸರ್ಗದ ವರ್ಣನೆ, ಹಾಸ್ಯ, ವಿರಹ, ವೈಚಾರಿಕತೆ, ರೋಚಕತೆ ಎಲ್ಲವೂ ಹದವಾಗಿ ಮಿಶ್ರಣ ಗೊಂಡ ಪರಿಪೂರ್ಣ ಕಥಾನಕ. ಪುರಾತನ ಶ್ರೀರಂಗ ಪಟ್ಟಣದಲ್ಲಿ ನಡೆಯುವ ಇಂದಿರಾ, ಇಂದಿನ ಕಾದಂಬರಿಗಳಿಗೆ ಮಾದರಿ. ಒಮ್ಮೆ ಓದಲೇಬೇಕಾದ ಕನ್ನಡದ ಮಹತ್ವದ ಕೃತಿ.



ಕೆರೂರು ವಾಸುದೇವಾಚಾರ್ಯ

ಕನ್ನಡದ ಮೊದಲ ಸಾಮಾಜಿಕ ಕಾದಂಬರಿ ಗುಲವಾಡಿ ವೆಂಕಟರಾಯರ ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವಷ್ಟೇ. ಆ ಪುಸ್ತಕದ ಹುಡುಕಾಟದಲ್ಲಿ ಇದ್ದಾಗ, ಒಂದು ಹಳೆಯ ಅಂದರೆ ಸೆಕೆಂಡ್ ಹ್ಯಾಂಡ್ ಪುಸ್ತಕ ಮಾರಾಟ ಮಳಿಗೆಯಲ್ಲಿ ಇಂದಿರಾ ಎಂಬ ಹೆಸರುಳ್ಳ ಪುಸ್ತಕ ನೋಡಿ ಆದ ಆನಂದ ಅಷ್ಟಿಷ್ಟಲ್ಲ. ಇನ್ನೆಲ್ಲಿ ಬೇರೆಯವರು ತೆಗೆದುಕೊಂಡುಬಿಡುತ್ತಾರೋ ಎಂದು ಬೇರೇನನ್ನೂ ಗಮನಿಸದೆ ಅದನ್ನು ಕೊಂಡುಬಿಟ್ಟಿದ್ದಾಯ್ತು.

ಮನೆಗೆ ಬಂದು ಕೂಲಂಕಷವಾಗಿ ನೋಡಿದ ಮೇಲೆ ತಿಳಿದದ್ದು, ಅದು ಗುಲವಾಡಿ ವೆಂಕಟರಾಯರ ಸದ್ಧರ್ಮ ವಿಜಯ ಅಥವಾ ಇಂದಿರಾಬಾಯಿ ಅಲ್ಲ, ಕೆರೂರು ವಾಸುದೇವಾಚಾರ್ಯರ ಇಂದಿರಾ ಎಂದು! ಸ್ವಲ್ಪ ಬೇಸರವೆನಿಸಿತಾದರೂ, ಸಾಮಾಜಿಕ ಕಾದಂಬರಿಗಳಿಗೆ ಅಸ್ಥಿಭಾರ ಹಾಕಿದವರಲ್ಲಿ ಕೆರೂರು ವಾಸುದೇವಾಚಾರ್ಯರೂ ಒಬ್ಬರು. ಕನ್ನಡ ಸಾಹಿತ್ಯಲೋಕದಲ್ಲಿ ಇಂದು ಕಾದಂಬರಿ ಒಂದು ಪ್ರಮುಖ ಸಾಹಿತ್ಯ ಪ್ರಕಾರವಾಗಿ ರೂಪುಗೊಂಡಿದೆಯೆಂದರೆ ಅದರಲ್ಲಿ ಕೆರೂರು ವಾಸುದೇವಾಚಾರ್ಯರ ಪಾತ್ರವೂ ಗಮನಾರ್ಹವಾದದ್ದು. ನಂತರ ಅತ್ಯಂತ ಕುತೂಹಲದಿಂದ ಪುಸ್ತಕ ಓದಿ ಮುಗಿಸಿದ್ದಾಗಿತ್ತು.

ಇದಕ್ಕೆಲ್ಲಾ ಆಗಲೇ 25 ವರ್ಷಗಳು ಕಳೆದಿವೆ. ಇತ್ತೀಚೆಗೆ ಪುಸ್ತಕಗಳನ್ನು ಜೋಡಿಸುವಾಗ ಮತ್ತೆ ಇಂದಿರೆ ಕಣ್ಣಿಗೆ ಬಿದ್ದಳು! ಈಗ ಮತ್ತೊಮ್ಮೆ ಓದಿದಮೇಲೆ ಈ ಕೃತಿಯ ಮಹತ್ವ ಎಂತಹುದು ಎಂದು ಅರಿವಾಯಿತು. ಎಂ.ವಿ ಇನಾಂದಾರರ ಸುದೀರ್ಘ ಮುನ್ನುಡಿಯೊಂದಿಗೆ 1984ರಲ್ಲಿ ಮರುಮುದ್ರಣಗೊಂಡಿರುವ ಈ ಪುಸ್ತಕ ರಚಿತವಾದದ್ದು 1908ರಲ್ಲಿ!

ಕೆರೂರು ವಾಸುದೇವಾಚಾರ್ಯರು ಜನಿಸಿದ್ದು ಈಗಿನ ಬಾಗಲಕೋಟೆಯಲ್ಲಿಯಾದರೂ, ಆ ಜಿಲ್ಲೆಯ ಕೆರೂರು ಗ್ರಾಮ ಅವರ ಮೂಲಸ್ಥಳ. ಅವರ ತಾತ ಯಲಗುರ್ದಾಚಾರ್ಯರು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಾಗಲಕೋಟೆಗೆ ಸ್ಥಳಾಂತರಗೊಂಡಿದ್ದರು. ಅವರ ಹಿರಿಯ ಮಗ ಶ್ರೀನಿವಾಸಾಚಾರ್ಯರ ಪುತ್ರರಾದ ವಾಸುದೇವಾಚಾರ್ಯರ ಪ್ರಾಥಮಿಕ ಶಿಕ್ಷಣ ಬಾಗಲಕೋಟೆಯಲ್ಲಿಯೇ ಆಯಿತಾದರೂ, ಮುಂದಿನ ಶಿಕ್ಷಣಕ್ಕಾಗಿ ಅವರು ಬೆಳಗಾವಿಗೆ ತೆರಳಿದರು. ನಂತರ ಪುಣೆಯಲ್ಲಿ ಎರಡು ವರ್ಷ ಕಾನೂನು ಅಭ್ಯಾಸವನ್ನು ಮಾಡಿ, ಕಾರಣಾಂತರಗಳಿಂದ ಅಲ್ಲಿಂದ ಬಾಗಲಕೋಟೆಗೇ ವಾಪಸ್ಸು ಬಂದು ಅಲ್ಲಿ ತಮ್ಮ ಕಾನೂನು ವಿದ್ಯಾಭ್ಯಾಸವನ್ನು ಮುಗಿಸಿ ವಕೀಲಿಕೆಯನ್ನು ಕೈಗೊಂಡರು.

ತಮ್ಮ ವೃತ್ತಿಯಲ್ಲಿ ಬಹಳಷ್ಟು ಯಶಸ್ಸು ಗಳಿಸಿದ ವಾಸುದೇವಾಚಾರ್ಯರು, ಸಾಹಿತ್ಯದ ಮೇಲೆ ಅಪರಿಮಿತವಾದ ಪ್ರೇಮವನ್ನು ತಳೆದು, ವಕೀಲಿಕೆಯನ್ನು ತೊರೆದು ಸಾಹಿತ್ಯಕ್ಕಾಗಿಯೇ ತಮ್ಮನ್ನು ತಾವು ಮುಡಿಪಿಟ್ಟುಕೊಂಡರು.

ಬಾಗಲಕೋಟೆಯಲ್ಲಿದ್ದಾಗಲೇ ತಮ್ಮ ಪ್ರಥಮ ಕೃತಿ ಇಂದಿರಾ ಕಾದಂಬರಿ ರಚಿಸಿದ ವಾಸುದೇವಾಚಾರ್ಯರು. ನಂತರ ನಾಟಕಗಳನ್ನೂ ರಚಿಸಿದರು. ಪತ್ರಿಕೋದ್ಯಮ ಕೈಗೊಂಡು, ಸಚಿತ್ರಭಾರತವೆಂಬ ಸಾಹಿತ್ಯಕ ಮಾಸಪತ್ರಿಕೆ ಸ್ಥಾಪಿಸಿದರು. ನಂತರ ಶುಭೋದಯ ಎಂಬ ಸಾಮಾಜಿಕ ಮತ್ತು ರಾಜಕೀಯ ವಿಷಯಗಳಿಗೆ ಮೀಸಲಾದ ವಾರಪತ್ರಿಕೆ ಆರಂಭಿಸಿ ಯಶಸ್ವಿಯಾಗಿ ಬಹುವರ್ಷಗಳ ಕಾಲ ನಡೆಸಿದರು. ಲೋಕಮಾನ್ಯ ಟಿಳಕರವರ ಚರಿತ್ರಸಾರವು ಎಂಬ ಜೀವನಚರಿತ್ರೆಯನ್ನೂ ವಾಸುದೇವಾಚಾರ್ಯರು ರಚಿಸಿದ್ದಾರೆ.

ಇಂದಿರಾ ಕಾದಂಬರಿಯ ನಂತರ, ಯವನಸೈರಂಧ್ರಿ ಎಂಬ ಅನುವಾದಿತ ಕಾದಂಬರಿ, ಭ್ರಾತೃಘಾತಕನಾದ ಔರಂಗಜೇಬ ಮತ್ತು ಯದು ಮಹಾರಾಜ ಎಂಬ ಐತಿಹಾಸಿಕ ಕಾದಂಬರಿಗಳನ್ನು ರಚಿಸಿದರು.

ನಳದಮಯಂತಿ ಮತ್ತು ಪುರಂದರದಾಸ ಮತ್ತು ರುಕ್ಮಿಣೀಹರಣ ಎಂಬೆರಡು ಅಪೂರ್ಣ ನಾಟಕಗಳು ವಾಸುದೇವಾಚಾರ್ಯರ ಲೇಖನಿಯಿಂದ ಮೂಡಿಬಂದವು. ಅಲ್ಲದೆ, ಷೇಕ್ಸ್ಪಿಯರನ Midsummer Nights Dream, Merchant of Venice ನಾಟಕಗಳನ್ನು ವಸಂತಯಾಮಿನೀ ಸ್ವಪ್ನ ಚಮತ್ಕಾರ ಮತ್ತು ಸುರತನಗರದ ಶ್ರೇಷ್ಠಿ ಎಂಬ ಹೆಸರಿನಿಂದ ಅನುವಾದಿಸಿದ್ದಾರೆ. ಗೋಲ್ಡ್‌ಸ್ಮಿತ್‌ನ She Stoops to Conquer ಅನ್ನು, ಪತೀವಶೀಕರಣ ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಜೊತೆಗೆ ಮೂರು ಪುಸ್ತಕಗಳಲ್ಲಿ ಇವರ ಸಣ್ಣಕತೆಗಳು ಸಂಗ್ರಹಗೊಂಡಿವೆ.

1899ರಲ್ಲಿ ಗುಲವಾಡಿ ಅವರು ಇಂದಿರಾಬಾಯಿ ಕಾದಂಬರಿಯನ್ನು ರಚಿಸಿದ್ದು. ವಾಸುದೇವಾಚಾರ್ಯರು ಇಂದಿರಾ ಬರೆದದ್ದು 1908ರಲ್ಲಿ. ಇಂದಿರಾಬಾಯಿ ಕಾದಂಬರಿಯಲ್ಲಿ ಇಂದಿರೆ ಬಾಲ ವಿಧವೆ. ಚಿಕ್ಕವಯಸ್ಸಿನಲ್ಲಿಯೇ, ವೇಶ್ಯೆಯರ ಕೆಟ್ಟ ಸಹವಾಸಕ್ಕೆ ಬಿದ್ದ ಆಕೆಯ ಪತಿ ಇವಳನ್ನು ಬಾಲವಿಧವೆಯನ್ನಾಗಿಸುತ್ತಾನೆ. ಸ್ವತಃ ತಂದೆ ತಾಯಿಯೇ ಮಗಳನ್ನು ಆಧ್ಯಾತ್ಮಿಕ ದಾರಿಯಲ್ಲಿ ಕೊಂಡೊಯ್ಯುವುದೊಂದೇ ಮಾರ್ಗ ಎಂದು ನಂಬಿ ಅದರಂತೆ ಅವಳನ್ನು ತಯಾರು ಮಾಡುತ್ತಿರುವಾಗ, ಅಲ್ಲಿಂದ ಹೊರಬಂದು, ಅನೇಕ ಕಷ್ಟಗಳನ್ನು ಸಹಿಸಿ ಮರುವಿವಾಹವಾಗುವ ಇಂದಿರೆಯ ಸಾಹಸಮಯ ಕತೆಯನ್ನು ಆ ಕಾದಂಬರಿ ಹೇಳುತ್ತದೆ.

ವಾಸುದೇವಾಚಾರ್ಯರ ಇಂದಿರಾ, ಇನಂದಾರರು ಹೇಳುವ ಹಾಗೆ ಒಂದು ಪ್ರಣಯ ಕಾದಂಬರಿ. ಸುಶಿಕ್ಷಿತಳಾದ ಸುಂದರಿ ಕುಲೀನೆ ಶ್ರೀಮಂತಳಾದ ಇಂದಿರೆಯ ಮೇಲೆ ನಾಯಕ ರಮಾಕಾಂತ ದೇಸಾಯಿಗೆ ಪ್ರೇಮ ಉಂಟಾಗುತ್ತದೆ. ಇಂದಿರೆಯ ತಂದೆ ಜಯರಾಯನಿಗೆ ರಾವ ಬಹದ್ದೂರ್ ಬಿರುದಾಂಕಿತ ಕುಟುಂಬಕ್ಕೆ ಸೇರಿದ ಶ್ರೀಕಂಠನಿಗೆ ಮಗಳನ್ನು ಧಾರೆಯೆರೆದು ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಿಸಿಕೊಂಡು, ತಾನೂ ರಾವಬಹದ್ದೂರನಾಗುವ ಆಕಾಂಕ್ಷೆ. ಆಕಸ್ಮಿಕವಾಗಿ ಇಂದಿರೆ ರಮಾಕಾಂತರ ಭೇಟಿ ಶ್ರೀರಂಗಪಟ್ಟಣದಲ್ಲಾಗುತ್ತೆ. ಇಬ್ಬರಿಗೂ ಆಪ್ತೆಯಾದ ದೇವಯಾನಿ ಮೂಲಕ ಸ್ನೇಹವುಂಟಾಗಿ ಇಬ್ಬರಿಗೂ ಪರಸ್ಪರರ ಮೇಲೆ ಗೌರವಾದರಗಳುಂಟಾಗುತ್ತದೆ. ತನ್ನ ಮಹಾತ್ವಾಕಾಂಕ್ಷೆಗೆ ಇಂದಿರೆ ರಮಾಕಾಂತರ ವಿವಾಹ ಅಡ್ಡಿಯನ್ನೊಡ್ಡುತ್ತದೆ ಎಂದು, ಜಯರಾಯ ರಮಾಕಾಂತ ವಿಧವೆಯೊಬ್ಬಳನ್ನು ಪುನರ್ವಿವಾಹವಾಗಲಿದ್ದಾನೆಂದು ಮಗಳಿಗೆ ನಂಬಿಸುತ್ತಾನೆ ಮಾತ್ರವಲ್ಲದೆ, ಆ ಸುದ್ದಿಯನ್ನು ಹಬ್ಬಿಸುತ್ತಾನೆ.

ದೇವಯಾನಿಯೂ ಬಾಲವಿಧವೆಯೇ. ರಮಾಕಾಂತನ ತಂದೆ ಕಮಲಾಕಾಂತ ಮತ್ತು ಇಂದಿರೆಯ ತಂದೆ ಜಯರಾಯ ಸ್ನೇಹಿತರು. ಇಬ್ಬರಿಗೂ ದೇವಯಾನಿಯನ್ನು ಮದುವೆಯಾಗುವ ಇಚ್ಛೆಯಿರುತ್ತದೆ. ಆದರೆ ಕಮಲಾಕಾಂತ ಮತ್ತು ದೇವಯಾನಿ ಒಬ್ಬರನ್ನೊಬ್ಬರು ಮೌನವಾಗಿ ಆರಾಧಿಸುತ್ತಿರುತ್ತಾರೆ. ಜಯರಾಯ ಕಮಲಾಕಾಂತನಿಗೆ ಹೈದರಾಬಾದಿನಲ್ಲಿ ಮದುವೆಯೆಂದು ದೇವಯಾನಿಗೆ ತಿಳಿಸಿ ಅವಳು ಕಮಲಾಕಾಂತನನ್ನು ಅನಾದರಿಸುವಂತೆ ಮಾಡುತ್ತಾನೆ. ಅದರಿಂದ ಕಮಲಾಕಾಂತ ಬೇಸತ್ತು ತನ್ನ ಊರಿಗೆ ಹಿಂತಿರುಗಿ ಬೇರೆ ಮದುವೆಯಾಗುತ್ತಾನೆ. ಇತ್ತ ಜಯರಾಯನ ಕುತಂತ್ರ ತಿಳಿದ ದೇವಯಾನಿ ಪಶ್ಚಾತ್ತಾಪಪಟ್ಟು ಅವಿವಾಹಿತೆಯಾಗಿ ವೈಧವ್ಯವನ್ನೇ ಅಪ್ಪಿಕೊಳ್ಳುತ್ತಾಳೆ. ನಿರಾಶನಾದ ಜಯರಾಯ ಬೇರೊಂದು ಮದುವೆಯಾಗುತ್ತಾನೆ. ವಿಧಿ ಈಗ ಇವರಿಬ್ಬರ ಮಕ್ಕಳನ್ನು ಮುನ್ನೆಲೆಗೆ ತಂದು ನಿಲಿಸಿದೆ!

ಬೆಂಗಳೂರಿನಲ್ಲಿ ವಾಸವಿರುವ ರಮಾಕಾಂತನಿಗೆ ಭಾಷ್ಕಳಪಂತ ರಂಗರಾಯರೆಂಬ ಸ್ನೇಹಿತರಿರುತ್ತಾರೆ. ಭಾಷ್ಕಳ ಪಂತನ ಅಕ್ಕ ರಾಧಾಬಾಯಿ ಮೂರು ಮದುವೆಯಾಗಿರುತ್ತಾಳೆ! ಮೂರನೆಯ ಪತಿ ಕ್ರೈಸ್ತನಾದ್ದರಿಂದ ತಾನು ಮತಾಂತರಗೊಂಡು ಅನುಯಾಯಿಯಾಗಿರುತ್ತಾಳೆ. ಹಲವಾರು ಸಂಘಗಳನ್ನು ರಚಿಸಿ, ಮಹಿಳಾ ಉದ್ಧಾರ, ವಿಧವಾವಿವಾಹಗಳಿಗೆ ಹೋರಾಡುತ್ತಿರುತ್ತಾಳೆ. ಅವಳ ಶಿಷ್ಯೆ ವಿಧವೆ ಮಗಳೂರ ಕಮಲಾ ಕೂಡಾ ಅವಳಂತೆಯೇ, ಅವಳನ್ನು ರಮಾಕಾಂತನಿಗೆ ಗಂಟುಹಾಕ ಬೇಕೆಂಬುದು ಅವಳ ಆಶಯ.

ನಂತರ ನಡೆವ ಸಾಕಷ್ಟು ಘಟನಾವಳಿಗಳಲ್ಲಿ, ಇಂದಿರೆಗೆ ತನ್ನ ತಂದೆಯ ಕಾರಸ್ಥಾನದ ಅರಿವಾಗಿ, ರಮಾಕಾಂತ ತನ್ನನ್ನು ಪ್ರೀತಿಸುತ್ತಿರುವ ವಿಷಯವೂ ತಿಳಿದೂ, ಶ್ರೀಕಂಠನೊಂದಿಗಿನ ಮದುವೆಯನ್ನು ಇಂದಿರೆ ಮುರಿಯುತ್ತಾಳೆ. ಜಯರಾಯನಿಗೂ ಜ್ಞಾನೋದಯವಾಗಿ ರಮಾಕಾಂತನೊಂದಿಗೆ ಮದುವೆ ಮಾಡಿಕೊಡುತ್ತಾನೆ. ಈ ಮಧ್ಯೆ ರಮಾಕಾಂತ ಪ್ರವಾಹದಲ್ಲಿ ಮುಳುಗಿ ಸತ್ತನೆಂಬ ಸುದ್ಧಿಯೂ ಎಲ್ಲರನ್ನೂ ಕಂಗೆಡಿಸುತ್ತದೆ. ಮದುವೆಗೆ ರಮಾಕಾಂತನ ಚಿಕ್ಕಪ್ಪ ಶ್ರೀಕಾಂತ ದೇಸಾಯಿ ಬಂದಾಗ, ರಮಾಕಾಂತ ಜಹಗೀರುದಾರರ ವಂಶಕ್ಕೆ ಸೇರಿದವನೆಂದೂ, ಅವನೇ ವಾರಸುದಾರ ಎಂದು ತಿಳಿದು ಸಮಾಧಾನಿಯಾಗುತ್ತಾನೆ. ಇತ್ತ ರಾಧಾಬಾಯಿ ತನ್ನ ತಮ್ಮನಿಗೇ ಕಮಲೆಯನ್ನು ತಂದುಕೊಳ್ಳುತ್ತಾಳೆ.

ಇದು ಕಾದಂಬರಿಯ ಸ್ಥೂಲ ಕತೆ. ಸಾಮಾಜಿಕ ಕತೆಯನ್ನುಳ್ಳ ಈ ಕಾದಂಬರಿ, ಅಂದಿನ ಸಮಾಜದ ಆಗುಹೋಗುಗಳನ್ನು ಓದುಗರಿಗೆ ಪರಿಚಯ ಮಾಡಿಸುತ್ತದೆ. ಆಗಿನ್ನೂ ಸಮಾಜ ನಿಧಾನವಾಗಿ ಸ್ತ್ರೀ ಶಿಕ್ಷಣ, ಆಧುನಿಕತೆ, ಉದಾರ ವಿಚಾರಗಳು, ವಿಧವಾ ಪುನರ್ವಿವಾಹಗಳಂತಹಾ ವಿಚಾರಗಳಿಗೆ ತೆರೆದುಕೊಳ್ಳುತ್ತಿತ್ತು. ಬ್ರಿಟಿಷರ ಪ್ರಭಾವದಿಂದ ಭಾರತೀಯರು ಆಧುನಿಕರಾಗುತ್ತಿದ್ದರೂ, ದ್ವಂದ್ವ ಸಾಕಷ್ಟಿತ್ತು. ಬ್ರಿಟಿಷರು ಭಾರತೀಯವಾದುದೆಲ್ಲವನ್ನೂ ಹೀಯಾಳಿಸಿ ಮತಾಂತರಕ್ಕೆ ಯತ್ನ ಮಾಡುತ್ತಿದ್ದರಿಂದ ಯಾವುದು ಸರಿ ಯಾವುದು ತಪ್ಪು ಎಂಬ ಜಿಜ್ಞಾಸೆ ಎಲ್ಲರನ್ನೂ ಕಾಡುತ್ತಿತ್ತು. ಆ ಎಲ್ಲ ವಿಚಾರಗಳನ್ನೂ ಕಾದಂಬರಿ ತನ್ನ ಪಾತ್ರಗಳ ಮೂಲಕ ಓದುಗರ ಮುಂದಿಡುತ್ತದೆ. ಈ ದ್ವಂದ್ವಗಳಿಗೆ ಸಿಲುಕಿ, ತಾವು ನಂಬಿರುವ ಆದರ್ಶದ ಬಗ್ಗೆ ಸ್ಪಷ್ಟತೆಯಿಲ್ಲದೆ ರಾಧಾಬಾಯಿ, ಕಮಲೆ ಮತ್ತು ನಟೇಶರಂತಹವರು ಜೀವನವನ್ನು ತಪ್ಪಾಗಿ ರೂಪಿಸಿಕೊಂಡು ದುಃಖಿತರಾಗುವುದನ್ನು ಕಾದಂಬರಿ ವಿಷಾದದಿಂದ ಹೇಳುತ್ತದೆ. ಈ ಅತ್ಯಾಧುನಿಕ ಕಾಲದಲ್ಲಿ ನಿಂತು ಆ ಕಾಲಘಟ್ಟದ ವಿಚಾರಗಳನ್ನು ಓದುವುದೇ ಸ್ವಾರಸ್ಯಕರ. ವಿಷಾದವೆಂದರೆ, ನಮ್ಮ ಇರಸರಿಕೆಗಳು ಆಧುನಿಕವಾಗಿವೆಯೇ ಹೊರತು, ನಮ್ಮ ಮನಃಸ್ಥಿತಿಗಳು, ವಿಚಾರಗಳು, ವಿಚಾರ ದಾರಿದ್ರ್ಯ ಹೆಚ್ಚೇನು ಬದಲಾಗಿಲ್ಲ!

ಕಾದಂಬರಿಯಲ್ಲಿ ಕನ್ನಡ ಭಾಷೆಯ ಸ್ಥಿತಿಗತಿಯ ಬಗ್ಗೆ ಒಂದು ಚರ್ಚೆ ನಡೆಯುತ್ತದೆ. ವಾಸುದೇವಾಚಾರ್ಯರು ಬೆಳಗಾವಿ ಪುಣೆಗಳಲ್ಲಿ ಇದ್ದಿದ್ದರಿಂದ ಕನ್ನಡ ಮರಾಠಿಗಳ ನಡುವಿನ ಘರ್ಷಣೆಗಳನ್ನು ನೋಡಿದ್ದವರು. ಹಾಗಾಗಿಯೇ ಇಲ್ಲಿ ಭಾಷ್ಕಳಪಂತ ಮತ್ತು ರಾಧಾಬಾಯಿ ಮರಾಠಿಯ ಪರವಾಗಿ ವಾದಿಸಿ ಕನ್ನಡವನ್ನು 'ಕಾಡುಭಾಷೆ' ಎಂದು ಕರೆದರೆ, ದೇವಯಾನಿ ಕನ್ನಡ ಸಾಹಿತ್ಯದ ಚರಿತ್ರೆ ಮತ್ತು ಮಹತ್ಕೃತಿಗಳನ್ನು ಉದಾಹರಿಸಿ ಕನ್ನಡದ ಹಿರಿಮೆಯನ್ನು ಸಾರುತ್ತಾಳೆ. ಇಂದುಹೇಗೆ ಕಂಗ್ಲಿಷ್ ಅನ್ನಾದರೂ ಕಲಿತು ಕನ್ನಡ ಉಳಿಯುವಂತೆ ನೋಡಿಕೊಳ್ಳಬೇಕು ಎನ್ನುತ್ತೇವೆಯೋ, ಹಾಗೆಯೇ ಅಲ್ಲಿ, ಆಡುಭಾಷೆಯ ಕನ್ನಡ ವನ್ನು ಸಾಹಿತ್ಯದಲ್ಲಿ ಬಳಸಿದರೆ ಕನ್ನಡದ ಬಳಕೆ ಮತ್ತು ತಲುಪುವಿಕೆ ಅಭಿವೃದ್ಧಿಸುತ್ತದೆ ಎಂದು ಚರ್ಚೆ ನಡೆಯುತ್ತದೆ.

ಒಂದು ಆಶ್ಚರ್ಯ ಎನಿಸುವುದು ಏನೆಂದರೆ, ಅಂದಿನ ಪುರುಷಪ್ರಧಾನ ಸಮಾಜದಲ್ಲಿ ಮಹಿಳಾ ಪಾತ್ರದ ಹೆಸರನ್ನು ಕಾದಂಬರಿಯ ಶೀರ್ಷಿಕೆಯಾಗಿ ಕೊಟ್ಟಿರುವುದು! ಗುಲವಾಡಿ ವೆಂಕಟರಾಯರೂ ಹಾಗೆಯೇ ಮಾಡಿದ್ದಾರೆ. ಎಂ ಎಸ್ ಪುಟ್ಟಣ್ಣ, ಗಳಗನಾಥರು, ಬೋಳಾರ ಬಾಬುರಾಯರು, ಇನ್ನೂ ಮುಂತಾದವರು ಹೀಗೆಯೇ ನಾಯಕಿಯ ಹೆಸರನ್ನು ಇಟ್ಟಿರುವುದು ಹೆಮ್ಮೆಯೆನಿಸುತ್ತದೆ.

ಮತ್ತೆ ಕಾದಂಬರಿಗೆ ಬರುವುದಾದರೆ ತಂದೆಯನ್ನು ಅತೀವವಾಗಿ ಗೌರವಿಸುವ ಇಂದಿರೆ ಮೊದಲಿಗೆ ಶ್ರೀಕಂಠನೊಂದಿಗೆ ಮದುವೆಗೆ ಒಪ್ಪಿಗೆ ಸೂಚಿಸಿದರೂ, ನಂತರ ಇಬ್ಬರ ಗುಣಾವಗುಣಗಳನ್ನು ಮನನ ಮಾಡಿಕೊಂಡು ಧೈರ್ಯವಾಗಿ ಶ್ರೀಕಂಠನೊಂದಿಗೆ ಮದುವೆ ಒಲ್ಲೆನೆಂದು ನೇರ ಆತನಿಗೇ ಪತ್ರ ಬರೆಯುತ್ತಾಳೆ.ಇಂತಹಾ ಒಂದು ದಿಟ್ಟ ಸ್ತ್ರೀ ಪಾತ್ರ ಸೃಷ್ಟಿಸಿದ್ದಾರೆ ಆ ಕಾಲದಲ್ಲಿಯೇ ಎನ್ನುವುದೇ ಅಚ್ಚರಿ. ಎಂಜಿನಿಯರ್ ಆಗಿರುವ ನಾಯಕ ರಮಾಕಾಂತ ಅತ್ಯಂತ ಶಿಷ್ಟ. ವರ್ಚಸ್ವಿಯಾದ ತನ್ನ ತಂದೆ ಕಮಲಾಕಾಂತನ ಗುಣಗಳನ್ನೇ ಹೊತ್ತಿರುವ ಇವನಿಗೆ ತಂದೆಯ ಅನುರಾಗಾಕಾಂಕ್ಷಿ ದೇವಯಾನಿ ಉತ್ತಮ ಮಾರ್ಗದರ್ಶನ ನೀಡಿ ಅವನ್ನು ನೆಲೆ ನಿಲ್ಲಿಸುತ್ತಾಳೆ. ಅಂದಹಾಗೆ ಅವನು ಸೇದುವ ಸಿಗರೇಟ್ ನ ಹೆಸರು ಶಾಂತನು?!

ಇತ್ತ ಮತ್ತೊಬ್ಬ ಸ್ತ್ರೀ ಪಾತ್ರ ರಾಧಾಬಾಯಿಪಂಡಿತೆ, ಗೊಂದಲಗಳಲ್ಲಿ ಮುಳುಗಿದ್ದಾಳೆ. ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಲೇ, ಗಂಡಿನ ಪ್ರೀತಿ ಆಶ್ರಯಕ್ಕೆ ಹಂಬಲಿಸುತ್ತಾಳೆ. ರಮಾಕಾಂತನ ವಯಸ್ಸು ತಮ್ಮಿಬ್ಬರ ನಡುವಿನ ಅಡ್ಡಿ ಎಂಬ ಮಾತನ್ನೂ ಅವಳ ಕೈಲಿ ಆಡಿಸುತ್ತಾರೆ ವಾಸುದೇವಾಚಾರ್ಯರು! ದೇವಯಾನಿಯ ಪಾತ್ರಕ್ಕೆ ಸಂಪೂರ್ಣ ತದ್ವಿರುದ್ಧ ಗುಣ ರಾಧಾಬಾಯಿಯದು. ಕಮಲೆ ಕೂಡಾ ವಿಧವೆ, ತನಗೊಬ್ಬ ಅನುರೂಪ ವರನನ್ನು ಹುಡುಕುತ್ತಲೇ ಗಂಡಸುಜಾತಿಯನ್ನು ಹಳಿಯುವವಳು!

ಒಂದು ಅಚ್ಚರಿ ಏನೆಂದರೆ, 1899ರಲ್ಲಿ ಬಂದ 'ಇಂದಿರಾಬಾಯಿ' ಯಲ್ಲಿ ಬಾಲವಿಧವೆ ಇಂದಿರೆಯ ಪುನರ್ವಿವಾಹ ಆಗುತ್ತದೆ. ಆದರೆ ಇಲ್ಲಿ, ವಾಸುದೇವಾಚಾರ್ಯರು ತಮ್ಮ ನಾಯಕಿ ಇಂದಿರೆಯ ಬಾಯಿಂದ, ವಿಧವಾ ವಿವಾಹಕ್ಕೆ ಪೂರ್ಣ ಸಮ್ಮತಿ ಇಲ್ಲೆಂಬಂತೆ ಮಾತನಾಡಿಸುತ್ತಾರೆ. ಇಂದಿರೆಯ ಬಾಯಿಂದ ಹೆಂಗಸು ಗಂಡಿನ ಸೇವೆ ಮಾಡುವುದು, ಅವನನ್ನು ಹಿಂಬಾಲಿಸಿ ಅವನ ನೆರಳಾಗಿರುವುದನ್ನು ಬೆಂಬಲಿಸಿ ಸಂಭಾಷಣೆಯನ್ನಾಡಿಸುತ್ತಾರೆ. ಇಲ್ಲಿಯೂ ವಿಧವೆ ಕಮಲೆಯ ವಿವಾಹವಾಗುತ್ತಾದರೂ, ಇಂದಿರೆಯ ಮಾತುಗಳನ್ನು ಕೇಳಿದರೆ, ವಾಸುದೇವಾಚಾರ್ಯರ ನಿಲುವಿನ ಬಗ್ಗೆ ಸ್ಪಷ್ಟನೆ ದೊರೆಯುವುದಿಲ್ಲ. ಆಧುನಿಕ ಶಿಕ್ಷಣ, ಬ್ರಿಟಿಷ್ ಸಂಸ್ಕೃತಿ ಭಾರತೀಯತೆಯನ್ನು ಹಾಳುಗೆಡುವುತ್ತಿರುವುದರ ಬಗ್ಗೆ ವಿಷಾದ ವ್ಯಕ್ತಪಡಿಸಿರುವುದು ಎದ್ದು ಕಾಣುತ್ತದೆ. ನಟೇಶ ಅಂತಹಾ ಒಂದು ದ್ವಂದ್ವವನ್ನು ಪ್ರತಿನಿಧಿಸುತ್ತಾನೆ.


ಕಾದಂಬರಿಯುದ್ದಕ್ಕೂ ವಾಸುದೇವಾಚಾರ್ಯರು ಲಘುವಾದ ಹಾಸ್ಯಮಯ ಧಾಟಿಯನ್ನು ಅಲ್ಲಲ್ಲಿ ನಗೆಯುಕ್ಕಿಸಲು ಬಳಸುವುದು ಓದುವುದಕ್ಕೇ ಚಂದ. 20ನೇ ಶತಮಾನದ ಆದಿಯಲ್ಲಿ ಬಂದ ಈ ಕಾದಂಬರಿಯ ಕನ್ನಡ ಸುಲಭವಾಗಿ ಓದಿಸಿಕೊಂಡು ಹೋಗುವುದಿಲ್ಲ ಎಂಬುದು ನಿಜ! 360ಪುಟಗಳ ಈ ಕಾದಂಬರಿ ಹಲವಾರು ಕ್ಲಿಷ್ಟ ಕನ್ನಡ ಸಂಸ್ಕೃತ ಪದಗಳನ್ನು ಒಳಗೊಂಡಿದೆ. ಇನಾಂದಾರರು ಮುನ್ನುಡಿಯಲ್ಲಿ ಹೇಳುತ್ತಾರೆ, ವಾಸುದೇವಾಚಾರ್ಯರಂತಹವರು ಆಗಿನ ಕಾಲಘಟ್ಟದಲ್ಲಿ ಹಳೆಗನ್ನಡ ಮತ್ತು ಸಂಸ್ಕೃತ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯವನ್ನು ಹೊರತರಲು ಯತ್ನಿಸಿದ್ದರು ಎಂದು. ಕಾದಂಬರಿಯನ್ನು ಓದುತ್ತಿದ್ದರೆ, ಆ ಪ್ರಭಾವದಿಂದ ಹೊರ ಬರಬೇಕೆಂದು ಯತ್ನಿಸುತ್ತಿದ್ದ ವಾಸುದೇವಚಾರ್ಯರೇ ಹೊರಬರಲು ಕಷ್ಟ ಪಟ್ಟಿದ್ದು ಎದ್ದು ಕಾಣುತ್ತದೆ ಅಥವಾ ಅದನ್ನು ಓದಿದರೆ, ಪ್ರಭಾವ ಎಷ್ಟರ ಮಟ್ಟಿಗಿತ್ತು ಎಂಬ ಅಂದಾಜಾಗುತ್ತದೆ. ಇಲ್ಲಿ ಗಮನಿಸಿ ಕಾದಂಬರಿಯಲ್ಲಿನ ಒಂದಷ್ಟು ಪದಗಳನ್ನು ಹೇಳುತ್ತೇನೆ ಗತಭೃತಕೆ, ವ್ಯಾಖ್ಯಾತ್ರಿ, ಹೃತ್ತಲ್ಯಾ, ಶುಕ್ಲಕಾಷ್ಠ, ಪಾರ್ಶ್ವವರ್ತಿನಿ, ಉಪನೇತ್ರ, ಧೃಗ್ಭಾಗ, ಶಾಣೋಲ್ಲಿಡಿತ, ಮಂಗಳಲೋತ್ಸವ, ದೈವಹತ, ಮುಕ್ತಾಫಲಾಕ್ಷರ, ಶುಶ್ವರಗೃಹವಾಕ ಅರ್ಥ ನೀವೇ ಹುಡುಕಿಕೊಳ್ಳಿ!

ಕೆರೂರು ವಾಸುದೇವಾಚಾರ್ಯರ ಇಂದಿರಾ ಕನ್ನಡದ ಮಹತ್ವ ಕಾದಂಬರಿ. ತಂತ್ರ–ಕುತಂತ್ರ, ಮುಗ್ಧತೆ, ಜೊತೆಗೆ ನವಿರಾದ ಪ್ರೇಮ, ಪ್ರಣಯ, ತುಂಟಾಟ, ರಮ್ಯ ನಿಸರ್ಗದ ವರ್ಣನೆ, ಹಾಸ್ಯ, ವಿರಹ, ವೈಚಾರಿಕತೆ, ರೋಚಕತೆ ಎಲ್ಲವೂ ಹದವಾಗಿ ಮಿಶ್ರಣಗೊಂಡ ಪರಿಪೂರ್ಣ ಕಥಾನಕ. ಪುರಾತನ ಶ್ರೀರಂಗಪಟ್ಟಣದಲ್ಲಿ ನಡೆಯುವ ಇಂದಿರಾ, ಇಂದಿನ ಕಾದಂಬರಿಗಳಿಗೆ ಮಾದರಿ. ಒಮ್ಮೆ ಓದಲೇಬೇಕಾದ ಕನ್ನಡದ ಮಹತ್ವದ ಕೃತಿ.

ಸ್ವಯಂ ರಕ್ತದಾನದ ಮೂಲಕ ಶಾಸಕ ಅನಿಲ್ ಚಿಕ್ಕಮಾದು ಜಾಗೃತಿ

ಮೈಸೂರು, ಜೂ.10(ಎಂಕೆ)– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರಕ್ಕೆ ಭೇಟಿ ನೀಡಿದ ಶಾಸಕ ಅನಿಲ್ ಚಿಕ್ಕಮಾದು, ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ರಕ್ತದಾನ ಕುರಿತು ಜಾಗೃತಿ ಮೂಡಿಸಿದರು.

ರಕ್ತದಾನ ಮಾಡುವುದರಿಂದ ಆರೋಗ್ಯ ಮತ್ತಷ್ಟು ಉತ್ತಮವಾಗುತ್ತದೆ. ದಾನಗಳಲ್ಲಿ ಶ್ರೇಷ್ಠದಾನ ಎಂದರೆ ಅದು ರಕ್ತದಾನ. ರಕ್ತದಾನಕ್ಕೆ ಯಾರು ಬೆಲೆ ಕಟ್ಟಲು ಸಾಧ್ಯವಿಲ್ಲ. ರಕ್ತದಾನ ಮಾಡಿದರೆ ಆರೋಗ್ಯ ಲಾಭಗಳಿದ್ದು, ಯುವಕರು ಹಾಗೂ ಆರೋಗ್ಯವಂತರು ಹೆಚ್ಚಾಗಿ ರಕ್ತದಾನ ಮಾಡುವ ಮೂಲಕ ಇತರರ ಪ್ರಾಣವನ್ನು ಕಾಪಾಡಬೇಕು ಎಂದು ತಿಳಿಸಿದರು.



ಶಾಸಕ ಅನಿಲ್ ಚಿಕ್ಕಮಾದು, ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ರಕ್ತದಾನ ಕುರಿತು ಜಾಗೃತಿ ಮೂಡಿಸಿದರು.

ಕೆಲವು ಸಂದರ್ಭದಲ್ಲಿ ನಮ್ಮ ಬಳಿ ಎಷ್ಟೇ ಕೋಟಿ ಇದ್ದರೂ ನಮಗೆ ಬೇಕಾದ ರಕ್ತ ಸಿಗುವುದಿಲ್ಲ. ಆ ಕಾರಣ ರಕ್ತವು ಬಹಳ ಅಮೂಲ್ಯ. ಇತ್ತೀಚಿನ ದಿನಗಳಲ್ಲಿ ಕೆಲ ಯುವಕರು ಮದ್ಯ ಸೇವನೆ ಸೇರಿದಂತೆ ಅನೇಕ ದುಷ್ಚಟಗಳಿಂದ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಚಟಗಳಿಗೆ ಬಲಿಯಾಗದೆ ಆರೋಗ್ಯವಂತರಾಗಿ ಬಾಳಬೇಕು. ನಾನು ಸಹ ವರ್ಷಕ್ಕೆ 3 ಬಾರಿ ರಕ್ತದಾನ ಮಾಡುತ್ತೇನೆ ಎಂದು, ರಕ್ತದಾನದ ಮಹತ್ವ ತಿಳಿಸಿಕೊಟ್ಟರು. ಈ ವೇಳೆ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮುತ್ತಣ್ಣ, ಪಣೀಶ್ ಆಸ್ಪತ್ರೆಯ ನಿರ್ದೇಶಕ ಲೋಕೇಶ್, ಸುದರ್ಶನ್, ಚಿಕ್ಕಣ್ಣ, ಸುರೇಶ್, ಎಸ್.ಎನ್.ರಾಜೇಶ್ ಮತ್ತಿತರರಿದ್ದರು.

ಕನ್ನಡ ಚಿತ್ರಗೀತೆಗಳ ಕರೋಕೆ ಗಾಯನ

ಮೈಸೂರು, ಜೂ.10(ಜಿಎ)–ಮೈಸೂರಿನ ಶಿವು ಮ್ಯೂಸಿಕಲ್ ವೈಬ್ಸ್‌ನಿಂದ ನಾದಬ್ರಹ್ಮ ಸಂಗೀತ ಸಭಾಂಗಣದಲ್ಲಿ ಜೂ.12ರಂದು ಸಂಜೆ 4 ಗಂಟೆಗೆ ಕನ್ನಡ ಚಲನಚಿತ್ರ ಗೀತೆಗಳ ಕರೋಕೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಂಡದ ಸಂಸ್ಥಾಪಕ, ವಕೀಲ ಎಂ.ಶಿವಕುಮಾರ್ ಈ ವಿಷಯ ತಿಳಿಸಿ, ಅಂದಿನ ಕಾರ್ಯಕ್ರಮದಲ್ಲಿ 10 ಮಂದಿ ಹವ್ಯಾಸಿ ಗಾಯಕ, ಗಾಯಕಿಯರು ಸುಮಾರು 45 ಹಾಡುಗಳನ್ನು ಪ್ರಸ್ತುತಪಡಿಸುವರು. ಅವರಲ್ಲಿ ನಾಲ್ವರು ವಕೀಲರು ಸೇರಿದ್ದಾರೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿಗೆ ಕುಡಿಯುವ ನೀರು ಸರಬರಾಜು ಮಾಡುವ ಮಹತ್ವದ

ಹಳೆ ಉಂಡುವಾಡಿ ಯೋಜನೆಗೆ 'ಗ್ರಹಣ'



ಮೈಸೂರಿಗೆ ನೀರು ಸರಬರಾಜು ಮಾಡುವ ಕೆಆರ್‌ಎಸ್ ಜಲಾಶಯದ ಹಿನ್ನೀರಿನ ದೃಶ್ಯವನ್ನು ಕಾಣಬಹುದು.

ಭೂಸ್ವಾಧೀನಪಡಿಸಿಕೊಂಡ 14 ಎಕರೆಗೆ ಪರಿಹಾರ ನೀಡದ ಹಿನ್ನೆಲೆಯಲ್ಲಿ ನನೆಗುದಿಗೆ ಬಿದ್ದ ಕಾಮಗಾರಿ

● 66 ಕೆ.ವಿ.ಫೀಡರ್ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗಕ್ಕೆ ಪೈಪ್ ಲೈನ್ ಅಳವಡಿಕೆಗೆ ಈ ಭೂಮಿ ಅವಶ್ಯ ● ಪರಿಹಾರ ನೀಡದ ಹೊರತು ಭೂಮಿ ಹಸ್ತಾಂತರಕ್ಕೆ ಒಪ್ಪದ ರೈತರು ● ಹಣ ಬಿಡುಗಡೆಗೆ ಮೀನಾಮೇಷ ಎಣಿಸುತ್ತಿರುವ ರಾಜ್ಯ ಸರ್ಕಾರ

ಮೈಸೂರು, ಜೂ.10(ಬಿಎಲ್‌ಯು)– ಮೈಸೂರು ನಗರ ಹಾಗೂ ಸುತ್ತಮುತ್ತಲಿನ ಹಳ್ಳಿಗಳು ಜೊತೆಗೆ ಹುಣಸೂರು ಕುಡಿಯುವ ನೀರಿನ ಸಮಸ್ಯೆಗೆ ದೀರ್ಘಾವಧಿ ಪರಿಹಾರವೆಂದು ಪರಿಗಣಿಸಲಾದ 595 ಕೋಟಿ ವೆಚ್ಚದ ಕೆಆರ್‌ಎಸ್ ಹಿನ್ನೀರಿನಿಂದ ಹಳೆ ಉಂಡುವಾಡಿ ಕುಡಿಯುವ ನೀರಿನ ಯೋಜನೆಗೆ ಗ್ರಹಣ ಹಿಡಿದಿದೆ. ಪೈಪ್ ಲೈನ್ ಅಳವಡಿಕೆ ಹಾಗೂ ವಿದ್ಯುತ್ ಮಾರ್ಗ ನಿರ್ಮಾಣಕ್ಕೆ ಅಗತ್ಯ ಭೂಮಿ ಸ್ವಾಧೀನಕ್ಕಾಗಿ ರಾಜ್ಯ ಸರ್ಕಾರ ರೈತರಿಗೆ ಪರಿಹಾರ ನೀಡದ ಹಿನ್ನೆಲೆಯಲ್ಲಿ ಯೋಜನೆಯ ಕಾಮಗಾರಿ ಸ್ಥಗಿತವಾಗಿದೆ.

ಈ ಯೋಜನೆಯ ಅನುಷ್ಠಾನದ ಹೊಣೆ ಹೊತ್ತ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 2021 ಮಾರ್ಚ್ 8 ರಂದು ಸಹಿ ಮಾಡಿತು. ತರುವಾಯ ಹಳೆ ಉಂಡುವಾಡಿಯ ಬಳಿ ಕೆಆರ್‌ಎಸ್ ಜಲಾಶಯದ ಹಿನ್ನೀರನ್ನು ಸರಬರಾಜು ಮಾಡುವ ಈ ಯೋಜನೆಯ ಕಾಮಗಾರಿ ಭರದಿಂದ ಸಾಗಿತ್ತು. ಈಗಾಗಲೇ ಸಿವಿಲ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ. ಆದರೆ, ಪೈಪ್‌ಲೈನ್ ಅಳವಡಿಕೆ, ವಿದ್ಯುತ್ ಮಾರ್ಗ ನಿರ್ಮಾಣ, ಕಚ್ಚಾ ಹಾಗೂ ಶುದ್ಧೀಕರಿಸಿದ ನೀರು ಹರಿಸುವ ಮಾರ್ಗ ನಿರ್ಮಾಣದ ಕಾಮಗಾರಿ ಇನ್ನು ಆರಂಭವೇ ಆಗಿಲ್ಲ. ಈ ಎಲ್ಲಾ ಕಾಮಗಾರಿಗಾಗಿ ಮಂಡಳಿ 14 ಎಕರೆ ಭೂಮಿಯನ್ನು ಗುರುತಿಸಿದೆ. ರೈತರಿಗೆ ಸೇರಿದ ಈ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪರಿಹಾರ ನೀಡಬೇಕಿದೆ. ಪರಿಹಾರದ ಹಣ ಬಿಡುಗಡೆ ಮಾಡುವಂತೆ ಮಂಡಳಿ ಸರ್ಕಾರಕ್ಕೆ ಮನವಿ ಮಾಡಿದೆ. ಆದರೆ ಸರ್ಕಾರ ಈ ತನಕ ರೈತರ ಪರಿಹಾರದ ಹಣ ಬಿಡುಗಡೆ ಮಾಡದ ಹಿನ್ನೆಲೆಯಲ್ಲಿ ಈ ಯೋಜನೆಗೆ ಗ್ರಹಣ ಹಿಡಿದಿದೆ.

ಮೈಸೂರು ಮತ್ತು ಮಂಡ್ಯ ಜಿಲ್ಲೆಯ ಗಡಿ ಅವರೆಹಳ್ಳಿಯಲ್ಲಿ 12 ಕಿಲೋ ಮೀಟರ್ ಉದ್ದದ 66 ಕೆ.ವಿ.ಫೀಡರ್ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗ ಆರಂಭಿಸಲು ಭೂಮಿ ಅವಶ್ಯವಿದೆ. ಇನ್ನು ಕಚ್ಚಾ ನೀರು ಹಾಗೂ ಶುದ್ಧೀಕರಿಸಿದ ನೀರು ಹರಿಸಲು ಚಿಕ್ಕನಹಳ್ಳಿಯಲ್ಲಿ ತಲಾ ಎರಡು ಎಕರೆ ಜಮೀನಿನ ಅಗತ್ಯವಿದೆ. ಇದಲ್ಲದೆ ಪೈಪ್ ಲೈನ್ ಅಳವಡಿಸಲು ಕೆಲವೆಡೆ ಭೂಮಿ ಬೇಕಿದೆ. ಈ ಮೂಲಕ ಒಟ್ಟು 14 ಎಕರೆ ಭೂಮಿ ಬೇಕಿದ್ದು, ರೈತರಿಗೆ ಪರಿಹಾರ ನೀಡಿದರೆ ಮಾತ್ರ ಅವರು ಭೂಮಿ ನೀಡಲು ಸಿದ್ಧರಿದ್ದಾರೆ. ಪರಿಹಾರ ನೀಡದ ಹೊರತು ಭೂಮಿ ಹಸ್ತಾಂತರಕ್ಕೆ ರೈತರು ಒಪ್ಪಿಲ್ಲ. ಹಾಗಾಗಿ ಈ ಯೋಜನೆ ಅರ್ಧಕ್ಕೆ ನಿಂತಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಪರಿಹಾರದ ಹಣ ಬಿಡುಗಡೆ ಮಾಡುವಂತೆ ಕರ್ನಾಟಕ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ ಈಗಾಗಲೇ ರಾಜ್ಯ ಸರ್ಕಾರಕ್ಕೆ ಹಲವು ಬಾರಿ ಮನವಿ ಮಾಡಿದೆ. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಬಳಿ ಹಣ ಬಿಡುಗಡೆಗೆ ಅಗ್ರಹ ಮಾಡಿದ್ದರೂ ಏನು ಪ್ರಯೋಜನವಾಗಿಲ್ಲ. ಈಗಲಾದರೂ ರಾಜ್ಯ ಸರ್ಕಾರ ಈ ಯೋಜನೆ ಅನುಷ್ಠಾನದ ಅನಿವಾರ್ಯತೆ ಅರಿತು ಕೂಡಲೇ ಹಣ ಬಿಡುಗಡೆ ಮಾಡಬೇಕಿದೆ.

ಈ ಯೋಜನೆಗೆ ಮೈಸೂರು ಜಿಲ್ಲೆಯ 67.11 ಎಕರೆ, ಮಂಡ್ಯ ಜಿಲ್ಲೆಯ 55.06 ಎಕರೆ ಸೇರಿದಂತೆ ಒಟ್ಟು 123.7 ಎಕರೆ ಪ್ರದೇಶವನ್ನು ಮೀಸಲಿರಿಸಲಾಗಿದೆ.

350 ಕೋಟಿಗೆ ನಿಗದಿಯಾಗಿದ್ದ ಯೋಜನಾ ವೆಚ್ಚ 595 ಕೋಟಿಗೆ ಹೆಚ್ಚಳ

ಹಳೆ ಉಂಡುವಾಡಿ ಕುಡಿಯುವ ನೀರಿನ ಯೋಜನೆಯನ್ನು ಆರಂಭಿಸಿದಾಗ ಅಂದಾಜು ವೆಚ್ಚ 350 ಕೋಟಿ ರೂಪಾಯಿ ಇತ್ತು. ಆದರೆ ಈಗ ಈ ಯೋಜನೆಯ ಪರಿಷ್ಕೃತ ವೆಚ್ಚ 595 ಕೋಟಿಗೆ ಏರಿಕೆಯಾಗಿದೆ.

2021ಕ್ಕೆ ಈ ಯೋಜನೆ ಆರಂಭಿಸಿ ನಿಗದಿತ ಅವಧಿಯೊಳಗೆ ಮುಗಿಸಿದ್ದರೆ 350 ಕೋಟಿಯಿಂದ 400 ಕೋಟಿಗೆ ಹೆಚ್ಚಾಗುತ್ತಿತ್ತು. ಆದರೆ ಈಗ ಯೋಜನೆಯ ಅನುಷ್ಠಾನ 5 ವರ್ಷವಾದರೂ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಈಗ 245 ಕೋಟಿ ಹೆಚ್ಚಳವಾಗಿದೆ. ಕಾಮಗಾರಿ ವಿಳಂಬವಾದರೆ ಯೋಜನೆ ಅನುಷ್ಠಾನಗೊಳಿಸಲು ಅವಶ್ಯವಿರುವ ವಸ್ತುಗಳ ಬೆಲೆ ಹೆಚ್ಚಳವಾಗಿ ಇಡೀ ಯೋಜನೆಯ ಪರಿಷ್ಕೃತ ವೆಚ್ಚ ಹೆಚ್ಚಳವಾಗಲಿದೆ. ಭೂಸ್ವಾಧೀನ ಪ್ರಕ್ರಿಯೆ ಸೇರಿದಂತೆ ಇತರೆ ಸಮಸ್ಯೆಯನ್ನು ಪರಿಹಾರ ಮಾಡಿ ಶೀಘ್ರವೇ ಯೋಜನೆಯನ್ನು ಸಂಪೂರ್ಣ ಅನುಷ್ಠಾನಗೊಳಿಸದಿದ್ದರೆ ಈಗಿರುವ 595 ಕೋಟಿ ಪರಿಷ್ಕೃತ ವೆಚ್ಚ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಸರ್ಕಾರದ ವಿಳಂಬ ಧೋರಣೆಯಿಂದ ಪರಿಷ್ಕೃತ ವೆಚ್ಚ ಹೆಚ್ಚಾಗಿ ಅದರ ಹೊರೆ ತೆರಿಗೆದಾರರ ಮೇಲೆ ಬೀಳಲಿದೆ.

ಕೆಆರ್‌ಎಸ್ ಡೆಡ್ ಸ್ಟೋರೇಜ್ ತಲುಪಿದರೂ ಇಲ್ಲಿಂದ ನೀರು ಸರಬರಾಜು ಸರಾಗ!

ಬೇಸಿಗೆ ಹಾಗೂ ಬರಗಾಲದ ಸಂದರ್ಭದಲ್ಲಿ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 68 ರಿಂದ 70 ಅಡಿಯ ಡೆಡ್ ಸ್ಟೋರೇಜ್ ಮಟ್ಟಕ್ಕೆ ತಲುಪಿದರೂ ನೀರು ಸರಬರಾಜು ಮಾಡಬಹುದಾದ ವಿಶೇಷ ಯೋಜನೆ ಇದಾಗಿದೆ.

ಕೆಆರ್ ಎಸ್, ಪಂಪ್ ಹೌಸ್, ಮೇಳಾಪುರ ಯೋಜನೆಗಳಲ್ಲೆಲ್ಲಾ ಕೆಆರ್‌ಎಸ್ ಜಲಾಶಯದ ಆಚೆ ಅನುಷ್ಠಾನಗೊಂಡಿರುವ ಯೋಜನೆಗಳಾಗಿವೆ. ಒಂದು ವೇಳೆ ಕೆಆರ್‌ಎಸ್‌ನಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿ ಡೆಡ್ ಸ್ಟೋರೇಜ್ ತಲುಪಿದರೆ ಇಲ್ಲಿಂದ ನೀರು ಸರಬರಾಜು ಸಾಧ್ಯವಿಲ್ಲ. ಕೆಆರ್‌ಎಸ್ ಅಣೆಕಟ್ಟೆ ಹಿನ್ನೀರು ಡೆಡ್ ಸ್ಟೋರೇಜ್ ತಲುಪಿದರೂ ನೀರು ಸರಬರಾಜು ಮಾಡಬಹುದು. ಇದರಿಂದ ಬರಗಾಲದಲ್ಲೂ ಮೈಸೂರಿನ ಕುಡಿಯುವ ನೀರಿಗೆ ಅಭಾವ ಉಂಟಾಗದು.

2081ರ ಮೈಸೂರಿನ ಬೆಳವಣಿಗೆ ಆಧರಿಸಿ 300 ಎಂಎಲ್‌ಡಿ ನೀರು ಸರಬರಾಜಿಗೆ ವಿನ್ಯಾಸ

ಸದ್ಯಕ್ಕೆ 150 ಎಂಎಲ್ ಡಿ ನೀರು ಸರಬರಾಜು


ಮೈಸೂರು ನಗರ, ಗ್ರಾಮೀಣ ಪ್ರದೇಶ ಹಾಗೂ ಹುಣಸೂರಿಗೆ 300 ಎಂಎಲ್‌ಡಿವರೆಗೆ ನೀರು ಸರಬರಾಜು ಮಾಡಲು ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. 2081 ರ ವೇಳೆಗೆ ಮೈಸೂರು ನಗರದ ಬೆಳವಣಿಗೆ ದೃಷ್ಟಿಯಲ್ಲಿಟ್ಟುಕೊಂಡು ಯೋಜಿತ ಕುಡಿಯುವ ನೀರಿನ ಅವಶ್ಯಕತೆಯನ್ನು ಪೂರೈಸಲು 300 ಎಂಎಲ್ ಡಿವರೆಗೆ ನೀರು ಸರಬರಾಜು ಮಾಡುವ ಈ ಯೋಜನೆ ರೂಪಿಸಲಾಗಿದೆ. ಆದರೆ ಸದ್ಯಕ್ಕೆ ಗ್ರೇಟರ್ ಮೈಸೂರು ಸುತ್ತಮುತ್ತಲಿನ ಹಳ್ಳಿ ಹಾಗೂ ಹುಣಸೂರಿನ ಬೇಡಿಕೆಗೆ ತಕ್ಕಂತೆ 150 ಎಂಎಲ್ ಡಿ ನೀರು ಸರಬರಾಜು ಮಾಡುವ ಯೋಜನೆಯ ಕಾಮಗಾರಿ ಆರಂಭಿಸಲಾಗಿದೆ.

ಕೆಆರ್‌ಎಸ್ ಹಿನ್ನೀರಿನಿಂದ ಹಳೆ ಉಂಡುವಾಡಿ ನೀರು ಸರಬರಾಜು ಯೋಜನೆಯಿಂದ ಗ್ರೇಟರ್ ಮೈಸೂರು ವ್ಯಾಪ್ತಿಯಲ್ಲಿ ಸಮರ್ಪಕ ಕುಡಿಯುವ ನೀರು ಸರಬರಾಜಾಗುತ್ತದೆ. ಅಲ್ಲದೆ ಮೈಸೂರು ಸುತ್ತಮುತ್ತಲಿನ 300 ಹಳ್ಳಿಗೂ ಕುಡಿಯುವ ನೀರು ದೊರೆಯಲಿದೆ.

ಲಕ್ಷ್ಮಣ ತೀರ್ಥ ನದಿ ಕಲುಷಿತವಾಗಿರುವ ಹಿನ್ನೆಲೆಯಲ್ಲಿ ಹಳೆ ಉಂಡುವಾಡಿ ಯೋಜನೆಯಿಂದಲೇ ಹುಣಸೂರಿಗೆ ಕುಡಿಯುವ ನೀರು ಸರಬರಾಜು ಮಾಡಲು ಬಾಚನಹಳ್ಳಿ ಯೋಜನೆ ಕೂಡ ಅನುಷ್ಠಾನ ಗೊಳಿಸಲಾಗುತ್ತಿದೆ. ಈ ಯೋಜನೆಯಿಂದ ಹುಣಸೂರು ಪಟ್ಟಣ ಸೇರಿದಂತೆ 277 ಹಳ್ಳಿಗಳಿಗೆ ಕುಡಿಯುವ ನೀರು ಸಮರ್ಪಕವಾಗಿ ಸರಬರಾಜಾಗಲಿದೆ.

ಕೆಐಎಡಿಬಿ ಉದ್ಯಮಿಗಳ ಪರ ಇಲ್ಲ; ಬರೀ ರಿಯಲ್ ಎಸ್ಟೇಟ್ ದಂಧೆಕೋರರಿಗೆ ಇದೆ!

● ಮಾಜಿ ಸಂಸದ ಪ್ರತಾಪಸಿಂಹ ಆಕ್ರೋಶದ ನುಡಿ ● ಮೈಸೂರಲ್ಲಿ ಉದ್ಯಮಿಗಳಿಗೆ ಕಡಿಮೆ ದರದಲ್ಲಿ ಜಾಗ ಸಿಕ್ಕಿದರೆ ಕೈಗಾರಿಕಾ ಅಭಿವೃದ್ಧಿ ಆಗುತ್ತಿತ್ತು



ಲೀಪ್ರ ಟೆಕ್ನಾಲಿಜಿಸ್‌ನ ಪ್ರವಿತಾಲ್ ಪನ್ನಿಯೋದನ್ ಅವರಿಗೆ 'ರೋಟರಿ ಮಿಡ್‌ಟೌನ್–ಸರ್ಕ್ಯೂಟ್ರೋನಿಕಾ ಸ್ಟಾರ್ಟ್‌ಅಪ್ ಅವಾರ್ಡ್–2026' ಅನ್ನು ಮಾಜಿ ಸಂಸದ ಪ್ರತಾಪ್‌ಸಿಂಹ ಪ್ರದಾನ ಮಾಡಿದರು.

> ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಅಧಿಕಾರದಲ್ಲಿದ್ದಾಗ ಕರ್ನಾಟಕ ಯಾವ ಕ್ಷೇತ್ರದಲ್ಲಿ ಮುಂದುವರೆಯಬೇಕು ಎಂಬ ಸ್ಪಷ್ಟ ಕಲ್ಪನೆ ಅವರಲ್ಲಿತ್ತು. ಆ ನಿಟ್ಟಿನಲ್ಲಿ ಬೆಂಗಳೂರನ್ನು ಐಟಿ ಕ್ಷೇತ್ರದಲ್ಲಿ ಅಭಿವೃದ್ಧಿಗೊಳಿಸಿದರು. ಅಂತೆಯೇ ಮೈಸೂರಿನ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆ ನೀಡಿ ನಾಲ್ಕು ಪಥದ ಹೆದ್ದಾರಿ ಅಭಿವೃದ್ಧಿ, ವಿಮಾನ ನಿಲ್ದಾಣ, ರೈಲ್ವೆ ಅಭಿವೃದ್ಧಿಗೆ ನಾಂದಿ ಹಾಡಿದ್ದರು. ನಂತರ ಅಧಿಕಾರವಹಿಸಿಕೊಂಡ ಮುಖ್ಯಮಂತ್ರಿಗಳು ಈ ಆಲೋಚನೆಯನ್ನು ಮುಂದುವರೆಸದ ಕಾರಣ ಮೈಸೂರು ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ಧಿ ಆಗಲೇ ಇಲ್ಲ.
>
> - ಪ್ರತಾಪ್‌ಸಿಂಹ, ಮಾಜಿ ಸಂಸದ

ಮೈಸೂರು, ಜೂ.10(ಎಸ್‌ಪಿಎನ್)–ಕೆಐಎಡಿಬಿ ಉದ್ಯಮ ಸ್ಥಾಪನೆ ಮಾಡುವವರ ಪರವಾಗಿ ಕೆಲಸ ಮಾಡದೇ, ರಿಯಲ್ ಎಸ್ಟೇಟ್ ದಂಧೆಕೋರರಿಗೆ ಅನುಕೂಲವಾಗುವ ರೀತಿ ಕೆಲಸ ಮಾಡುತ್ತಿದೆ ಎಂದು ಮಾಜಿ ಸಂಸದ ಪ್ರತಾಪ್‌ಸಿಂಹ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವ ರೋಟರಿ ಸಭಾಂಗಣದಲ್ಲಿ ರೋಟರಿ ಮಿಡಟೌನ್ ಹಾಗೂ ಸರ್ಕ್ಯೂಟ್ರೋನಿಕಾ ಸಹಯೋಗದೊಂದಿಗೆ ಆಯೋಜಿಸಿದ್ದ ಸಮಾರಂಭದಲ್ಲಿ ಲೀಪ್ರಾ ಟೆಕ್ನಾಲಾಜಿಸ್‌ನ ಪ್ರವಿತಾಲ್ ಪನ್ನಿಯೋದನ್ ಅವರಿಗೆ ರೋಟರಿ ಮಿಡ್‌ಟೌನ್–ಸರ್ಕ್ಯೂಟ್ರೋನಿಕಾ ಸ್ಟಾರ್ಟ್‌ಅಪ್ ಅವಾರ್ಡ್–2026ಅನ್ನು ಬುಧವಾರ ಪ್ರಧಾನ ಮಾಡಿ, ಮಾತನಾಡಿದರು. ಜಗತ್ತಿನಲ್ಲಿ ಯುದ್ಧ ನೀತಿಗಳು ಬದಲಾಗುತ್ತಿವೆ. ಚೀನಾ ತನ್ನ ತಂತ್ರಜ್ಞಾನಗಳನ್ನು ಮುಂದಿಟ್ಟು ಬೇರೆ ದೇಶದ ಆರ್ಥಿಕ ಚಟುವಟಿಕೆ ಗಳನ್ನು ನಿಯಂತ್ರಿಸುತ್ತಿದೆ. ಅಮೆರಿಕಾ ತನ್ನಲ್ಲಿನ ಸಂಶೋಧನೆಗಳ ಮೂಲಕ ಇತರೆ ದೇಶಗಳನ್ನು ನಿಯಂತ್ರಿಸುತ್ತಿದೆ. ಹಾಗಾಗಿ ಭಾರತವೂ ಇದೇ ರೀತಿ ಅಭಿವೃದ್ಧಿ ಹೊಂದಬೇಕು ಎಂದು ಅಭಿಪ್ರಾಯಪಟ್ಟರು.

ಮೈಸೂರಿನಲ್ಲಿ 7ಕ್ಕೂ ಅಧಿಕ ಇಂಜಿನಿಯರ್ ಕಾಲೇಜುಗಳಿವೆ. ಈ ಕಾಲೇಜುಗಳಿಂದ ಪ್ರತಿವರ್ಷ ನೂರಾರು ವಿದ್ಯಾರ್ಥಿಗಳು ಪದವಿ ಮುಗಿಸಿ ಹೊರಬರುತ್ತಿದ್ದಾರೆ. ಆ ವಿದ್ಯಾರ್ಥಿಗಳಿಗೆ ಪದವಿ ಬಳಿಕ ಮುಂದೇನು ಎಂಬ ಪ್ರಶ್ನೆಗೆ ಮೈಸೂರಿನ ಯಾವೊಬ್ಬ ಉದ್ಯಮಿಗಳ ಬಳಿಯೂ ಸ್ಪಷ್ಟ ಉತ್ತರವಿಲ್ಲ. ಉತ್ಸಾಹಿ ಪದವೀ ಧರರು ಸ್ಟಾರ್ಟ್ ಅಪ್ ಸ್ಥಾಪನೆ ಮಾಡಲು ಮುಂದಾ ಗುವವರಿಗೆ ಪ್ರೋತ್ಸಾಹ ನೀಡುವ ಯಾವ ವೇದಿಕೆಯೂ ಮೈಸೂರಿನಲ್ಲಿ ನಿರ್ಮಾಣವಾಗಿಲ್ಲ ಎಂದ ಅವರು, ನಾನು ಸಂಸದನಾಗಿದ್ದಾಗ ಮೈಸೂರಿನ ಅಭಿವೃದ್ಧಿಗೆ ನನ್ನದೇ ಆದ ಕಲ್ಪನೆಯಲ್ಲಿ ಕೆಲಸ ಮಾಡಿದ್ದೇನೆ ಎಂದು ಯೋಜನೆಗಳ ಪಟ್ಟಿ ಹೇಳಿದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ, ವಿಮಾನ ನಿಲ್ದಾಣ ಉನ್ನತೀಕರಣ, ದೇಶದ ನಾನಾ ಭಾಗದ ನಗರಗಳಿಗೆ ಮೈಸೂರಿಂದ ನೇರ ರೈಲ್ವೆ ಸಂಪರ್ಕ ಕಲ್ಪಿಸಲು ಪ್ರಯತ್ನಿಸಿದ್ದೇನೆ. ಮೈಸೂರಿನ ಸಾಂಸ್ಕೃತಿಕ ಬಿಂಬಿಸುವ ಯೋಜನೆಗಳನ್ನು ವಿವರಿಸಿದರು. ಇದರಿಂದ ಮೈಸೂರಿನ ಆರ್ಥಿಕ ಚಟುವಟಿಕೆಗಳು ಗರಿಗೆದರಿವೆ. ಇದನ್ನು ಮತ್ತಷ್ಟು ಉನ್ನತಮಟ್ಟಕ್ಕೆ ತೆಗೆದುಕೊಂಡು ಹೋಗಲು ಈಗಿನ ರಾಜ್ಯ ಸರ್ಕಾರ ಪ್ರಯತ್ನಿಸಬೇಕು ಎಂದು ಮನವಿ ಮಾಡಿದರು.

ಮೈಸೂರಲ್ಲಿ ಎಕೋ ಫ್ರೆಂಡ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚಬೇಕು. ಇದಕ್ಕಾಗಿ ವಿವಿಧ ಇಲಾಖೆಗಳು ಪ್ರಾಮಾಣಿಕವಾಗಿ ಕೆಲಸ ಮಾಡಬೇಕಿದೆ. ಕೆಐಎಡಿಬಿಯ ನಿಯಮಗಳಿಗೆ ಕೆಲವೊಂದು ತಿದ್ದುಪಡಿ ತಂದು, ಸ್ಟಾರ್ಟ್ ಅಪ್ ಸ್ಥಾಪನೆ ಮಾಡುವ ಯುವ ಉದ್ಯಮಿಗಳಿಗೆ ಕಡಿಮೆ ದರದಲ್ಲಿ ಜಾಗ ಹಾಗೂ ಮೂಲಸೌಕರ್ಯ ಕಲ್ಪಿಸಿದರೆ, ಈ ಭಾಗದ ನಿರುದ್ಯೋಗ ಸಮಸ್ಯೆಗೆ ಕಡಿವಾಣ ಹಾಕಬಹುದು. ಇದಕ್ಕಾಗಿ ಜನಪ್ರತಿನಿಧಿಗಳು, ಅಧಿಕಾರಿಗಳು ಒಟ್ಟಿಗೆ ಕೆಲಸ ಮಾಡಬೇಕಿದೆ ಎಂದರು. ಆದರೆ, ಕೆಐಎಡಿಬಿ ಉದ್ಯಮ ಸ್ಥಾಪನೆ ಮಾಡುವವರ ಪರವಾಗಿ ಕೆಲಸ ಮಾಡದೇ, ರಿಯಲ್ ಎಸ್ಟೇಟ್ ದಂಧೆಕೋರರಿಗೆ ಅನುಕೂಲವಾಗುವ ರೀತಿ ಕೆಲಸ ಮಾಡುತ್ತಿರುವುದು ಬೇಸರ ಸಂಗತಿ ಎಂದರು.

ಬೆಂಗಳೂರು ಪ್ರಾಕೃತಿಕವಾಗಿ ಸುಂದರ ನಗರ. ಈ ನಗರದಲ್ಲಿ ಈಗಿರುವ ಕೈಗಾರಿಕೆಗಳ ಒತ್ತಡ ಕಡಿಮೆ ಮಾಡಿ, ಪಕ್ಕದ ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಎಲ್ಲ ರಾಜಕೀಯ ಪಕ್ಷಗಳು ಒಂದಾಗಿ ಯೋಚಿಸಬೇಕು. ಅಂತೆಯೇ ಯುವ ಕೈಗಾರಿಕೋದ್ಯಮಿ ಗಳಿಗೆ ಪ್ರೋತ್ಸಾಹಿಸುವ ಕೆಲಸವಾಗಬೇಕು. ಗ್ರೇಟ್ ಅಮೆರಿಕಾ ಹೆಸರಿನ ಹಿಂದೆ ಅಲ್ಲಿನ ಪ್ರೊಫೆಸರ್ಸ್ ಹಾಗೂ ವಿವಿ ಸಂಶೋಧನಾ ವಿದ್ಯಾರ್ಥಿಗಳ ಕೊಡುಗೆಯಿದೆ. ಹಾಗಾಗಿ ಅಮೆರಿಕಾ ಜಗತ್ತಿನಲ್ಲೇ ನಂಬರ್ ಒನ್ ಸ್ಥಾನದಲ್ಲಿದೆ ಎಂದು ಹಲವು ಘಟನೆಗಳನ್ನು ಉಲ್ಲೇಖಿಸಿ ತಿಳಿಸಿದರಲ್ಲದೆ, ಮಾಜಿ ಸಿಎಂ ಎಸ್.ಎಂ. ಕೃಷ್ಣ ಅವರು, ಬೆಂಗಳೂರನ್ನು ಜಗತ್ತಿನ ಭೂಪಟದಲ್ಲಿ ಚಿರಸ್ಥಾಯಿಯಾಗಿಸಲು 'ಸಿಲಿಕಾನ್ ಸಿಟಿ' ಹೆಸರಿನಲ್ಲಿ ಅಭಿವೃದ್ಧಿಪಡಿಸಿದ ಪ್ರಸಂಗವನ್ನು ವಿವರಿಸಿದರು. ಎಡಪಂಥೀಯ ಸಿದ್ಧಾಂತದಿಂದಾಗಿ ಕೇರಳ, ಪಶ್ಚಿಮ ಬಂಗಾಲದಲ್ಲಿ ಇಂದಿಗೂ ಕೈಗಾರಿಕೆಗಳು ಸ್ಥಾಪನೆಯಾಗದೇ ಇಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ಕೇರಳ, ಪಶ್ಚಿಮ ಬಂಗಾಲವನ್ನು ವ್ಯಾಪಾರ ಕೇಂದ್ರವಾಗಿಸಿಕೊಂಡು ಅಭಿವೃದ್ಧಿಗೊಳಿಸಿದ್ದರು ಎಂದರು.

ಮೈಸೂರು ಮಿತ್ರ ಗುರುವಾರ 11 ಜೂನ್ 2026

ಸಿದ್ದಲಿಂಗಪುರ ಜಿಪಂ ಕ್ಷೇತ್ರ ವ್ಯಾಪ್ತಿ ಗ್ರಾಮಗಳಿಗೆ 6 ತಿಂಗಳೊಳಗೆ ಶಾಶ್ವತ ಕಾವೇರಿ ಕುಡಿಯುವ ನೀರು

●ಶಾಸಕ ಜಿ.ಟಿ.ದೇವೇಗೌಡರ ಭರವಸೆ ●ವಿವಿಧ ಗ್ರಾಮಗಳಲ್ಲಿ ಕೋಟ್ಯಾಂತರ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ





ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಏಕಲವ್ಯನಗರ, ನಾಗನಹಳ್ಳಿ, ಕಳಸ್ತವಾಡಿ, ಹಳೇ ಕೆಸರೆ, ಕಾಮನಕೆರೆಹುಂಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿ, ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವುದು.

ಮೈಸೂರು, ಜೂ.10–ಸಿದ್ದಲಿಂಗಪುರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಸಿದ್ದಲಿಂಗಪುರ, ಬೆಲವತ್ತ, ಹಳೇಕೆಸರೆ, ಕಾಮನಕೆರೆ ಹುಂಡಿ, ಲಕ್ಷ್ಮೀಪುರ, ಕಳಸ್ತವಾಡಿ ಗ್ರಾಮಗಳಿಗೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿ ಭರದಿಂದ ಸಾಗಿದ್ದು, ಮುಂದಿನ 6 ತಿಂಗಳಲ್ಲಿ ಶಾಶ್ವತ ಕುಡಿಯುವ ನೀರನ್ನು ಒದಗಿಸಲಾಗುವುದು ಎಂದು ಶಾಸಕ ಜಿ.ಟಿ.ದೇವೇಗೌಡ ಭರವಸೆ ನೀಡಿದರು.

24 ಗಂಟೆ ಕುಡಿಯುವ ನೀರು: ನಗರದ ಏಕಲವ್ಯ ನಗರ, ನಾಗನಹಳ್ಳಿ, ಕಳಸ್ತವಾಡಿ, ಹಳೇಕೆಸರೆ, ಕಾಮನಕೆರೆ ಹುಂಡಿ ಗ್ರಾಮಗಳಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು. ನಗರದ ಸುತ್ತಮುತ್ತಲ ಬಡಾವಣೆಗಳು ಸೇರಿದಂತೆ ಹತ್ತಿರದ ಹಳ್ಳಿಗಳಿಗೂ ದಿನದ 24 ಗಂಟೆ ಕುಡಿಯುವ ನೀರು ಒದಗಿಸಲು ಹಳೆಯ ಉಂಡುವಾಡಿ ಯೋಜನೆಯಡಿ ಕಾಮಗಾರಿ ಆರಂಭಿಸಲಾಗಿದೆ. ಈಗಾಗಲೇ ಟ್ಯಾಂಕ್‌ಗಳ ನಿರ್ಮಾಣ ಕಾರ್ಯ ಮುಗಿದು, ಪೈಪ್‌ಲೈನ್ ಅಳವಡಿಸುವ ಕಾರ್ಯ ಮುಗಿಯುವ ಹಂತದಲ್ಲಿದೆ ಎಂದು ಹೇಳಿದರು.

ಏಕಲವ್ಯನಗರದಲ್ಲಿ 45 ಲಕ್ಷ ರೂ. ವೆಚ್ಚದಲ್ಲಿ ಒಳ ಚರಂಡಿ ಕಾಮಗಾರಿಗೆ ಚಾಲನೆ ನೀಡಿ, ಇಲ್ಲಿ ಬಾಕಿ ಇರುವ 241 ಮನೆಗಳನ್ನು ವಿತರಿಸಲು ತಿಂಗಳ ಸಮಯಾವಕಾಶವನ್ನು ಅಧಿಕಾರಿಗಳಿಗೆ ನೀಡಿದ ಶಾಸಕರು, ಕೂಡಲೇ ಪಟ್ಟಿ ಮಾಡಿ, ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಮನೆಗಳ ವಿತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ದೂರವಾಣಿ ಮೂಲಕ ಕೊಳಗೇರಿ ಅಭಿವೃದ್ಧಿ ಮಂಡಳಿ ಆಯುಕ್ತ ರಾಘವೇಂದ್ರ ಅವರಿಗೆ ಸೂಚಿಸಿದರು.

ವಿದ್ಯಾರ್ಥಿಗಳಿಗೆ ವಸತಿ ನಿಲಯ: ಏಕಲವ್ಯ ನಗರದ ವಿದ್ಯಾರ್ಥಿಗಳು ವ್ಯಾಸಂಗಕ್ಕೆ ಬೇರೆಡೆ ವಸತಿ ನಿಲಯಗಳಲ್ಲಿ ಪ್ರವೇಶಾತಿ ಪಡೆಯುತ್ತಿದ್ದು, ಈ ಬಡಾವಣೆಯಲ್ಲೇ ವಸತಿ ನಿಲಯ ಪ್ರಾರಂಭ ಮಾಡುವಂತೆ ಸ್ಥಳೀಯ ಆದಿವಾಸಿ ನಿವಾಸಿಗಳು ಕೋರಿದರು. ಇದಕ್ಕೆ ಸ್ಪಂದಿಸಿದ ಶಾಸಕರು, ಸ್ಥಳದಲ್ಲಿ ಹಾಜರಿದ್ದ ರಾಜಸ್ವ ನಿರೀಕ್ಷಕ ಹೇಮಂತ್ ಅವರಿಗೆ ಕೂಡಲೇ ಸ್ಥಳ ಪರಿಶೀಲನೆ ಮಾಡುವಂತೆ ಸೂಚಿಸಿದರು. ಅಲ್ಲದೆ ಸ್ಮಶಾನಕ್ಕೆ ಕೂಡಲೇ ಸ್ಥಳ ಮೀಸಲಿರಿಸುವಂತೆ ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ತೆರೆದಿರುವ ನಮ್ಮ ಕ್ಲಿನಿಕ್‌ಗೆ ವೈದ್ಯರನ್ನು ನೇಮಕ ಮಾಡುವಂತೆ ಡಿಎಚ್‌ಒಗೆ ಇದೇ ವೇಳೆ ಸೂಚಿಸಿದರು.

ಅಂಬೇಡ್ಕರ್ ಭವನಕ್ಕೆ ಶಂಕುಸ್ಥಾಪನೆ: ನಾಗನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಗೆ ನಿರ್ಮಿಸಿದ್ದ ಸ್ವಾಗತ ಕಮಾನು ಉದ್ಘಾಟಿಸಿ, 50 ಲಕ್ಷ ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿದರು. ನಂತರ ರೂ. 35 ಲಕ್ಷ ವೆಚ್ಚದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಸಮುದಾಯ ಭವನದ ಶಂಕುಸ್ಥಾಪನೆ ನೆರವೇರಿಸಿ, 26 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕುಡಿಯುವ ನೀರಿನ ಟ್ಯಾಂಕನ್ನು ಉದ್ಘಾಟಿಸಿ, 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಅಂಗನವಾಡಿ, 5 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಉದ್ಯಾನವನ ಹಾಗೂ 15 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಅಂಗನವಾಡಿ ಸಭಾಂಗಣ ಉದ್ಘಾಟಿಸಿದರು.

ಕಳಸ್ತವಾಡಿಯಲ್ಲಿ 100 ಲಕ್ಷ ವೆಚ್ಚದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ 25 ಲಕ್ಷ ವೆಚ್ಚದಲ್ಲಿ ಏಕದಂತ ಶಾಲೆ ರಸ್ತೆ, 17 ಲಕ್ಷ ವೆಚ್ಚದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ನಿರ್ಮಾಣಕ್ಕೆ ಚಾಲನೆ ನೀಡಿ, 10 ಲಕ್ಷ ರೂ. ವೆಚ್ಚದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಿರ್ಮಿಸಿರುವ ಅಡುಗೆ ಮನೆಯನ್ನು ಉದ್ಘಾಟಿಸಿದರು.

ರಸ್ತೆ, ಚರಂಡಿ ನಿರ್ಮಾಣ: ಹಳೆ ಕೆಸರೆ ಗ್ರಾಮದಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಚಾಲನೆ ನೀಡಿದರು. ಟೀಚರ್ಸ್ ಲೇಔಟ್‌ನ ಸಮಸ್ಯೆಯನ್ನು ಆಲಿಸಿ, ಅಂದಾಜು ಪಟ್ಟಿ ತಯಾರಿಸಿ, ಕಾಮಗಾರಿಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ನಂತರ ಕಾಮನಕೆರೆಹುಂಡಿಯಲ್ಲಿ 65 ಲಕ್ಷ ವೆಚ್ಚದಲ್ಲಿ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿ, 15 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನ ಉದ್ಘಾಟಿಸಿದರು. ಇದೇ ವೇಳೆ ಸಿದ್ದಲಿಂಗಪುರ ಗ್ರಾಮದಲ್ಲಿ 1 ಕೋಟಿ 75 ಲಕ್ಷ ರೂ. ವೆಚ್ಚದಲ್ಲಿ ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೂ ಚಾಲನೆ ನೀಡಿದರು.

ಈ ವೇಳೆ ಜಿಪಂ ಮಾಜಿ ಸದಸ್ಯ ನಾಗನಹಳ್ಳಿ ದಿನೇಶ್, ಸಿದ್ದಲಿಂಗಪುರ ಜಿಪಂ ಉಸ್ತುವಾರಿ ಮಂಜುಗೌಡ, ಮುಖಂಡರಾದ ಸಿದ್ದಲಿಂಗಪುರ ಅರಕೇಶ್ವರ್, ರಾಮೇಗೌಡ್ರು, ವಿಜೇಂದ್ರ, ಕೃಷ್ಣಪ್ಪ (ಮಾಜಿ ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷರು), ತಾಪಂ ಮಾಜಿ ಅಧ್ಯಕ್ಷ ಕುಮಾರ್, ತಾಪಂ ಮಾಜಿ ಸದಸ್ಯ ರೇವಣ್ಣ, ಅಧ್ಯಕ್ಷ ನಾರಾಯಣಪ್ಪ, ಉಪಾಧ್ಯಕ್ಷ ಮರಿಸ್ವಾಮಿ, ಗ್ರಾಪಂ ಸದಸ್ಯ ಕೆ.ಜೆ.ಮಾದೇಶ್, ಮಾಜಿ ಅಧ್ಯಕ್ಷ ಟಿಎಪಿಸಿಎಂಎಸ್ ಪುರಂದರ, ಯಶ್ವಂತ್, ಮಾಜಿ ಗ್ರಾಪಂ ಅಧ್ಯಕ್ಷರಾದ ಭಾಸ್ಕರ್, ರಶ್ಮಿಮಂಜು, ಕುಮಾರ್ ಚೌಡಪ್ಪ, ಯಜಮಾನರಾದ ರಮೇಶ್, ಶಿವಲಿಂಗು, ಪ್ರಕಾಶ್ ಟಿಎಪಿಸಿಎಂಎಸ್ ಮಾಜಿ ನಿರ್ದೇಶಕರು, ಮಾಜಿ ಗ್ರಾಪಂ ಸದಸ್ಯರಾದ ಚೆನ್ನಿಗರಾಯ, ಯೋಗೇಶ್, ದೇವರಾಜು (ಕೇಬಲ್), ಹನುಮೇಗೌಡ, ಮಾಜಿ ಜಿಪಂ ಸದಸ್ಯರಾದ ಜವರೇಗೌಡ, ಮಾಜಿ ಅಧ್ಯಕ್ಷ ರಾಜು, ರಾಮಚಂದ್ರ, ಹರೀಶ್, ರವೀಶ ನಾಗನಹಳ್ಳಿ, ಲಕ್ಷ್ಮೀಪುರ ವೆಂಕಟೇಶ, ಕೃಷ್ಣಪ್ಪ, ಮಧು, ಗೋವಿಂದ ರಾಜು, ಆನಂದ, ಶಾದನಹಳ್ಳಿ ಚೆಲುವಣ್ಣ, ತಮ್ಮಣ್ಣ, ನಗರ ಶ್ರೀಧರ್, ನಂದ, ನಾರಾಯಣ, ರೇವಣ್ಣ, ನಾಗನಹಳ್ಳಿ ದಲಿತ ಮುಖಂಡ, ಕುಬೇರ, ಶಂಕರ, ರೇವಣ್ಣ, ಹಳೇಕೆಸರೆ ಯಜಮಾನರಾದ ನಾಗರಾಜು, ಶಿವಮಲ್ಲು, ಮಾದೇಶ, ಮಾಜಿ ಗ್ರಾಪಂ ಸದಸ್ಯೆ ಜ್ಯೋತಿ, ಬೆಲವತ್ತ, ರಘು, ವಿಶ್ವನಾಥ, ಕಾಮಾಕ್ಷಿ, ವಿನೋದ್‌ನಾಯ್ಡು, ಸೀತಾರಾಮಯ್ಯ ಇನ್ನಿತರರಿದ್ದರು.

ಎಸ್.ಚಿಕ್ಕಮಾದು ಅಭಿಮಾನಿ ಬಳಗದಿಂದ ಶಾಸಕ ಅನಿಲ್‌ಗೆ ಸನ್ಮಾನ



ಚಿಕ್ಕಮಾದು ಅಭಿಮಾನಿ ಬಳಗದಿಂದ ಶಾಸಕ ಅನಿಲ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಜೂ.10–ಎಸ್.ಚಿಕ್ಕಮಾದು ಅಭಿಮಾನಿ ಬಳಗದ ಮೈಸೂರು–ಚಾಮರಾಜನಗರ ಜಿಲ್ಲೆಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಮೈಸೂರಿನ ಶ್ರೀರಾಂಪುರದಲ್ಲಿರುವ ಶಾಸಕರ ನಿವಾಸದಲ್ಲಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ನಮ್ಮ ತಂದೆಯವರ ಹೆಸರಿನಲ್ಲಿ ಸಂಘ ತೆರೆದಿರುವುದು ಸಂತೋಷದ ವಿಚಾರ. ಕ್ಯಾತನಹಳ್ಳಿ ನಾಗರಾಜು ಅವರು ಕಳೆದ ಎರಡು ವರ್ಷಗಳಿಂದ ಸಂಘ ಸ್ಥಾಪಿಸುವ ಬಗ್ಗೆ ನನ್ನ ಬಳಿ ಮಾತನಾಡಿದ್ದರು. ನಾನು ಎಲ್ಲರೊಂದಿಗೆ ಚರ್ಚಿಸಿ, ನಮ್ಮ ತಂದೆ ಸ್ನೇಹಿತರು ಮತ್ತು ಅಭಿಮಾನಿಗಳನ್ನು ಭೇಟಿ ಮಾಡಿ ಅವರ ಅಭಿಪ್ರಾಯ ಪಡೆದು ಸಂಘ ಸ್ಥಾಪಿಸುವಂತೆ ತಿಳಿಸಿದ್ದೆ. ಅದರಂತೆ ಕ್ಯಾತನಹಳ್ಳಿ ನಾಗರಾಜು ಅವರು ಸಂಘ ಸ್ಥಾಪಿಸಿರುವುದು ಸಂತಸದ ವಿಚಾರ. ನಮ್ಮ ತಂದೆಯವರು ತಮ್ಮ 40 ವರ್ಷಗಳ ರಾಜಕೀಯ ಜೀವನದಲ್ಲಿ ಯಾವುದೇ ಕಪ್ಪು ಚುಕ್ಕೆ ಇಲ್ಲದಂತೆ ಬಡವರು, ದೀನ ದಲಿತರ ಪರ ಹೋರಾಟ ಮಾಡಿದ್ದಾರೆ. ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು ಜಿಲ್ಲೆಯಲ್ಲಿರುವ ಸಮಾಜದವರ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದ ಅವರು ಸಂಘದ ಅಧ್ಯಕ್ಷರು, ಪದಾಧಿಕಾರಿಗಳಿಗೆ ಶುಭ ಕೋರುತ್ತೇನೆ. ಸಮಾಜಮುಖಿ ಕಾರ್ಯಗಳಿಗೆ ನನ್ನ ಸಂಪೂರ್ಣ ಸಹಕಾರ ಇರುತ್ತದೆ ಎಂದರು.

ಈ ವೇಳೆ ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜು, ಗೌರವಾಧ್ಯಕ್ಷ ಪಾಳ್ಯ ಕೃಷ್ಣ, ಹೊನ್ನನಾಯಕ, ದೊರೆಸ್ವಾಮಿ ನಾಯಕ, ಮೈಮುಲ್ ಅಧ್ಯಕ್ಷ ಕೆ.ಈರೇಗೌಡ, ಸಂಘದ ಉಪಾಧ್ಯಕ್ಷ ಎಂ.ದೇವರಾಜು, ನಾಗವಾಲ ಮಹೇಶ್, ವರುಣ ಚಂದ್ರು, ಖಜಾಂಚಿ ಶ್ರೀನಿವಾಸ ನಾಯಕ, ಕಾರ್ಯದರ್ಶಿ ಕೆ.ಎನ್.ಮಹೇಶ ನಾಯಕ, ಕಲ್ಲುಣಿಕೆ ರವಿ, ತಿಪ್ಪೂರು ಮಹಾದೇವ್, ಸಾಲಿಗ್ರಾಮ ಮಹದೇವ ನಾಯಕ, ಸಲಹೆಗಾರರ ಲಿಂಗರಾಜು ಎನ್.ಬೆಳತ್ತೂರು, ಯಳಂದೂರು ಜಗದೀಶ ನಾಯಕ, ನಿರ್ದೇಶಕರಾದ ಆಗತ್ತೂರು ಅಂಕನಾಯಕ, ಸಿದ್ದ ನಾಯಕ, ಇಟ್ನಾ ಬೆಟ್ಟನಾಯಕ, ಧನಗಳ್ಳಿ ನಿಂಗರಾಜು, ಮರಸೆ ಸಿದ್ದರಾಜು, ಇಲವಾಲ ಕೃಷ್ಣ, ಶೇಖರ್ ಸುಣ್ಣದಕೇರಿ, ಹುಣಸೂರು ವೆಂಕಟೇಶ ನಾಯಕ, ಕಾಟೂರು ಸಿದ್ದರಾಜು, ಶ್ರೀರಂಗರಾಜಪುರ ಕುಮಾರ್, ಭೈರನಾಯಕ, ಹುತ್ತೂರು ಲೋಕೇಶ್, ಸಮಾಜದ ಮುಖಂಡರಾದ ಪುರದಕಟ್ಟೆ ಬಸವರಾಜು, ಹುಣಸೂರು ವೆಂಕಟೇಶ ನಾಯಕ, ಸರಗೂರು ಶ್ರೀನಿವಾಸ, ಇಟ್ನಾ ರಾಮನಾಯಕ, ದೊಡ್ಡವೀರ ನಾಯಕ, ಬಿದರಳ್ಳಿ ರಾಜು, ವೇಣು, ಚಿಕ್ಕನಾಯಕ, ಹೆಬ್ಬಲಗುಪ್ಪೆ ಚಿಕ್ಕನಾಯಕ, ನಾಗರಾಜು, ಹೊಮ್ಮರಗಳ್ಳಿ ವೆಂಕಟೇಶ್, ಗೋಪಾಲ, ರಾಜೇಂದ್ರ, ಗುಂಡ್ಲುಪೇಟೆ ಮಣಿಕಂಠ, ರವಿಶಂಕರ, ಸ್ವಾಮಿ, ಸಿಂಡಿಕೇಟ್ ಸದಸ್ಯ ಮಹದೇಶ್, ಡಾ.ನಟರಾಜು ಶಿವಣ್ಣ, ಕ್ಯಾತನಹಳ್ಳಿ ಜಿ.ಗೋವಿಂದರಾಜು, ಚೆಲುವರಾಜು, ಎಸ್.ಶಿವರಾಜು, ಪ್ರಸನ್ನಕುಮಾರ್, ಮಡಿವಾಳ ಬೀರೇಶ, ಲಾಯರ್ ಶಿವರಾಜ್, ಕೆ.ಎನ್.ಕುಮಾರ್, ಶಿಂಡೇನಹಳ್ಳಿ ಗಿರೀಶ್, ರವಿ ಮರಿದೇವಯ್ಯ ಶಶಿ, ಕೃಷ್ಣ, ಸಣ್ಣನಿಂಗೇಗೌಡ, ಬೆಟ್ಟದಬೀಡು ಗಣೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೋದಿ ದಾಖಲೆ ಆಡಳಿತ; ಎನ್‌ಆರ್ ಕ್ಷೇತ್ರದಲ್ಲಿ ಬಿಜೆಪಿ ಸಂಭ್ರಮಾಚರಣೆ

ಮೈಸೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ 12 ವರ್ಷದ ಯಶಸ್ವಿ ಆಡಳಿತದ ಹಿನ್ನೆಲೆಯಲ್ಲಿ, ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ವಾಕಥಾನ್, 1008 ಗಣಪತಿ ದೇವಸ್ಥಾನದಲ್ಲಿ ಪೂಜೆ, ಸಿಹಿ ವಿತರಣೆ, ಸಂವಾದ, ಚಾಯ್ ಪೆ ಚರ್ಚೆ ಇನ್ನಿತರೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.



ನರಸಿಂಹರಾಜ ಕ್ಷೇತ್ರದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ಈ ಸಂದರ್ಭದಲ್ಲಿ ಮಾಜಿ ಮಹಾಪೌರರಾದ ಸಂದೇಶ್ ಸ್ವಾಮಿ, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಅನಿಲ್ ಥಾಮಸ್, ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸ್ಮಾರ್ಟ್ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಪದ್ಮನಾಭ, ಎಚ್.ಜಿ. ಗಿರಿಧರ್, ನಗರ ಉಪಾಧ್ಯಕ್ಷರಾದ ಸುಮುರಳಿ, ಟಿ.ಎನ್.ಶಾಂತ, ನಗರ ಕಾರ್ಯದರ್ಶಿ ವೇಲು, ಶ್ರೀಕಂಠಮೂರ್ತಿ, ಓಬಿಸಿ ಅಧ್ಯಕ್ಷ ಜಗದೀಶ್, ಎಸ್‌ಸಿ ಮೋರ್ಚಾ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ, ನಗರ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಲೋಹಿತ್, ನಗರ ಯುವ ಮೋರ್ಚಾ ಉಪಾಧ್ಯಕ್ಷ ಪುನೀತ್, ರಾಜ್ಯ ಎಸ್‌ಸಿ ಮೋರ್ಚಾ ಕಾರ್ಯದರ್ಶಿ ಪರಮಾನಂದ, ಮಹಿಳಾ ಮೋರ್ಚಾ ಪ್ರಮುಖರಾದ ಮಾಲಿನಿ ಪಾಲಕ್ಷ, ಉಮಾಶ್ರೀ, ಕವಿತಾ ಸಿಂಗ್, ಪವಿತ್ರ, ಭವಾನಿ ಬೈ, ನಾರಾಯಣ ಲೋಲಪ್ಪ, ಶರತ್, ಮಾದೇವ, ಶ್ರೀನಿವಾಸ್, ಸತೀಶ್, ಓಬಿಸಿ ಮಂಜುನಾಥ್, ಯಶ್ವಂತ್ ಸಿಂಗ್, ಮರಿಯಪ್ಪ, ಕಿರಣ್ ಸಿಂಗ್, ರಾಜು, ಸೋಮಶೇಖರ್, ಶೇಖರ್, ನವೀನ್‌ರಾಜ್, ಚೇತನ್, ನವೀನ್ ಶೆಟ್ಟಿ, ಕೃಷ್ಣಮೂರ್ತಿ ರಾವತ್, ಶಿವಕುಮಾರ್, ಸುಬ್ರಮಣಿ, ಸುರೇಶ್, ವಿಜಯ್, ನಂಜುಂಡಸ್ವಾಮಿ, ವಿಜಯ್ ಕುಮಾರ್, ಉಮಾಶಂಕರ್, ತ್ಯಾಗರಾಜ್, ವಿನೋದ್ ವಿಲಿಯಂ, ಶ್ರೀನಿವಾಸ್, ಧನರಾಜ್ ಸೇರಿದಂತೆ ಅನೇಕ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ನಾಳೆಯಿಂದ 'ಘಾಟಿ' ಪ್ರದರ್ಶನ

ಮೈಸೂರು, ಜೂ.10(ಜಿಎ)–ಮೈಸೂರಿನ ನಾಟ್ಯಲೇಖ ರಂಗಸಮೂಹದಿಂದ ಕಿರುರಂಗಮಂದಿರದಲ್ಲಿ ಜೂ.11 ಮತ್ತು 12ರಂದು ಸಂಜೆ 7 ಗಂಟೆಗೆ 'ಘಾಟಿ' ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಂಡದ ಕಾರ್ಯದರ್ಶಿ ಮಧುಸೂದನ್ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ. ಸುದರ್ಶನ್ ಉದ್ಘಾಟಿಸುವರು. ವಿಭಾಗದ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಅಧ್ಯಕ್ಷತೆ ವಹಿಸುವರು. ರಂಗಕರ್ಮಿ ರಾಜೇಶ್ ತಲಕಾಡು ಪಾಲ್ಗೊಳ್ಳುವರು ಎಂದರು.

ರಂಗಸಮೂಹದ ಕಲಾವಿದರು ಅಭಿನಯಿಸಿರುವ 1 ಗಂಟೆ 35 ನಿಮಿಷ ಅವಧಿಯ ಈ ನಾಟಕವನ್ನು ಸುಮಧುರ ರಾವ್ ರಚಿಸಿದ್ದು, ಅಮಿತ್ ಜೆ.ರೆಡ್ಡಿ ನಿರ್ದೇಶಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 63618 48788 ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಸುದೀರ್ಘ ಕಾಲ ಪ್ರಧಾನಿಯಾಗಿ ಮೋದಿ ಕಾರ್ಯ ನಿರ್ವಹಣೆ

ರಾಜ್ಯ ಬಿಜೆಪಿಯಿಂದ ವಿಶೇಷ ಪೂಜೆ





ಬೆಂಗಳೂರು, ಜೂ. 10(ಕೆಎಂಶಿ)–ನರೇಂದ್ರ ಮೋದಿ ಚುನಾಯಿತ ಪ್ರಧಾನಿಯಾಗಿ ಸತತವಾಗಿ ಅತೀ ಹೆಚ್ಚು ದಿನ ದೇಶದ ಸೇವೆ ಸಲ್ಲಿಸುತ್ತಿರುವ ಸಂದರ್ಭದಲ್ಲಿ ನಗರದ ಮಲ್ಲೇಶ್ವರದ ಕಾಡುಮಲ್ಲೇಶ್ವರ ಹಾಗೂ ಶೇಷಾದ್ರಿಪುರದ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ರಾಜ್ಯ ಬಿಜೆಪಿ ಇಂದು ವಿಶೇಷ ಪೂಜೆ ಸಲ್ಲಿಸಿತು.

ಕಳೆದ 12 ವರ್ಷಗಳಿಂದ ದೇಶದ ಪ್ರಧಾನ ಸೇವಕರಾಗಿ ಪ್ರಧಾನಿ ನರೇಂದ್ರ ಮೋದಿ ಸೇವೆ ಸಲ್ಲಿಸುವ ಮೂಲಕ, ಸತತ 4998 ದಿನ ಚುನಾಯಿತ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರು ದಾಖಲೆ ಮುರಿದಿದ್ದಾರೆ. ನರೇಂದ್ರ ಮೋದಿ ಚುನಾಯಿತ ಪ್ರಧಾನಿಯಾಗಿ ಇಂದಿಗೆ ಸತತ 4999 ದಿನಗಳನ್ನು ಪೂರೈಸಿದ್ದಾರೆ.

ಈ ನೆನಪಿಗಾಗಿ ದೇಶಾದ್ಯಂತ ಬಿಜೆಪಿ ಸಂಭ್ರಮ ಆಚರಿಸುತ್ತಿದ್ದು, ರಾಜ್ಯ ಘಟಕ ದೇವಾಲಯಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಂಡಿತ್ತು. ವಿಶೇಷ ಪೂಜಾ ಕಾರ್ಯಗಳಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಉಪಾಧ್ಯಕ್ಷ ಮುರುಗೇಶ್ ನಿರಾಣಿ, ಪಕ್ಷದ ರಾಜ್ಯ ಉಸ್ತುವಾರಿ ಡಾ.ರಾಧಾಮೋಹನ್ ದಾಸ್ ಅಗರ್ವಾಲ್, ಸಹ ಉಸ್ತುವಾರಿ ಸುಧಾಕರ ರೆಡ್ಡಿ, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ, ಶಾಸಕರಾದ ಬಸವರಾಜ ಮತ್ತಿಮಡು, ಡಾ.ಶಿವರಾಜ್ ಪಾಟೀಲ್, ವಿಧಾನಪರಿಷತ್ ಸದಸ್ಯ ಪಿ.ಹೆಚ್.ಪೂಜಾರ್, ಎಸ್‌ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು, ಪ್ರಕೋಷ್ಠಗಳ ರಾಜ್ಯ ಸಂಯೋಜಕ ಎಸ್.ದತ್ತಾತ್ರೀ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಪಕ್ಷದ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಜೂ.10– ವಿವಿ ಮೊಹಲ್ಲಾ ವಿಭಾಗ ವ್ಯಾಪ್ತಿ ನಿರ್ವಹಣಾ ಕೆಲಸದ ನಿಮಿತ್ತ ಜೂ.11ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸರಸ್ವತಿಪುರಂ 1ರಿಂದ 5ನೇ ಮೇನ್, ನ್ಯೂ ಕಾಂತರಾಜ ಅರಸ್ ರಸ್ತೆ, ಕೆ.ಜಿ.ಕೊಪ್ಪಲು ಮುಖ್ಯ ರಸ್ತೆ, ಯುನಿವರ್ಸಿಟಿ ಕ್ವಾರ್ಟ್ರಸ್, ಮುಸ್ಲಿಂ ಹಾಸ್ಟೆಲ್, ವಿಶ್ವಮಾನವ ಜೋಡಿ ರಸ್ತೆ ಮುರಗನ್ ಮೆಡಿಕಲ್ಸ್‌ನಿಂದ ಕುಕ್ಕರಹಳ್ಳಿ ಕೆರೆ ರಸ್ತೆವರೆಗೆ, ಸರಸ್ವತಿಪುರಂ 5ರಿಂದ 16ನೇ ಮೇನ್, ಪಡುವಾರಹಳ್ಳಿ, ಡಿ.ಸಿ ರೆಸಿಡೆನ್ಸಿ, ರೀಜನಲ್ ಕಮಿಷನರ್ ಆಫೀಸ್, ಸಿಎಫ್‌ಟಿಆರ್‌ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾರ್ಟ್ರಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯ ರಸ್ತೆ, ವಾಗ್ದೇವಿ ನಗರ, ಜೆ.ಸಿ.ಕಾಲೇಜು ಸುತ್ತಮುತ್ತ, ಚಾಮರಾಜ ಮೊಹಲ್ಲಾ, ಜಿಲ್ಲಾ ಪಂಚಾಯತ್ ಕಚೇರಿ, ಕೋರ್ಟ್, ಅರಸು ರಸ್ತೆ, ಜಿಲ್ಲಾಧಿಕಾರಿ ಕಚೇರಿ, ಮಹಾರಾಜ ಮತ್ತು ಯುವರಾಜ ಕಾಲೇಜು ಸುತ್ತ ಮುತ್ತ, ಶಿವರಾಂಪೇಟೆ, ದಿವಾನ್ಸ್ ರಸ್ತೆ, ಧನ್ವಂತರಿ ರಸ್ತೆ, ಜೆ.ಕೆ.ಗ್ರೌಂಡ್ ಸುತ್ತಮುತ್ತಲಿನ ಪ್ರದೇಶ, ಮೆಟ್ರೋಪೋಲ್ ಸುತ್ತಮುತ್ತ, ಜೆಎಲ್‌ಬಿ ರಸ್ತೆ, ಜಯಲಕ್ಷ್ಮೀ ವಿಲಾಸ್, ನ್ಯಾಯಾಲಯದ ಆವರಣ, ಏರ್‌ಲೈನ್ಸ್ ಹೋಟೆಲ್ ರಸ್ತೆ, ಮಹಾರಾಜ ಹಾಸ್ಟೆಲ್ ಏರಿಯಾ, ಗೀತಾ ರಸ್ತೆ, ರಾಮಸ್ವಾಮಿ ವೃತ್ತ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಭೋವಿ ಸಮುದಾಯಕ್ಕೆ ಸಚಿವ ಸ್ಥಾನ ನೀಡಿ

ಮೈಸೂರು, ಜೂ.10(ಜಿಎ)–ಕಾಂಗ್ರೆಸ್ ಪಕ್ಷವು ನೂತನ ಸಚಿವ ಸಂಪುಟದಲ್ಲಿ ಭೋವಿ ಸಮುದಾಯಕ್ಕೆ ಸಚಿವ ಸ್ಥಾನ ನೀಡಬೇಕು ಎಂದು ಶಿವಯೋಗಿ ಸಿದ್ಧರಾಮೇಶ್ವರ ಬೋವಿ ಹಿತರಕ್ಷಣಾ ಸಮಿತಿ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕುರಿತು ಸಮಿತಿ ಗೌರವಾಧ್ಯಕ್ಷ ಜಿ.ವಿ.ಸೀತಾರಾಮು ಮಾತನಾಡಿ, ಭೋವಿ ಸಮುದಾಯವು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದ್ದು, ಸರ್ಕಾರದಲ್ಲಿ ಸೂಕ್ತ ಪ್ರಾತಿನಿಧ್ಯ ದೊರೆತರೆ ಮಾತ್ರ ಅಭಿವೃದ್ಧಿ ಸಾಧ್ಯ. ಅನುಭವಿ ರಾಜಕಾರಣಿ ಶಿವರಾಜ ತಂಗಡಗಿ, ಶಾಸಕರಾದ ಎ.ಸಿ.ಶ್ರೀನಿವಾಸ್, ವೆಂಕಟೇಶ್ ಅವರಲ್ಲಿ ಯಾರಿಗಾದರೂ ಸಚಿವ ಸ್ಥಾನ ನೀಡಬೇಕು. ಹಾಗೆಯೇ ವಿಧಾನಪರಿಷತ್ ಮತ್ತು ನಿಗಮ ಮಂಡಳಿಯಲ್ಲೂ ಅವಕಾಶ ಒದಗಿಸಬೇಕು ಎಂದು ಆಗ್ರಹಿಸಿದರು.

ನೀರಾವರಿ ಸೌಕರ್ಯಕ್ಕೆ ಆಗ್ರಹಿಸಿ ರೈತರ ಪ್ರತಿಭಟನೆ



ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ರೈತ ಸಂಘದ ಕಾರ್ಯಕರ್ತರು ಪ್ರಾದೇಶಿಕ ಆಯುಕ್ತರ ಕಚೇರಿ ಬಳಿ ಪ್ರತಿಭಟಿಸಿದರು.

ಮೈಸೂರು, ಜೂ.10(ಎಂಟಿವೈ)–ಎಲ್ಲಾ ಗ್ರಾಮಗಳಿಗೂ ನೀರಾವರಿ ಸೌಲಭ್ಯ ಕಲ್ಪಿಸಿ ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪ್ರಾದೇಶಿಕ ಆಯುಕ್ತ ಕಚೇರಿ ಬಳಿ ಬುಧವಾರ ಬೆಳಗ್ಗೆ ಪ್ರತಿಭಟನೆ ನಡೆಸಿದ ರೈತರು, ಸರ್ಕಾರ ರೈತರ ಸಮಸ್ಯೆಗಳಿಗೆ ಸ್ಪಂದಿಸುವಂತೆ ಆಗ್ರಹಿಸಿದರು. ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ಪೂರೈಕೆ ಮಾಡುವ ಟನ್ ಕಬ್ಬಿಗೆ 4,500 ರೂ.ಗಳನ್ನು ರೈತರ ಖಾತೆಗೆ ಜಮಾ ಮಾಡಬೇಕು. ಪೂರೈಕೆ ಮಾಡಿದ ಕಬ್ಬಿನ ಬಾಕಿ ಹಣವನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ ನಿರುದ್ಯೋಗಿ ಯುವಕ–ಯುವತಿಯರಿಗೆ ಖಾಯಂ ಉದ್ಯೋಗ ಕೊಡಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ನಂಜನಗೂಡು ತಾಲೂಕಿನ ಎಲ್ಲಾ ಗ್ರಾಮದಲ್ಲಿ ಭೌತಿಕವಾಗಿ ಉಳುಮೆ ಮಾಡುತ್ತಿರುವ ಸಾಗುವಳಿದಾರರಿಗೆ ಫಾರಂ ನಂ.53, 57ರಲ್ಲಿ ಅರ್ಜಿ ಸಲ್ಲಿಸಿ ನೈಜ ರೈತರಿಗೆ ಸಾಗುವಳಿ ಪತ್ರ ನೀಡಬೇಕು. ನಂಜನಗೂಡು ತಾಲೂಕಿನ ಎಲ್ಲಾ ಹೋಬಳಿಗಳಲ್ಲಿ ಮಂಜೂರಾತಿಯಾದ ಜಮೀನನ್ನು ದುರಸ್ಥಿ ಮಾಡಿಕೊಡಬೇಕು. ಕ್ರಯ ಬೀಳು, ಭೋಗ್ಯಬೀಳು, ಕಂದಾಯಬೀಳು ರದ್ದುಪಡಿಸಿ ಭೂ ಮಾಲೀಕ ರೈತರಿಗೆ ಪಹಣಿ ದಾಖಲಿಸಬೇಕು, ವಿದ್ಯುತ್ ಖಾಸಗೀಕರಣ ಕೈಬಿಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಈ ವೇಳೆ ಪ್ರತಿಭಟನೆಯಲ್ಲಿ ಸತೀಶ್, ಕಳ್ಳಿಪುರ ಮಹದೇವಸ್ವಾಮಿ, ರಾಮಕೃಷ್ಣ, ಮಹ ದೇವು, ನಂಜುಂಡ, ರಮೇಶ್, ಶಿವ ಕುಮಾರ್, ಶಂಕರನಾಯಕ ಸೇರಿದಂತೆ ಹಲವರು ಭಾಗವಹಿಸಿದ್ದರು.

ಗ್ರಾಮಸ್ಥರಿಗೆ ಉಪಟಳ ನೀಡುತ್ತಿದ್ದ ಹುಲಿ ಸೆರೆ

ಮೇಕೆ ತಿನ್ನಲು ಬಂದು ಬೋನಿಗೆ ಬಿತ್ತು



ತಟ್ಟೆಕೆರೆ ಜಮೀನೊಂದರಲ್ಲಿ ಇಡಲಾಗಿದ್ದ ಬೋನಿಗೆ ಬಿದ್ದ ಹುಲಿ.

ಮೈಸೂರು, ಜೂ.10(ಎಂಟಿವೈ)–ಗ್ರಾಮಸ್ಥರಿಗೆ ಉಪಟಳ ನೀಡುತ್ತಿದ್ದ ಹುಲಿ, ಆಹಾರ ಅರಸಿ ಬಂದು, ಬೋನಿನಲ್ಲಿದ್ದ ಮೇಕೆ ತಿನ್ನಲು ಹೋಗಿ ಸೆರೆ ಸಿಕ್ಕಿದೆ. ಈ ಘಟನೆ ಹುಣಸೂರು ತಾಲೂಕಿನ ತಟ್ಟೆಕೆರೆ ಗ್ರಾಮದ ಜಮೀನೊಂದರಲ್ಲಿ ನಡೆದಿದ್ದು, ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

ಹುಣಸೂರು ತಾಲೂಕಿನ ತಟ್ಟೆಕೆರೆ (ಕೂಡ್ಲೂರು) ಹಾಗೂ ಸುತ್ತಮುತ್ತಲ ಗ್ರಾಮಗಳ ಬಳಿ ಸುಳಿದಾಡುತ್ತಾ, ಜಾನುವಾರುಗಳ ಮೇಲೆ ದಾಳಿ ಮಾಡುತ್ತ ಗ್ರಾಮಸ್ಥರನ್ನು ಭಯಭೀತರನ್ನಾಗಿಸಿದ್ದ 3ರಿಂದ 4 ವರ್ಷದ ಹೆಣ್ಣು ಹುಲಿ ತೋಟವೊಂದರಲ್ಲಿ ಇಡಲಾಗಿದ್ದ ಬೋನಿಗೆ ಇಂದು ಮುಂಜಾನೆ ಬಿದ್ದಿದೆ. ಕಳೆದ ಕೆಲವು ತಿಂಗಳಿಂದ ಗ್ರಾಮಸ್ಥರನ್ನು ಕಂಗೆಡಿಸಿತ್ತು. ಹಲವು ಜಾನುವಾರು ಈ ಹುಲಿಗೆ ಬಲಿಯಾಗಿದ್ದವು. ಅಲ್ಲದೆ ಭಯದಿಂದ ರೈತರು, ಗ್ರಾಮಸ್ಥರು ಹೊಲಗಳತ್ತ ಹೋಗಲು ಹಿಂಜರಿಯುವಂತಾಗಿತ್ತು. ಅಲ್ಲದೆ, ಹುಲಿ ಸೆರೆಗೆ ಗ್ರಾಮಸ್ಥರು ಆಗ್ರಹಿಸಿದ್ದರು.

ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ತಟ್ಟೆಕೆರೆ ಗ್ರಾಮದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರ ತೋಟದ ಬಳಿ ಬೋನಿಟ್ಟಿತ್ತು. ಬೋನಿನಲ್ಲಿ ಬಂಧಿಯಾಗುತ್ತಿದ್ದಂತೆ ಆರ್ಭಟಿಸಿದೆ. ಹುಲಿ ಘರ್ಜನೆ ಕೇಳಿ ಬೋನಿನ ಬಳಿ ಬಂದು ನೋಡಿದಾಗ ಹುಲಿ ಸೆರೆ ಸಿಕ್ಕಿರುವುದು ಕಂಡು ಬಂದಿದೆ. ಕೂಡಲೇ ಮಾಹಿತಿ ಪಡೆದು ಸ್ಥಳಕ್ಕೆ ಬಂದ ಅರಣ್ಯ ಸಿಬ್ಬಂದಿ, ಹುಲಿ ಜನರನ್ನು ನೋಡಿ ಘಾಸಿಯಾಗುವುದನ್ನು ತಪ್ಪಿಸಲು ಬೋನಿನ ಸುತ್ತ ಪರದೆ ಬಿಡಲಾಯಿತು.

ಬಳಿಕ ಸ್ಥಳಕ್ಕೆ ಬಂದ ನಾಗರಹೊಳೆಯ ಪಶುವೈದ್ಯಾಧಿಕಾರಿ ಡಾ.ರಮೇಶ್ ಬೋನಿನಲ್ಲಿದ್ದ ಹುಲಿಗೆ ಅರಿವಳಿಕೆ ಚುಚ್ಚು ಮದ್ದು ನೀಡಿದರು. ಪ್ರಜ್ಞೆ ತಪ್ಪಿದ ನಂತರ ಅದನ್ನು ಬೋನಿನಿಂದ ಹೊರಗೆ ತಂದು, ಆರೋಗ್ಯ ಪರೀಕ್ಷಿಸಲಾಯಿತು. ಹುಲಿ ಆರೋಗ್ಯವಾಗಿದ್ದು, ಬೋನಿನ ಗ್ರಿಲ್ ಬಡಿದ ಪರಿಣಾಮ ಮುಖ ಹಾಗೂ ಕಾಲಿನ ಭಾಗದಲ್ಲಿ ಸಣ್ಣಪುಟ್ಟ ಗಾಯಗಳಾಗಿತ್ತು. ಅದಕ್ಕೆ ಚಿಕಿತ್ಸೆ ನೀಡಿ, ವಾಹನದೊಳಗಿದ್ದ ಬೋನಿಗೆ ಸ್ಥಳಾಂತರಿಸಿ ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಲಾಯಿತು.

ಈ ಹುಲಿ ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವೀರನಹೊಸಳ್ಳಿ, ಹುಣಸೂರು ವಲಯ ವ್ಯಾಪ್ತಿಯ ಲಕ್ಷ್ಮೀಪುರ ರೈತರೊಬ್ಬರ ಜಮೀನಿನಲ್ಲಿ ಸೆ.29ರಿಂದ ಈಚೆಗೆ ಮೇಕೆ ಮತ್ತು ಹಸುವನ್ನು ಕೊಂದಿತ್ತು. ಅರಣ್ಯ ಇಲಾಖೆಗೆ ಹುಲಿ ಸೆರೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ರೈತರು ಮನವಿ ಮಾಡಿದ್ದರು. ಅಲ್ಲದೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ,ಹುಣಸೂರು ಉಪ–ವಿಭಾಗದ ವ್ಯಾಪ್ತಿಯ ವೀರನ ಹೊಸಳ್ಳಿ ವಲಯದ ಶಾಖೆಯ ವಾರಂಚಿಗಸ್ತಿನ ವ್ಯಾಪ್ತಿಗೆ ಒಳಪಡುವ ವಿವಿಧ ಗ್ರಾಮಗಳಲ್ಲಿ ಹುಲಿಯು ಅರಣ್ಯ ಪ್ರದೇಶದಿಂದ ಹೊರಬಂದು ಜನವಸತಿ ಪ್ರದೇಶಗಳಲ್ಲಿ ಜಾನುವಾರು ಬೇಟೆ ಮುಂದುವರಿಸಿತ್ತು. ಹುಲಿ ಸೆರೆಗೆ ತಂಡವನ್ನು ರಚಿಸಿ ನಿರಂತರವಾಗಿ ಕಾರ್ಯಾಚರಣೆ ನಡೆಸಿದ್ದಲ್ಲದೆ ಮೂರು ಕಡೆ ಬೋನುಗಳನ್ನು ಇರಿಸಲಾಗಿತ್ತು. ಕಾರ್ಯಾಚರಣೆಯಲ್ಲಿ ಡಿಸಿಎಫ್ ಕಿರಬನಂದನ್, ಎಸಿಎಫ್ ಮಹದೇವಯ್ಯ, ಹುಣಸೂರು ಆರ್‌ಎಫ್‌ಓ ಸಂತೋಷ ಹೂಗಾರ್ ಹಾಗೂ ಹುಣಸೂರು ವಲಯದ ಸಿಬ್ಬಂದಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಗುರುವಾರ 11 ಜೂನ್ 2026

ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಲಲಿತಾ ಜಿ.ಟಿ.ದೇವೇಗೌಡರಿಗೆ ನಾಳೆ ಲಲಿತಾಭಿನಂದನ



ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ

ಮೈಸೂರು, ಜೂ.10(ಜಿಎ)–'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರಾದ ಲಲಿತಾ ಜಿ.ಟಿ.ದೇವೇಗೌಡರಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಘಟಿಕೋತ್ಸವ ಭವನದಲ್ಲಿ ಜೂ.12ರಂದು ಬೆಳಿಗ್ಗೆ 10 ಗಂಟೆಗೆ 'ಲಲಿತಾಭಿನಂದನ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಲಲಿತಾ ಜಿ.ಟಿ.ದೇವೇಗೌಡ ಅಭಿನಂದನಾ ಸಮಿತಿ ಉಪಾಧ್ಯಕ್ಷ ಎಂ.ಎನ್.ನಟರಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಲಿತಾ ಜಿ.ಟಿ.ದೇವೇಗೌಡರ ಸಹಕಾರ ಕ್ಷೇತ್ರದಲ್ಲಿ ಸಾಧನೆಗಾಗಿ ಅವರಿಗೆ ರಾಜ್ಯ ಸರ್ಕಾರವು ಇತ್ತೀಚೆಗೆ ಸಹಕಾರ ರತ್ನ ಪ್ರಶಸ್ತಿ ನೀಡಿದೆ. ಈ ಸಂತಸದ ಕ್ಷಣದಲ್ಲಿ ಅವರನ್ನು ಅಭಿನಂದಿಸಲಾಗುವುದು ಎಂದರು.

ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದ, ಪಾಂಡವಪುರ ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದು ತಿಳಿಸಿದರು.

ಪ್ರೊ.ಎಂ.ಕೃಷ್ಣೇಗೌಡ ಅವರು ಅಭಿನಂದನಾ ಭಾಷಣ ಮಾಡುವರು. ವಿಶ್ರಾಂತ ಕುಲಪತಿ ಕೆ.ಎಸ್.ರಂಗಪ್ಪ ಕಿರುಹೊತ್ತಿಗೆ ಬಿಡುಗಡೆ ಮಾಡುವರು. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್, ಕೃಷಿ ಸಾಧಕಿ ಕವಿತಾ ಮಿಶ್ರಾ ಪಾಲ್ಗೊಳ್ಳುವರು ಎಂದರು.

ಈ ವೇಳೆ ಸುದ್ದಿಗೋಷ್ಠಿಯಲ್ಲಿ ಸಮಿತಿ ಸಂಚಾಲಕ ಹಾಲತಿ ಸೋಮಶೇಖರ್, ಸಹ ಕಾರ್ಯದರ್ಶಿ ಎಚ್.ಟಿ.ನಟೇಶ್, ಸದಸ್ಯರಾದ ರವಿಕುಮಾರ್, ಸಿದ್ದಪ್ಪ, ತಿಮ್ಮೇಗೌಡ ಉಪಸ್ಥಿತರಿದ್ದರು.

ಶ್ರೀಮತಿ ನಿರುಪಮಾ–ರಾಜೇಂದ್ರ ತಂಡದಿಂದ ನೃತ್ಯ ಸಂಭ್ರಮ ವೈಭವ



ಮೈಸೂರು, ಜೂ.10– ಜೂನ್ 12ರ ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಏರ್ಪಡಿಸಿರುವ ಲಲಿತಾಭಿನಂದನ ಕಾರ್ಯಕ್ರಮದಲ್ಲಿ ವಿಶೇಷ ಆಕರ್ಷಣೆಯಾಗಿ ಅಂತರರಾಷ್ಟ್ರೀಯ ಖ್ಯಾತಿಯ ನೃತ್ಯ ತಾರೆಯರಾದ ಕರ್ನಾಟಕ ಕಲಾಶ್ರೀ ನೃತ್ಯ ಚೂಡಾಮಣಿ ಶ್ರೀಮತಿ ನಿರುಪಮಾ–ರಾಜೇಂದ್ರ ಮತ್ತು ತಂಡದಿಂದ ನೃತ್ಯ ಸಂಭ್ರಮ ವೈಭವ ಏರ್ಪಡಿಸಲಾಗಿದೆ.

ಪೊಲೀಸ್ ಇಲಾಖೆಯಿಂದ 'ಸನ್ಮಿತ್ರ' ಯೋಜನೆ ಮೂಲಕ ಮೈಸೂರಲ್ಲಿ 112 ಮಾದಕ ವ್ಯಸನಿಗಳ ರಕ್ಷಣೆ

ಪ್ರತಿ ಮಾದಕ ವ್ಯಸನಿಗೆ ಒಬ್ಬ ಸಿಬ್ಬಂದಿ 'ಮಿತ್ರ'ನಾಗಿ ನೇಮಕ


- 'ಸನ್ಮಿತ್ರ' ಯೋಜನೆಗೆ ಉತ್ತಮ ಪ್ರತಿಕ್ರಿಯೆ
- ಮಾದಕ ವ್ಯಸನಿಗಳ ಬಗ್ಗೆ ಮಾಹಿತಿ ನೀಡಿ
- ವ್ಯಸನಿಗಳ ರಕ್ಷಿಸಿದರೆ, ಮಾದಕ ವಸ್ತು ಸರಬರಾಜು ಕುಂಠಿತ

ಮೈಸೂರು, ಜೂ.10(ಜಿಎ)–ಮೈಸೂರು ಜಿಲ್ಲಾ ಪೊಲೀಸರು 112 ಮಂದಿ ಮಾದಕ ದ್ರವ್ಯ ವ್ಯಸನಿಗಳಿಗೆ 'ಸನ್ಮಿತ್ರ'ರಾಗಿ ಸನ್ಮಾರ್ಗದ ದಾರಿ ತೋರಿಸುವ ಮೂಲಕ ಆ ಮಾಯಾಜಾಲದಿಂದ ಅವರನ್ನು ರಕ್ಷಿಸಿದ್ದಾರೆ.

ಮೈಸೂರು ಜಿಲ್ಲೆ, ನಗರ ಸೇರಿದಂತೆ ರಾಜ್ಯಾದ್ಯಂತ ಮಾದಕ ದ್ರವ್ಯದ ವ್ಯಸನಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಪೊಲೀಸ್ ಇಲಾಖೆಯು ಮಾದಕ ವ್ಯಸನ ತಡೆಗಟ್ಟಲು ಮತ್ತು ವ್ಯಸನಿಗಳನ್ನು ದುಶ್ಚಟದಿಂದ ಮುಕ್ತಗೊಳಿಸಲು ಆರಂಭಿಸಿರುವ ಮಹತ್ವದ ಉಪಕ್ರಮವೇ 'ಸನ್ಮಿತ್ರ' ಯೋಜನೆಯಾಗಿದೆ. ಈ ಯೋಜನೆಯಡಿ ಪ್ರತಿ ಮಾದಕ ವ್ಯಸನಿಗೆ ಒಬ್ಬ ಪೊಲೀಸ್ ಸಿಬ್ಬಂದಿಯನ್ನು ಮಿತ್ರ ಅಥವಾ ಮಾರ್ಗದರ್ಶಕರಾಗಿ ನಿಯೋಜಿಸಲಾಗುತ್ತದೆ. ಈ ಯೋಜನೆ ಅಡಿ ಈಗಾಗಲೇ ಮೈಸೂರು ಜಿಲ್ಲಾ ಪೊಲೀಸರು 112 ಮಾದಕ ದ್ರವ್ಯ ವ್ಯಸನಿಗಳಿಗೆ ಸನ್ಮಿತ್ರರಾಗಿ ಮಾರ್ಗದರ್ಶನ ನೀಡಿದ್ದಾರೆ.

ಮೈಸೂರು ಜಿಲ್ಲಾ ಪೊಲೀಸರು ಕಳೆದ 6 ತಿಂಗಳಲ್ಲಿ 10 ಕೆಜಿ ಗಾಂಜಾ, 900 ಕೆಜಿ ಸಿಂಥೆಟಿಕ್ ಡ್ರಗ್ಸ್, 60 ಕೆಜಿ ಮೆಫಡ್ರಾನ್ ಹಾಗೂ ಸಾಕಷ್ಟು ಪ್ರಮಾಣದಲ್ಲಿ ಎಂಡಿಎಂಎ ವಶಪಡಿಸಿಕೊಂಡಿದ್ದು, ಈ ಪ್ರಮಾಣದಲ್ಲಿ ದಿನದಿಂದ ದಿನಕ್ಕೆ ಮಾದಕ ವಸ್ತುಗಳ ಸರಬರಾಜು ಮತ್ತು ಸೇವನೆ ಸಂಖ್ಯೆ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ತೀವ್ರ ನಿಗಾವಹಿಸಿದ್ದು, 112 ಮಂದಿ ವಿರುದ್ಧ ಕೇಸ್ ದಾಖಲಿಸಿದ್ದಾರೆ.

ಪ್ರಮುಖವಾಗಿ ಡ್ರಗ್ಸ್ ಸೇವನೆ ಮಾಡುವವರನ್ನು ರಕ್ಷಿಸಿದರೆ, ಡ್ರಗ್ಸ್ ಸರಬರಾಜು ಮಾಡುವವರ ಸಂಖ್ಯೆ ಇಳಿ ಮುಖವಾಗುತ್ತದೆ ಎಂಬ ಉದ್ದೇಶದಿಂದ 112 ಮಂದಿಯ ಮೇಲೆ ಸನ್ಮಿತ್ರ ಯೋಜನೆಯ



ಮೂಲಕ ಅವರ ಮೇಲೆ ಹದ್ದಿನ ಕಣ್ಣು ಇಟ್ಟಿದ್ದಾರೆ.

ವ್ಯಸನಿಗೊಬ್ಬ ಪೊಲೀಸ್: ಗುರುತಿಸಲ್ಪಟ್ಟ ಪ್ರತಿಯೊಬ್ಬ ಮಾದಕ ವ್ಯಸನಿಯ ಮೇಲೆ ನಿಗಾ ಇಡಲು ಮತ್ತು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಓರ್ವ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಅವರು ಪ್ರತಿದಿನ ವ್ಯಸನಿಯ ಮನೆಗೆ ಭೇಟಿ ನೀಡಿ ಆತನ ಬಗ್ಗೆ ಮಾಹಿತಿ ಕಲೆ ಹಾಕುತ್ತಾರೆ. ದೈನಂದಿನ ಚಟುವಟಿಕೆ ಕುರಿತು ಪೋಷಕರ ಬಳಿ ಮಾಹಿತಿ ಪಡೆದುಕೊಳ್ಳುತ್ತಾರೆ. ಜೊತೆಗೆ ವ್ಯಸನಿಗಳಿಗೆ ವಿಶೇಷ ಆಪ್ತ ಸಮಾಲೋಚನೆ ನೀಡಿ, ಮಾದಕ ದ್ರವ್ಯ ಸೇವನೆಯಿಂದ ದೂರವಿರುವಂತೆ ಪ್ರೇರೇಪಿಸಲಾಗುತ್ತದೆ.

ಮಾದಕ ದ್ರವ್ಯ ಮುಕ್ತ ಸಮಾಜ: ರಾಜ್ಯವನ್ನು ಗಾಂಜಾ ಹಾಗೂ ಇತರ ಮಾದಕ ವಸ್ತುಗಳ ಮುಕ್ತ ಜಿಲ್ಲೆಯನ್ನಾಗಿ ಮಾಡುವುದು. ಈ ಯೋಜನೆಯ ಮುಖ್ಯ ಗುರಿಯಾಗಿದೆ. ಈ ಯೋಜನೆಯನ್ನು ಬೆಂಗಳೂರು, ಮೈಸೂರು, ಬೀದರ್ ಮತ್ತು ಶಿವಮೊಗ್ಗ ಸೇರಿದಂತೆ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಜಾರಿಗೆ ತರಲಾಗಿದ್ದು, ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಡ್ರಗ್ ಫ್ರೀ ಕರ್ನಾಟಕ: ಕರ್ನಾಟಕದಲ್ಲಿ ಹೆಚ್ಚುತ್ತಿರುವ ಡ್ರಗ್ ಸೇವನೆ ನಿಯಂತ್ರಣಕ್ಕೆ ತರಲು ಸಾರ್ವಜನಿಕರ ಸಹಕಾರ ಬಹಳ ಮುಖ್ಯ. ಕರ್ನಾಟಕ ಸ್ಟೇಟ್ ಪೊಲೀಸ್ ಆ್ಯಪ್‌ನಲ್ಲಿ ಡ್ರಗ್ ಫ್ರೀ ಕರ್ನಾಟಕ ಎಂಬ ಆಯ್ಕೆಯನ್ನು ನೀಡಲಾಗಿದ್ದು, ಈ ಆಯ್ಕೆ ಮೂಲಕ ಜನರು ತಮ್ಮ ಸುತ್ತಮುತ್ತಲಿರುವ ಮಾದಕ ವಸ್ತುಗಳ ವ್ಯಸನಿಗಳ ಬಗ್ಗೆ ಮಾಹಿತಿ ನೀಡಬಹುದಾಗಿದೆ.

ಹೇಗೆ ಮಾಹಿತಿ ನೀಡುವುದು

ಗೂಗಲ್ ಪ್ಲೇ ಸ್ಟೋರ್ ಮೂಲಕ ಕೆಎಸ್‌ಪಿ ಎಂದು ನಮೂದಿಸಿದಾಗ ಕರ್ನಾಟಕ ಸ್ಟೇಟ್ ಪೊಲೀಸ್ ಎಂಬ ಅಪ್ಲಿಕೇಷನ್ ತೋರಿಸಲಿದೆ. ಅದನ್ನು ಡೌನ್‌ಲೋಡ್ ಮಾಡಿಕೊಂಡು ನಂತರ ನಿಮ್ಮ ಮೊಬೈಲ್ ನಂಬರ್, ಜಿಲ್ಲೆ ಮತ್ತು ಇಂಗ್ಲಿಷ್ ಅಥವಾ ಕನ್ನಡ ಭಾಷೆ ಆಯ್ಕೆ ಮಾಡಿಕೊಂಡ ತಕ್ಷಣ ಲಾಗಿನ್ ಆಗಲಿದೆ. ಆ್ಯಪ್‌ನ ಮುಖಪುಟದಲ್ಲಿ ಡ್ರಗ್ ಫ್ರೀ ಕರ್ನಾಟಕ ಎಂಬ ಆಯ್ಕೆ ಇರುತ್ತದೆ. ಅದನ್ನು ನೀವು ಆಯ್ಕೆ ಮಾಡಿಕೊಂಡರೆ, ಅಲ್ಲಿ ಮಾದಕ ದ್ರವ್ಯ ವ್ಯಸನ ಮಾಡುತ್ತಿದ್ದರೆ, ಸಾಗಾಟ ಮಾಡುತ್ತಿದ್ದರೆ ಅದನ್ನು ನಮೂದಿಸಿ, ಆ ಸ್ಥಳದ ಲೊಕೇಷನ್ ಆಯ್ಕೆ ಮಾಡಿ ದರೆ, ಹತ್ತಿರದ ಪೊಲೀಸ್ ಠಾಣೆಗೆ ಈ ಮಾಹಿತಿ ತಲುಪುತ್ತದೆ. ಇದರಿಂದ ನೀವು ಕೂಡ ಡ್ರಗ್ ಫ್ರೀ ಕರ್ನಾಟಕಕ್ಕೆ ಸಾಥ್ ನೀಡಬಹುದಾಗಿದೆ.

"ಜಿಲ್ಲೆಯಲ್ಲಿ ಸನ್ಮಿತ್ರದ ಅಡಿಯಲ್ಲಿ 112 ಮಂದಿಗೆ ಸನ್ಮಿತ್ರರನ್ನು ನೇಮಿಸಲಾಗಿದೆ.



ನಿತ್ಯ ವ್ಯಸನಿಗಳ ಚಲನವಲನಗಳ ಮೇಲೆ ನಿಗಾವಹಿಸಿ, ಅವರು ಮತ್ತೆ ಡ್ರಗ್ಸ್ ಸೇವನೆ ಮಾಡುತ್ತಾರೋ, ಇಲ್ಲವೋ ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಡ್ರಗ್ ಫ್ರೀ ಕರ್ನಾಟಕ ಮೂಲಕ ಯಾವುದೇ ದೂರುಗಳು, ಮಾಹಿತಿ ಲಭ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಶಾಲಾ–ಕಾಲೇಜಿನಲ್ಲಿ ಮಾದಕ ದ್ರವ್ಯ ಸೇವನೆ ಕುರಿತು ವಿಮುಕ್ತಿ ಅಭಿಯಾನ ನಡೆಸುತ್ತೇವೆ.

–ಮಲ್ಲಿಕಾರ್ಜುನ ಬಾಲದಂಡಿ,
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ಗುರುತು ಗೌಪ್ಯ

ಅನೇಕ ಅಪರಾಧ ಕೃತ್ಯಗಳು ನಡೆದಾಗ ಜನರು ತಮಗೆ ಕಂಡಾಗ 'ಯಾರು ಕೋರ್ಟ್, ಕಚೇರಿ ಅಲೆಯುತ್ತಾರೆ' ಎಂದು ಸುಮ್ಮನಾಗುತ್ತಾರೆ. ಡ್ರಗ್ ಫ್ರೀ ಕರ್ನಾಟಕದಲ್ಲಿ ನಿಮಗೆ ಆ ಭಯವೇ ಬೇಡ ನಿಮ್ಮ ಗುರುತು ರಹಸ್ಯವಾಗಿರುತ್ತದೆ. ಧೈರ್ಯದಿಂದ ಪೊಲೀಸರಿಗೆ ಸಾಥ್ ನೀಡಬಹುದಾಗಿದೆ.

ನಾಳೆ ಸಹಸ್ರ ಕಲಶ ಪೂಜೆ

ಮೈಸೂರು, ಜೂ.10(ಜಿಎ)–ಮೈಸೂರಿನ ಚಾಮುಂಡಿ ಬೆಟ್ಟದ ಪಾದದಲ್ಲಿರುವ ಅಯ್ಯಪ್ಪಸ್ವಾಮಿ ಮತ್ತು ಗುರು ವಾಯೂರಪ್ಪನ್ ದೇವಾಲಯದಲ್ಲಿ ಜೂ.12ರಿಂದ 19ರವರೆಗೆ ಸಹಸ್ರ ಕಲಶ ಪೂಜೆ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಬರಿಮಲೆ ಅಯ್ಯಪ್ಪ ಪೂಜಾ ಸಮಿತಿ ಅಧ್ಯಕ್ಷ ಜಿ.ಶ್ರೀನಿವಾಸ ಈ ವಿಷಯ ತಿಳಿಸಿ, ನಿತ್ಯವೂ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಂಜೆ ವಿವಿಧ ಪೂಜೆಗಳು ನಡೆಯುತ್ತವೆ. ಸುಮಾರು 40 ಲಕ್ಷ ರೂ. ವೆಚ್ಚದಲ್ಲಿ ಪೂಜೆ ಹಮ್ಮಿಕೊಂಡಿದ್ದು, ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸರ್ವ ಸಹಕಾರ ನೀಡಬೇಕು. ಹೆಚ್ಚಿನ ಮಾಹಿತಿಗೆ ದೂ.ಸಂ. 93428 20188, 0821 2484688 ಸಂಪರ್ಕಿಸಬಹುದು ಎಂದು ತಿಳಿಸಿದರು.

ಇಂದಿನಿಂದ ಫಿಫಾ ವಿಶ್ವಕಪ್



ಮೈಸೂರು, ಜೂ.10(ವಿವಿಹೆಚ್)– ಕ್ರೀಡಾ ಜಗತ್ತಿನ ಅತಿದೊಡ್ಡ ಹಬ್ಬ, ಫುಟ್‌ಬಾಲ್ ಪ್ರೇಮಿಗಳು ಕಾತುರದಿಂದ ಕಾಯುತ್ತಿರುವ ಫಿಫಾ ವಿಶ್ವಕಪ್–2026 ನಾಳೆಯಿಂದ (ಜೂ.11) ಆರಂಭವಾಗುತ್ತಿದೆ. ಇದೇ ಮೊದಲ ಬಾರಿಗೆ ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ ದೇಶಗಳು ಜಂಟಿಯಾಗಿ ಈ ಪಂದ್ಯಾವಳಿಯನ್ನು ಆಯೋಜಿಸುತ್ತಿದ್ದು, ಒಟ್ಟು 48 ತಂಡಗಳು ಮಹಾಸಮರದಲ್ಲಿ ಕಣಕ್ಕಿಳಿಯುತ್ತಿವೆ.

2026ರ ಫಿಫಾ ಪುರುಷರ ವಿಶ್ವಕಪ್ ಆವೃತ್ತಿಯು ಜೂ.11ರಿಂದ ಜು.19ರವರೆಗೆ (ಭಾರತೀಯ ಕಾಲಮಾನದಲ್ಲಿ ಜೂ.12ರಿಂದ ಜು.20) ಅಮೆರಿಕ, ಮೆಕ್ಸಿಕೊ ಮತ್ತು ಕೆನಾಡದ 16 ಬೇರೆ ಬೇರೆ ಸ್ಥಳಗಳಲ್ಲಿ ನಡೆಯಲಿದೆ. ಒಟ್ಟು 48 ತಂಡಗಳು ಫೈನಲ್ ಸೇರಿ ಬರೋಬ್ಬರಿ 104 ಪಂದ್ಯಗಳನ್ನು ಆಡಲಿವೆ.

ಈ ಬಾರಿಯ ವಿಶ್ವಕಪ್‌ನಲ್ಲಿ 1,000ಕ್ಕೂ ಅಧಿಕ ಮಂದಿ ಆಟಗಾರರು ಭಾಗವಹಿಸುವ ನಿರೀಕ್ಷೆ ಇದೆ. ಹಾಲಿ ಚಾಂಪಿಯನ್ ಅರ್ಜೆಂಟಿನಾದ ಸ್ಟಾರ್ ಪ್ಲೇಯರ್ ಲಿಯೋನೆಲ್ ಮೆಸ್ಸಿ ಹಾಗೂ ಪೋರ್ಚುಗಲ್‌ನ ಕಪ್ತಾನ್ ಕ್ರಿಶ್ಚಿಯಾನೋ ರೊನಾಲ್ಡೊ ಮೇಲೆ ಹೆಚ್ಚಿನ ಕಣ್ಣಿದ್ದು, ಈ ಇಬ್ಬರು ಲೆಜೆಂಡ್ ಆಟಗಾರರ ಕೊನೆಯ ಟೂರ್ನಿ ಇದಾಗಿರಲಿದೆ ಎಂದು ಹೇಳಲಾಗುತ್ತಿದೆ.

ಕಳೆದ ಬಾರಿ ಪೆನಾಲ್ಟಿ ಶೂಟ್‌ಔಟ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದ ಅರ್ಜೆಂಟಿನಾ, ಈ ಬಾರಿಯೂ ಪ್ರಶಸ್ತಿ ಗೆಲ್ಲುವ ಹಾಟ್ ಫೇವರೇಟ್ ತಂಡವಾಗಿದೆ. ಇತ್ತ ಫುಟ್ಬಾಲ್‌ನಲ್ಲಿ ತನ್ನದೇ ವಿಶಿಷ್ಟ ಸಾಧನೆ ಮೂಲಕ ಎಲ್ಲರ ಹುಬ್ಬೇರಿಸುವಂತೆ ಮಾಡಿದ ರೊನಾಲ್ಡೊ ಈ ಬಾರಿಯಾದರೂ ಟ್ರೋಫಿ ಗೆಲ್ಲಲಿದ್ದಾರೆಯೇ ಎಂಬುದನ್ನು ಕಾದುನೋಡಬೇಕಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜೂ.10(ಜಿಎ)–ತಾಲೂಕು ನಾಯಕರ ಸಂಘವು ಸಮುದಾಯದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ ಈ ವಿಷಯ ತಿಳಿಸಿ, 2025–26ನೇ ಸಾಲಿನ ಎಸ್‌ಎಸ್ ಎಲ್‌ಸಿ, ಪಿಯುಸಿಯಲ್ಲಿ ಶೇ.80ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳು ಜೂನ್ 18ರೊಳಗೆ ಸರಸ್ವತಿಪುರಂನಲ್ಲಿರುವ ನಾಯಕರ ವಿದ್ಯಾರ್ಥಿನಿಲಯದಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು ಎಂದರು. ಅರ್ಹ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ, ನಗದು ಬಹುಮಾನ ನೀಡಿ ಸನ್ಮಾನಿಸಲಾಗುವುದು. ಆಸಕ್ತರು ಅರ್ಜಿ ಹಾಗೂ ಮಾಹಿತಿಗೆ ಮೊ.ಸಂ. 86604 31842, 99459 01912 ಸಂಪರ್ಕಿಸಬಹುದು ಎಂದು ತಿಳಿಸಿದರು.

ಈ ವೇಳೆ ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕಡಕೊಳ ಕುಮಾರ ಸ್ವಾಮಿ, ಉಪಾಧ್ಯಕ್ಷ ರಮ್ಮನಹಳ್ಳಿ ವೆಂಕಟಯ್ಯ, ಖಜಾಂಚಿ ಮರಿಸ್ವಾಮಿ ನಾಯಕ, ನಿರ್ದೇಶಕ ರಮ್ಮನಹಳ್ಳಿ ರಾಜಶೇಖರ್, ಮುಖಂಡ ಕ್ಯಾತಮಾರನಹಳ್ಳಿ ವೆಂಕಟೇಶ್ ಉಪಸ್ಥಿತರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ



ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಮೈಸೂರು ಜಿ.ಪಂ. ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಮೈಸೂರು,ಜೂ.10(ಎಂಟಿವೈ)– ಬಾಕಿ ಇರುವ ಗೌರವಧನ ಬಿಡುಗಡೆಯೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಮೈಸೂರಲ್ಲಿ ಆಶಾ ಕಾರ್ಯಕರ್ತೆಯರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು ಬಳಿಕ ಜಿ.ಪಂ ಕಚೇರಿ ಮುಂಭಾಗದ ರಸ್ತೆಯಲ್ಲಿ ಧರಣಿ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಹಾಗೂ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ನೇತೃತ್ವದಲ್ಲಿ ಮೈಸೂರಿನ ಗನ್‌ಗೌಸ್ ವೃತ್ತದಿಂದ ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಮೂಲಕ ಜಿ.ಪಂ. ಕಚೇರಿವರೆಗೆ ಬೃಹತ್ ಮೆರವಣಿಗೆ ನಡೆಸಿದ ಆಶಾ ಕಾರ್ಯಕರ್ತೆಯರು ನಂತರ ಜಿ.ಪಂ ಕಚೇರಿ ಮುಂಭಾಗದ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲೇ ಮಧ್ಯಾಹ್ನ 2.30 ರವರೆಗೂ ಧರಣಿ ನಡೆಸಿ, ತಮ್ಮ ಬೇಡಿಕೆ ಈಡೇರಿಸುವಂತೆ ಹಕ್ಕೊತ್ತಾಯ ಮಾಡಿದರು.

ಆಶಾ ಕಾರ್ಯಕರ್ತೆಯರ ಪ್ರೋತ್ಸಾಹ ಧನ ಮತ್ತು ಗೌರವಧನ ಹಲವು ತಿಂಗಳಿಂದ ಬಾಕಿ ಉಳಿದಿದ್ದು, ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣವೂ ಇನ್ನೂ ಅನೇಕ ತಾಲೂಕುಗಳ ಕಾರ್ಯಕರ್ತೆಯರಿಗೆ ತಲುಪಿಲ್ಲ. ಕೇಂದ್ರ ಸರ್ಕಾರದ 2 ತಿಂಗಳ ಪ್ರೋತ್ಸಾಹಧನ ಹಾಗೂ ರಾಜ್ಯ ಸರ್ಕಾರದ ಎರಡು ತಿಂಗಳ ಗೌರವಧನ ಇನ್ನೂ ಪಾವತಿಯಾಗಿಲ್ಲ. ಜೊತೆಗೆ ಹಲವಾರು ವರ್ಷಗಳಿಂದ ಬಾಕಿ ಇರುವ ಟಿಬಿ, ಟಿಬಿಐ, ಎನ್‌ಸಿಡಿ ಸೇರಿದಂತೆ ವಿವಿಧ ಆರೋಗ್ಯ ಕಾರ್ಯಕ್ರಮಗಳ ಕಾಂಪೋನೆಂಟ್ ಹಣಗಳು ಬಿಡುಗಡೆಯಾಗದೆ ಉಳಿದಿವೆ. ಅನೇಕ ಆಶಾ ಕಾರ್ಯಕರ್ತೆಯರ ಗೌರವಧನ ಮತ್ತು ಪ್ರೋತ್ಸಾಹಧನ ಕಡಿತಗೊಂಡಿದ್ದು, ಇದರಿಂದ ಅವರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ದೂರಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಉಪನಿರ್ದೇಶಕರು ಹೊರಡಿಸಿರುವ ಪತ್ರದಂತೆ ಆಶಾ ನಿಧಿ ತಂತ್ರಾಂಶದಲ್ಲಿ ಒಂಬತ್ತು ವಿವಿಧ ಸೇವೆಗಳನ್ನು ನಿಷ್ಕ್ರಿಯಗೊಳಿಸಿರುವುದರಿಂದ ಪ್ರತಿ ಆಶಾ ಕಾರ್ಯಕರ್ತೆಗೆ ತಿಂಗಳಿಗೆ ಸುಮಾರು 1 ಸಾವಿರವರೆಗೆ ಪ್ರೋತ್ಸಾಹಧನ ನಷ್ಟವಾಗುವ ಸಾಧ್ಯತೆ ಇದೆ. ಈ ಸೇವೆಗಳು ತಾಯಿ–ಮಗು ಆರೋಗ್ಯ ಹಾಗೂ ಬಡ ಜನರ ಆರೋಗ್ಯ ರಕ್ಷಣೆಗೆ ಅಗತ್ಯವಾಗಿರುವುದರಿಂದ ಅವುಗಳನ್ನು ಮುಂದುವರಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ ಪ್ರತಿಭಟನೆಯಲ್ಲಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಉಪಾಧ್ಯಕ್ಷೆ ಕಾ.ಉಮಾದೇವಿ, ಜಿಲ್ಲಾಧ್ಯಕ್ಷೆ ಭಾಗ್ಯ, ಜಿಲ್ಲಾ ಗೌರವಾಧ್ಯಕ್ಷೆ ಪಿ.ಎಸ್.ಸಂಧ್ಯಾ, ಪ್ರೊ.ಹೆಚ್.ಎಂ. ಹೇಮಲತಾ, ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಸಲಹೆಗಾರರಾದ ಜಿ.ಎಸ್.ಸೀಮಾ, ಪಿರಿಯಾಪಟ್ಟಣದ ಹೇಮಾ, ಕೋಮಲ, ತಿ.ನರಸೀಪುರದ ಮಣಿಲಾ, ಹುಣಸೂರು ಶಾಂತ ಇನ್ನಿತರರಿದ್ದರು.

ಆಶಾಗಳ ಹಕ್ಕೊತ್ತಾಯ

ಆಶಾ ಕಾರ್ಯಕರ್ತೆಯರಿಗೆ ಬಾಕಿ ಇರುವ 2 ತಿಂಗಳ ಕೇಂದ್ರದ ಪ್ರೋತ್ಸಾಹಧನ, 2 ತಿಂಗಳ ಗೌರವಧನವನ್ನು ಕೂಡಲೇ ನೀಡಬೇಕು. 9 ವಿವಿಧ ಆಶಾ ಸೇವೆಗಳನ್ನು ಆಶಾ ನಿಧಿ ತಂತ್ರಾಂಶದಲ್ಲಿ ನಿಷ್ಕ್ರಿಯಗೊಳಿಸಲಾಗಿದೆ. ಇದರಿಂದ ಪ್ರತೀ ಕಾರ್ಯಕರ್ತೆಗೆ ರೂ. 1000ದವರೆಗೆ ಪ್ರೋತ್ಸಾಹಧನ ಕಡಿತವಾಗಲಿದೆ. ಈ ಸೇವೆಗಳನ್ನು ಮುಂದುವರೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಕಾರ್ಯಕರ್ತೆಯರ ಮೂಲಕ ಸಮಸ್ತ ಆ್ಯಪ್ ಆನ್ಲೈನ್ ದಾಖಲಾತಿ ಮಾಡಿಸುವುದನ್ನು ಕೈಬಿಡಬೇಕು. ಕೆಲಸಕ್ಕೆ ಅನುಗುಣವಾಗಿ ಕೇಂದ್ರದ ಪ್ರೋತ್ಸಾಹಧನ ಬರುತ್ತಿಲ್ಲ. ಈ ಸಮಸ್ಯೆ ಬಗೆಹರಿಸಿ, ಆಶಾಗಳಿಗೆ ಕೂಡಲೇ ಬಾಕಿ ಇರುವ ಪ್ರೋತ್ಸಾಹಧನ ನೀಡಬೇಕು. ಮೌಲ್ಯಮಾಪನದ ಹೆಸರಲ್ಲಿ ಆಶಾಗಳ ಮೇಲಿನ ಶೋಷಣೆ ತಪ್ಪಿಸಬೇಕು. ನಿವೃತ್ತರಾಗಿರುವ ಆಶಾಗಳಿಗೆ ಇಡಿಗಂಟು ನೀಡಬೇಕು. ಸಂಘದ ಪದಾಧಿಕಾರಿಗಳೊಂದಿಗೆ ಕುಂದು ಕೊರತೆ ನಿವಾರಣಾ ಸಭೆ ಕರೆಯಬೇಕು. ಜನವರಿ 2025ರಲ್ಲಿ ಮುಖ್ಯಮಂತ್ರಿಗಳು ಘೋಷಿಸಿದ ಕೇಂದ್ರ ಸರ್ಕಾರದ ಪ್ರೋತ್ಸಾಹಧನ ಹಾಗೂ ರಾಜ್ಯ ಸರ್ಕಾರದ ಗೌರವಧನ ಒಟ್ಟಿಗೆ ಸೇರಿಸಿ ಕನಿಷ್ಠ ಮಾಸಿಕ ರೂ.10,000 ಗೌರವಧನ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು. 2025 ಮಾರ್ಚ್ ಬಜೆಟ್‌ನಲ್ಲಿ ರಾಜ್ಯ ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ಹೆಚ್ಚಳ ಮಾಡಿರುವಂತೆ ಎಲ್ಲಾ ಆಶಾ ಕಾರ್ಯಕರ್ತೆಯರಿಗೂ ರೂ.1,000 ಹೆಚ್ಚಳ ಮಾಡುವುದಾಗಿ ಭರವಸೆ ನೀಡಿದಂತೆ ಹೆಚ್ಚಳ ಮಾಡಬೇಕು.

ಚಾಮುಂಡೇಶ್ವರಿ ದರ್ಶನ ಪಡೆದ ಮೈಸೂರು ವಾರಿಯರ್ಸ್ ತಂಡದ ಆಟಗಾರರು



ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ ಮೈಸೂರು ವಾರಿಯರ್ಸ್ ತಂಡ, ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ ಪಂದ್ಯಾವಳಿಯಲ್ಲಿ ಯಶಸ್ಸು ಲಭಿಸಲೆಂದು ಪ್ರಾರ್ಥಿಸಿತು.

ಮೈಸೂರು, ಜೂ.10(ಎಂಕೆ)– ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಪಂದ್ಯಾವಳಿ 5ನೇ ಆವೃತ್ತಿಗೂ ಮುನ್ನ ನಾಡ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದರ್ಶನ ಪಡೆದ ಎನ್‌ಆರ್ ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್ ತಂಡದ ಆಟಗಾರರು ಶಕ್ತಿ, ಏಕತೆ ಮತ್ತು ಯಶಸ್ಸಿಗಾಗಿ ದೇವಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಚಾಮುಂಡಿಬೆಟ್ಟಕ್ಕೆ ಪ್ರತಿ ವರ್ಷದಂತೆ ಈ ವರ್ಷವೂ ಭೇಟಿ ನೀಡಿದ ಮೈಸೂರು ವಾರಿಯರ್ಸ್ ತಂಡ, ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿ, ದರ್ಶನ ಪಡೆಯುವ ಮೂಲಕ ಪಂದ್ಯಾವಳಿಯಲ್ಲಿ ಯಶಸ್ಸು ಲಭಿಸಲೆಂದು ಪ್ರಾರ್ಥಿಸಿದರು.


ಮೈಸೂರು ವಾರಿಯರ್ಸ್‌ನ ಮಾಲೀಕ ಮತ್ತು ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಮತ್ತು ಅವರ ತಾಯಿ ಶ್ರೀಮತಿ ಜಾನವಿ ಮೂರ್ತಿ, ತಂಡದ ಮುಖ್ಯ ತರಬೇತುದಾರ ಆರ್‌ಎಕ್ಸ್ ಮುರಳೀಧರ್, ಸಹಾಯಕ ತರಬೇತುದಾರರಾದ ವಿಜಯ್ ಮಾಡ್ಯಾಲ್ಕರ್, ಆದಿತ್ಯ ಬಿ. ಸಾಗರ್ ಮತ್ತು ಇತರ ತರಬೇತುದಾರ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರತಿಭಾನ್ವೇಷಣೆಯಲ್ಲಿ 10 ಮಂದಿ ಆಯ್ಕೆ: ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದಲ್ಲಿರುವ ಎಸ್‌ಡಿಎನ್‌ಆರ್ ಒಡೆಯರ್ ಕ್ರೀಡಾಂಗಣದ ಬಳಿ ಇತ್ತೀಚೆಗೆ ನಡೆದ ಪ್ರತಿಭಾನ್ವೇಷಣೆಯಲ್ಲಿ ಭಾಗವಹಿಸಿದ್ದ 75 ಮಂದಿ ಆಟಗಾರರ ಪೈಕಿ 10 ಮಂದಿ ಆಟಗಾರರನ್ನು ಅಂತಿಮ ಸುತ್ತಿಗೆ ಆಯ್ಕೆ ಮಾಡಲಾಗಿದೆ. ಇವರಲ್ಲಿ ಇಬ್ಬರು ಹೊಸ ಪ್ರತಿಭೆಗಳು ಮೈಸೂರು ವಾರಿಯರ್ಸ್ ತಂಡದಲ್ಲಿ ಸ್ಥಾನ ಪಡೆಯಲಿದ್ದಾರೆ.

ಮನೋಜ್ ರಮೇಶ್, ಎಂ.ಆರ್. ಜಯಂತ್, ಹೆಚ್.ಸಿ.ಶಶಾಂಕ್, ಗೌತಮ್ ಸಾಗರ್, ಎಂ.ವಿ.ರಾಘವೇಂದ್ರ, ಮೇದಾಂಶ್ ಅರಸ್, ಭುವನೇಶ್ ಪಿ. ನಾಯಕ್, ಕೆ.ಎಸ್.ಲಂಕೇಶ್, ಹರ್ಷವರ್ಧನ್ ಮತ್ತು ಚಮನ್ ನಿಖಿಲ್ ಪ್ರತಿಭಾನ್ವೇಷಣೆಯಲ್ಲಿ ಆಯ್ಕೆಯಾದ ಆಟಗಾರರಾಗಿದ್ದು, ಪಂದ್ಯಾವಳಿಯಲ್ಲಿ ಭಾಗವಹಿಸುವ ಅವಕಾಶ ಯಾರಿಗೆ ಲಭಿಸಲಿದೆ ಎಂಬುದನ್ನು ಕಾದು ನೋಡಬೇಕಿದೆ.

ದೇಶ – ವಿದೇಶ

ಜೂನ್ 13ರಿಂದ ಪ್ರಧಾನಿ ಮೋದಿ ಯುರೋಪ್ ಪ್ರವಾಸ



ನವದೆಹಲಿ: ಭಾರತದ ಜಾಗತಿಕ ಪ್ರಭಾವ ಹಾಗೂ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಜೂನ್ 13ರಿಂದ 18ರವರೆಗೆ ಯುರೋಪ್‌ನ ಪ್ರಮುಖ ರಾಷ್ಟ್ರಗಳಾದ ಫ್ರಾನ್ಸ್ ಮತ್ತು ಸ್ಲೋವಾಕಿಯಾಗೆ ಪ್ರವಾಸ ಕೈಗೊಳ್ಳಲಿದ್ದಾರೆ.

ವಿದೇಶಾಂಗ ಸಚಿವಾಲಯ ಬಿಡುಗಡೆ ಮಾಡಿರುವ ಮಾಹಿತಿ ಪ್ರಕಾರ, ಈ 6 ದಿನಗಳ ಸುದೀರ್ಘ ಪ್ರವಾಸದಲ್ಲಿ ಪ್ರಧಾನಿಯವರು ಉಭಯ ರಾಷ್ಟ್ರಗಳೊಂದಿಗಿನ ದ್ವಿಪಕ್ಷೀಯ ಬಾಂಧವ್ಯ ವೃದ್ಧಿ, ಜಿ–7 ಶೃಂಗಸಭೆಯಲ್ಲಿ ಭಾಗಿ ಹಾಗೂ ಅತ್ಯಾಧುನಿಕ ತಂತ್ರಜ್ಞಾನ ವಲಯದಲ್ಲಿ ಭಾರತದ ಹೆಜ್ಜೆಯನ್ನು ಗಟ್ಟಿಗೊಳಿಸುವ ಮಹತ್ತರ ಕಾರ್ಯಸೂಚಿಗಳನ್ನು ಹೊಂದಿದ್ದಾರೆ. ಅಮೆರಿಕ ಅಧ್ಯಕ್ಷ ಟ್ರಂಪ್ ಜತೆಯೂ ಮಾತುಕತೆ ನಡೆಸಲಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ. ಫ್ರಾನ್ಸ್‌ನ ನೈಸ್ ಭೇಟಿ ಮತ್ತು ಇಂಡಿಯಾ ಇನ್ನೋವೇಟ್ಸ್ ಉದ್ಘಾಟನೆ (ಜೂನ್ 13–14) ಪ್ರವಾಸದ ಮೊದಲ ಹಂತದಲ್ಲಿ ಪ್ರಧಾನಿ ಮೋದಿ ಅವರು ಫ್ರಾನ್ಸ್‌ನ ನೈಸ್ ನಗರಕ್ಕೆ ಆಗಮಿಸಲಿದ್ದಾರೆ. ಇಲ್ಲಿ ಅವರು ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ಉನ್ನತ ಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ಸೆಕ್ಯೂರಿಟಿ ಗಾರ್ಡ್ ಕೋಟ್ಯಾಧಿಪತಿ!



ದುಬೈ: ಯುಎಇಯಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿರುವ ತಯಾಬ್ ಖಾನ್, ಯುಎಇ ಲಾಟರಿಯ ಲಕ್ಕಿ ಡೇ ಡ್ರಾದಲ್ಲಿ 30 ಮಿಲಿಯನ್ ದಿರ್ಹಮ್ (78 ಕೋಟಿ) ಮೊತ್ತವನ್ನು ಗಳಿಸಿದ್ದಾರೆ ಎಂದು ಖಲೀಜ್ ಟೈಮ್ಸ್ ವರದಿ ಮಾಡಿದೆ. ಸೆಕ್ಯೂರಿಟಿ ಗಾರ್ಡ್ ಆಗಿ ದೀರ್ಘ ಪಾಳಿಗಳಲ್ಲಿ ಕೆಲಸ ಮಾಡುತ್ತಿರುವ ವಿಜೇತರು, ಆಕಸ್ಮಿಕವಾಗಿ ಟಿಕೆಟ್ ಖರೀದಿಸಿದರು ಮತ್ತು ಅಂತಿಮವಾಗಿ ಉನ್ನತ ಬಹುಮಾನವನ್ನು ಪಡೆದಿದ್ದಾರೆ.

ನೇಪಾಳದ 26 ವರ್ಷದ ವ್ಯಕ್ತಿ, ತಾನು ಡ್ರಾವನ್ನು ವೀಕ್ಷಿಸಿಲ್ಲ ಮತ್ತು ಈ ಸುದ್ದಿ ಸಂಪೂರ್ಣ ಆಘಾತಕಾರಿಯಾಗಿತ್ತು. ಇದನ್ನು ನಂಬಲು ಸಹ ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ನಾನು ಹಲವು ಬಾರಿ ಪರಿಶೀಲಿಸಬೇಕಾಯಿತು. ಇಮೇಲ್ ಮೂಲಕ ಗೆಲುವಿನ ಬಗ್ಗೆ ತಿಳಿದುಕೊಂಡೆ ಎಂದಿದ್ದಾರೆ.

ಸಣ್ಣ ಬಹುಮಾನಗಳಿಗಾಗಿ ನನಗೆ ಈ ಹಿಂದೆ ಇದೇ ರೀತಿಯ ಇಮೇಲ್‌ಗಳು ಬಂದಿದ್ದವು. ಆದ್ದರಿಂದ, ನಾನು ಅದರ ಬಗ್ಗೆ ಹೆಚ್ಚು ಯೋಚಿಸಲಿಲ್ಲ. ಆದರೆ, ನಾನು ಇಮೇಲ್ ತೆರೆದಾಗ 30 ಮಿಲಿಯನ್ ದಿರ್ಹಮ್‌ಗಳನ್ನು ನೋಡಿದಾಗ, ನನ್ನ ಕೈಗಳು ನಡುಗುತ್ತಿದ್ದವು ಮತ್ತು ನನ್ನ ಕಾಲುಗಳು ನಡುಗುತ್ತಿದ್ದವು. ಅದು ಕನಸಿನಂತೆ ಭಾಸವಾಯಿತು ಎಂದು ತಯಾಬ್ ಹೇಳಿದರು. ವರದಿ ಪ್ರಕಾರ, ಲಾಟರಿ ಖರೀದಿಸಲು ನಿಯಮಿತವಾಗಿ ಹಣ ಸಂಗ್ರಹಿಸುತ್ತಿದ್ದ ಐವರು ಆಪ್ತ ಸ್ನೇಹಿತರು ಈ ಹಣವನ್ನು ಹಂಚಿಕೊಂಡಿದ್ದಾರೆ.


18 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ; ತೆಲಂಗಾಣದ ಅಧಿಕಾರಿ ಬಂಧನ



ಹೈದರಾಬಾದ್: ತೆಲಂಗಾಣದ ರಸ್ತೆ ಮತ್ತು ಕಟ್ಟಡಗಳ ಇಲಾಖೆ ಮುಖ್ಯ ಇಂಜಿನಿಯರ್‌ನನ್ನು ಅಕ್ರಮ ಆಸ್ತಿ ಗಳಿಕೆ ಆರೋಪದ ಮೇಲೆ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಬಂಧಿಸಿದ್ದಾರೆ.

ಮೋಹನ್ ನಾಯ್ಕ್ ಜಾರುಪ್ಲ ಬಂಧಿತ ಅಧಿಕಾರಿ. ಈತ ತನ್ನ ಸರ್ಕಾರಿ ಸೇವೆಯ ಅವಧಿಯಲ್ಲಿ ಕಾನೂನು ಬಾಹಿರವಾಗಿ ಆದಾಯಕ್ಕಿಂತಲೂ ಹೆಚ್ಚಿನ ಆಸ್ತಿ ಗಳಿಸಿದ್ದಾನೆ ಎಂದು ಆರೋಪಿಸಲಾಗಿದೆ. ಈ ಹಿನ್ನೆಲೆ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ದೂರಿನ ಮೇರೆಗೆ ಎಸಿಬಿ ಅಧಿಕಾರಿಗಳು ಮೋಹನ್ ನಾಯ್ಕ್ ಅವರ ಕಚೇರಿ, ನಿವಾಸ ಹಾಗೂ ಅವರ ಸಂಬಂಧಿಕರು, ಆಪ್ತರಿಗೆ ಸೇರಿದ ಒಟ್ಟು 15ಕ್ಕೂ ಹೆಚ್ಚು ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿ ಶೋಧ ಕಾರ್ಯ ನಡೆಸಿದ್ದರು. ದಾಳಿ ವೇಳೆ ತನಿಖಾಧಿಕಾರಿಗಳು ಅಪಾರ ಪ್ರಮಾಣದ ಚರ ಮತ್ತು ಸ್ಥಿರ ಆಸ್ತಿಗಳನ್ನು ಪತ್ತೆಹಚ್ಚಿ ವಶಕ್ಕೆ ಪಡೆದಿದ್ದಾರೆ. ಎಸಿಬಿ ನೀಡಿರುವ ಅಧಿಕೃತ ಮಾಹಿತಿಯ ಪ್ರಕಾರ, ನಿಜಾಮಾಬಾದ್ ಜಿಲ್ಲೆಯ ದಿಚ್‌ಪಲ್ಲಿ ಮಂಡಲದ ಮುಲ್ಲಂಗಿಯಲ್ಲಿ 19.38 ಎಕರೆ ವಿಸ್ತೀರ್ಣದ 5 ಕೃಷಿ ಭೂಮಿಯ ದಾಖಲೆಗಳು ಸಿಕ್ಕಿದ್ದು, ಇದರ ಸರ್ಕಾರಿ ಮೌಲ್ಯ 82.9 ಲಕ್ಷ ರೂ.ಗಳಾಗಿವೆ. ಇದರೊಂದಿಗೆ ಕೊಂಪಲ್ಲಿಯಲ್ಲಿ 3 ಮತ್ತು ಗಚಿಬೌಲಿಯಲ್ಲಿ 4 ಸೇರಿದಂತೆ ಒಟ್ಟು 7 ಫ್ಲಾಟ್‌ಗಳು ಪತ್ತೆಯಾಗಿದ್ದು, ಅಂದಾಜು 7.35 ಕೋಟಿ ರೂ.ಗಳಾಗಿವೆ.

ಅಫ್ಘನ್ ಮೇಲೆ ಪಾಕ್‌ನಿಂದ ಮತ್ತೆ ದಾಳಿ



ಅಫ್ಘಾನಿಸ್ತಾನ: ಪಾಕಿಸ್ತಾನವು ಗಡಿಯಲ್ಲಿ ಮತ್ತೆ ದಾಳಿ ಆರಂಭಿಸಿದ್ದು, ಘಟನೆಯಲ್ಲಿ 12ಕ್ಕೂ ಅಧಿಕ ಮಂದಿ ಮೃತಪಟ್ಟಿದ್ದಾರೆ ಎಂದು ಅಫ್ಘಾನಿಸ್ತಾನದ ಅಧಿಕಾರಿಗಳು ಬುಧವಾರ ಹೇಳಿದ್ದಾರೆ. ಕಳೆದ ರಾತ್ರಿ ಪಾಕಿಸ್ತಾನದ ಸೈನ್ಯವು ಮತ್ತೆ ನಮ್ಮ ವಾಯುಗಡಿಯನ್ನು ಉಲ್ಲಂಘಿಸಿದೆ. ಕುನಾರ್, ಖೋಸ್ಟ್ ಮತ್ತು ಪಕ್ತಿಕಾ ಪ್ರಾಂತ್ಯಗಳಲ್ಲಿ ನಾಗರಿಕ ಕಟ್ಟಡಗಳ ಮೇಲೆ ದಾಳಿ ನಡೆಸಿದೆ. ಘಟನೆಯಲ್ಲಿ 11 ಮಕ್ಕಳು ಹಾಗೂ ಒಬ್ಬ ಮಹಿಳೆ ಸೇರಿದಂತೆ 12 ಮಂದಿ ಮೃತಪಟ್ಟಿದ್ದಾರೆ ಎಂದು ಅಫ್ಘಾನಿಸ್ತಾನ ಸರ್ಕಾರದ ವಕ್ತಾರ ಜಬಿಹುಲ್ಲಾ ಮುಜಾಹಿದ್ ಹೇಳಿದ್ದಾರೆ. ಪಾಕಿಸ್ತಾನದ ಗಡಿ ಭಾಗದಲ್ಲಿರುವ ಖೋಸ್ಟ್ ಪ್ರಾಂತ್ಯವೊಂದರಲ್ಲೇ 9 ಮಂದಿ ಮೃತಪಟ್ಟಿದ್ದು, 10ಕ್ಕೂ ಅಧಿಕ ಜನ ಗಾಯಗೊಂಡಿದ್ದಾರೆ. ಕುನಾರ್, ಪಕ್ತಿಕಾ ಪ್ರಾಂತ್ಯದಲ್ಲಿ ಮೂವರು ಮೃತಪಟ್ಟಿದ್ದಾರೆ ಎಂದು ತಿಳಿಸಿದ್ದಾರೆ.

ಘಟನೆಯ ಕುರಿತು ಪಾಕಿಸ್ತಾನ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.ಕಳೆದ ಫೆಬ್ರುವರಿಯಲ್ಲಿ ಎರಡು ದೇಶಗಳ ನಡುವೆ ಉಂಟಾಗಿದ್ದ ಗಡಿ ಸಂಘರ್ಷವು, ಆ ನಂತರ ತಣ್ಣಗಾಗಿತ್ತು. ಈ ದಾಳಿಯು, ಗಡಿ ಸಂಘರ್ಷದ ನಂತರ ಉಭಯ ದೇಶಗಳ ನಡುವೆ ನಡೆದ ಭೀಕರ ಘಟನೆಯಾಗಿದೆ. ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವಿನ ಗಡಿ ಸಂಘರ್ಷದಲ್ಲಿ ಈ ವರ್ಷ 372 ಅಫ್ಘನ್ ನಾಗರಿಕರು ಮೃತಪಟ್ಟಿದ್ದಾರೆ ಎಂದು ಇತ್ತೀಚೆಗೆ ವಿಶ್ವಸಂಸ್ಥೆ ವರದಿ ಬಹಿರಂಗಪಡಿಸಿತ್ತು.

ಕನ್ನಡಿಗರೇ ಕೊಟ್ಟಿಯೂರಿಗೆ ಬನ್ನಿ, ಭದ್ರತೆ ಕೊಡ್ತೀವಿ...!



ತಿರುವನಂತಪುರಂ: ಕೇರಳಂನ ಕೊಟ್ಟಿಯೂರು ದೇವಾಲಯಕ್ಕೆ ಹೋಗಿದ್ದ ಕರ್ನಾಟಕದ ಭಕ್ತರ ಮೇಲಿನ ದೌರ್ಜನ್ಯ ಪ್ರಕರಣ ವೈರಲ್ ಆಗುತ್ತಿರುವ ಬೆನ್ನಲ್ಲೇ ಈ ಕುರಿತು ಮಾತನಾಡಿರುವ ಕರ್ನಾಟಕ ಮೂಲದ ಕೇರಳ ಐಪಿಎಸ್ ಅಧಿಕಾರಿ DIG ಯತೀಶ್ ಚಂದ್ರ ದೇಗುಲಕ್ಕೆ ಬರುವಂತೆ ಕನ್ನಡಿಗರನ್ನು ಕನ್ನಡದಲ್ಲೇ ಸ್ವಾಗತಿಸಿದ್ದಾರೆ. ಹೌದು.. ಕೇರಳಂನ ಕೊಟ್ಟಿಯೂರು ದೇವಾಲಯಕ್ಕೆ ಹೋಗಿದ್ದ ಕರ್ನಾಟಕದ ಭಕ್ತರ ಮೇಲೆ ದೌರ್ಜನ್ಯ ಕುರಿತ ವೀಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ವೈರಲ್ ಆಗುತ್ತಲೇ ದೇಗುಲದ ಆಡಳಿತ ಮಂಡಳಿ ಮತ್ತು ಕೇರಳ ಸರ್ಕಾರದ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಯಾರೂ ಈ ದೇವಾಲಯಕ್ಕೆ ಭೇಟಿ ನೀಡಬೇಡಿ ಎಂದು ನೊಂದ ಕನ್ನಡಿಗರು ಆಕ್ರೋಶ ಹೊರಹಾಕುತ್ತಿದ್ದಾರೆ. ಅಲ್ಲಿನ ವ್ಯವಸ್ಥೆ, ನಿರ್ವಹಣೆಯ ಕುರಿತು ಆಕ್ಷೇಪಿಸಿದ್ದಾರೆ. ಈ ಬೆಳವಣಿಗೆ ಬೆನ್ನಲ್ಲೇ ಕೇರಳಂ ಡಿಐಜಿ ಯತೀಶ್ ಚಂದ್ರ ಅವರು ಕನ್ನಡಿಗರು ಕೊಟ್ಟಿಯೂರಿಗೆ ಆಗಮಿಸುವಂತೆ ಮನವಿ ಮಾಡಿದ್ದಾರೆ. ಇಂದು ದೇಗುಲಕ್ಕೆ ಭೇಟಿ ಕೊಟ್ಟಿದ್ದ ಕರ್ನಾಟಕ ಮೂಲದ ಐಪಿಎಸ್ ಅಧಿಕಾರಿ ಡಿಐಜಿ ಯತೀಶ್ ಚಂದ್ರ ಅವರು, ಅಲ್ಲಿನ ಭದ್ರತಾ ವ್ಯವಸ್ಥೆಯನ್ನು ಪರಿಶೀಲಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನ್ನಡದಲ್ಲೇ ಮಾತನಾಡಿ ಕರ್ನಾಟಕದ ಭಕ್ತರನ್ನು ಸ್ವಾಗತಿಸಿದ್ದಾರೆ.

ಕಾವೇರಿ ನದಿಯಲ್ಲಿ ಮುಳುಗಿ ನಾಗಲ್ಯಾಂಡ್ ಮೂಲದ ಇಬ್ಬರು ಸಾವು



ಕುಶಾಲನಗರ,ಜೂ.10–ಕಾವೇರಿ ನದಿಯಲ್ಲಿ ಮುಳುಗಿ ನಾಗಲ್ಯಾಂಡ್ ಮೂಲದ ಇಬ್ಬರು ಯುವಕರು ಸಾವನ್ನಪ್ಪಿರುವ ಘಟನೆ ಕುಶಾಲನಗರ ರಸೂಲ್ ಲೇಔಟ್ ಬಳಿ ಬುಧವಾರ ಸಂಜೆ ನಡೆದಿದೆ.

ನಾಗಾಲಾಂಡ್ ರಾಜ್ಯದ ಬಸೋಸೊಕುಂ ಚಂಗ್(23) ಹಾಗೂ ಯಾಂಕಾಂಗ್ (27) ಮೃತ ಯುವಕರಾಗಿದ್ದಾರೆ.

ಕುಶಾಲನಗರದ ಹೋಟೆಲ್ ಒಂದರಲ್ಲಿ ಕೆಲಸ ನಿರ್ವಹಿಸುತ್ತಿದ್ದ ಈ ಇಬ್ಬರು ಯುವಕರು ಹಾಗೂ ಓರ್ವ ಯುವತಿ ಕೆಲಸಕ್ಕೆ ರಜೆ ಹಾಕಿ ಸಂಜೆ ವೇಳೆ ಕಾವೇರಿ ನದಿಯತ್ತ ತೆರಳಿದ್ದಾರೆ. ನದಿ ದಡದಲ್ಲಿ ಪಾರ್ಟಿ ಮಾಡಿದ ಬಳಿಕ ಇಬ್ಬರು ಯುವಕರು ನದಿಗಿಳಿದಿದ್ದಾರೆ. ಈ ಸಂದರ್ಭ ಆಳವಾದ ಗುಂಡಿಯಲ್ಲಿ ಸಿಲುಕಿ ಮುಳುಗಿ ಯುವಕರು ಮೃತಪಟ್ಟಿದ್ದಾರೆ. ಪೊಲೀಸರು ಮತ್ತು ಅಗ್ನಿ ಶಾಮಕ ದಳದ ಸಿಬ್ಬಂದಿಗಳು ತೆರಳಿ ಮೃತದೇಹಗಳಿಗಾಗಿ ಶೋಧ ಕಾರ್ಯಾಚರಣೆ ನಡೆಸಿದರು. ಕತ್ತಲಾದ ಹಿನ್ನೆಲೆಯಲ್ಲಿ ಶೋಧ ಕಾರ್ಯಾಚರಣೆಯನ್ನು ಗುರುವಾರಕ್ಕೆ ಮುಂದೂಡಲಾಗಿದೆ. ಕುಶಾಲನಗರ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಹೆದ್ದಾರಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕೇಂದ್ರದಿಂದ 22 ಕೋಟಿ ರೂ. ಮಂಜೂರು

ಸಂಸದ ಯದುವೀರ್ ಪ್ರಕಟಣೆ



ಮಡಿಕೇರಿ, ಜೂ.10–ಜಿಲ್ಲೆಯ ರಸ್ತೆ ಮೂಲಸೌಕರ್ಯ ಅಭಿವೃದ್ಧಿಗೆ ಮಹತ್ವದ ಉತ್ತೇಜನ ನೀಡುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಸ್ತೆ ಮತ್ತು ಮೂಲಸೌಕರ್ಯ ನಿಧಿ ಅಡಿ ಯಲ್ಲಿ ಜಿಲ್ಲೆಯ 3 ಪ್ರಮುಖ ರಾಜ್ಯ ಹೆದ್ದಾರಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು 22 ಕೋಟಿ ರೂ. ಮಂಜೂರು ಮಾಡಿದೆ ಎಂದು ಸಂಸದ ಯದುವೀರ್ ತಿಳಿಸಿ ದ್ದಾರೆ.

ಮಂಜೂರಾಗಿರುವ ಕಾಮಗಾರಿ: ಗೋಪಾಲಪುರ–ಬಾಣಾವರ–ಹೆಬ್ಬಾಲೆ ಮಾರ್ಗವಾಗಿ ಮುಳ್ಳೂರು ಹಾಗೂ ಮಲಂಬಿ ಸಂಪರ್ಕಿಸುವ ಸೋಮವಾರಪೇಟೆ ತಾಲೂಕಿನ ರಸ್ತೆ ಅಭಿವೃದ್ಧಿಗೆ 6 ಕೋಟಿ ರೂ., ಮಡಿಕೇರಿ–ಕುಟ್ಟ ರಸ್ತೆ, ಕುಶಾಲನಗರ ಮತ್ತು ಮಡಿಕೇರಿ ತಾಲೂಕುಗಳನ್ನು ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ 10 ಕೋಟಿ ರೂ, ವಿರಾಜ ಪೇಟೆ ತಾಲೂಕಿನ ಆಯ್ದ ಭಾಗಗಳ ರಸ್ತೆ ಅಭಿವೃದ್ಧಿಗೆ 6 ಕೋಟಿ ರೂ ಹಂಚಿಕೆ ಮಾಡಲಾಗಿದೆ. ಈ ರಸ್ತೆಗಳು ಜಿಲ್ಲೆಯ ನಿವಾಸಿಗಳು, ರೈತರು, ವಿದ್ಯಾರ್ಥಿಗಳು, ಪ್ರವಾಸಿಗರು ಹಾಗೂ ವ್ಯಾಪಾರ ವಲಯದವರಿಗೆ ಅತ್ಯಂತ ಪ್ರಮುಖ ಸಂಪರ್ಕ ಮಾರ್ಗಗಳಾಗಿವೆ ಎಂದರು.

ಈ ಕಾಮಗಾರಿಗಳ ಅನುಷ್ಠಾನದಿಂದ ರಸ್ತೆ ಸುರಕ್ಷತೆ, ಪ್ರಯಾಣಿಕರ ಅನುಕೂಲತೆ ಹಾಗೂ ಸಾರಿಗೆ ದಕ್ಷತೆ ಹೆಚ್ಚುವುದರ ಜೊತೆಗೆ ಪ್ರವಾಸೋದ್ಯಮ ಮತ್ತು ಆರ್ಥಿಕ ಚಟುವಟಿಕೆಗಳಿಗೂ ಉತ್ತೇಜನ ದೊರೆಯಲಿದೆ ಎಂದರು. ಲೋಕಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಇನ್ನಷ್ಟು ಮೂಲಸೌಕರ್ಯ ಹೂಡಿಕೆಗಳು ಹಾಗೂ ಅಭಿವೃದ್ಧಿ ಯೋಜನೆಗಳನ್ನು ತರುವ ತಮ್ಮ ಬದ್ಧತೆಯನ್ನು ಪುನರುಚ್ಚರಿಸಿದರು. ಈ ಮಂಜೂರಾತಿ ದೊರಕಲು ಸಹಕರಿಸಿದ ಕೇಂದ್ರ ಸರ್ಕಾರ, ಸಂಬಂಧಿತ ಇಲಾಖೆ ಅಧಿಕಾರಿಗಳಿಗೆ ಧನ್ಯವಾದ ಅರ್ಪಿಸಿದ್ದಾರೆ.

ಚೆಯ್ಯಂಡಾಣೆಯಲ್ಲಿ ಬೃಹತ್ ತಡೆಗೋಡೆ ಕುಸಿದು ಅಪಾರ ನಷ್ಟ



ಮನೆಯ ಬೃಹತ್ ತಡೆಗೋಡೆ ಕುಸಿದು ಮೊಬೈಲ್ ಟವರ್‌ನ ಸೆಟ್‌ಅಪ್ ರೂಮ್ ಧ್ವಂಸವಾಗಿದೆ.

ಮಡಿಕೇರಿ, ಜೂ.10–ಚೆಯ್ಯಂಡಾಣೆ ಪಟ್ಟಣದ ಹೃದಯ ಭಾಗದಲ್ಲಿರುವ ಮನೆಯ ಬೃಹತ್ ತಡೆಗೋಡೆ ಕುಸಿದು ಬಿದ್ದು ಅಪಾರ ಪ್ರಮಾಣದ ನಷ್ಟ ಸಂಭವಿಸಿದ ಘಟನೆ ಮಂಗಳವಾರ ಸಂಜೆ ನಡೆದಿದೆ.

ಚೆಯ್ಯಂಡಾಣೆಯ ಬಿ.ಆರ್. ಸುರೇಶ್ ಎಂಬುವರ ಮನೆಯ ಬೃಹತ್ ತಡೆಗೋಡೆ ಮಂಗಳವಾರ ಸುರಿದ ಗಾಳಿ ಮಳೆಗೆ ಕುಸಿದು ಬಿದ್ದಿದೆ. ತಡೆಗೋಡೆಯ ಕಲ್ಲುಗಳು ಮತ್ತು ಮಣ್ಣು ಸಮೀಪದಲ್ಲೇ ಇದ್ದ ಮೊಬೈಲ್ ಟವರ್‌ನ ಸೆಟ್‌ಅಪ್ ರೂಮ್‌ಗೆ ಅಪ್ಪಳಿಸಿದ್ದು, ಧ್ವಂಸವಾಗಿದೆ. ಪರಿಣಾಮ ನೆಟ್‌ವರ್ಕ್ ಸಮಸ್ಯೆ ತಲೆದೋರಿದ್ದು, ಚೆಯ್ಯಂ ಡಾಣೆ ವ್ಯಾಪ್ತಿಯಲ್ಲಿ ನೆಟ್‌ವರ್ಕ್ ಸಮಸ್ಯೆ ತಲೆದೋರಿದೆ.

ದರೋಡೆ ಯತ್ನ; ಕೇರಳದಲ್ಲಿ ವಿರಾಜಪೇಟೆ ಯುವಕನ ಬಂಧನ



ಬಂಧಿತ ಆರೋಪಿ ಅಭಿ

ವಿರಾಜಪೇಟೆ, ಜೂ.10–ಕೇರಳದ ಕಲ್ಲಿಕೋಟೆ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಪ್ರಯಾಣಿಕರಿಂದ ನಗದು, ಚಿನ್ನ ದರೋಡೆಗೆ ಸಂಚು ರೂಪಿಸಿದ್ದ ವಿರಾಜ ಪೇಟೆ ಯುವಕ ಸೇರಿ 13 ಮಂದಿಯನ್ನು ಪೊಲೀಸರು ಬಂಧಿಸಿ, ಅವರ ಯೋಜನೆಯನ್ನು ವಿಫಲಗೊಳಿಸಿದ್ದಾರೆ.

ವಿರಾಜಪೇಟೆ ನಿವಾಸಿ ಕೇಬಲ್ ವೃತ್ತಿನಿರತನಾಗಿದ್ದ ಅಭಿ(31) ಸೇರಿದಂತೆ ಕಣ್ಣೂರು ಮತ್ತು ಕಲ್ಲಿಕೋಟೆ ಜಿಲ್ಲೆಯ 10 ಮಂದಿ, ಮಲಪುರಂ ಜಿಲ್ಲೆಯ ಇಬ್ಬರು ಸೇರಿ 13 ಮಂದಿ ಬಂಧನ ಕ್ಕೊಳಗಾಗಿದ್ದಾರೆ.

ಬಂಧಿತ ಯುವಕರಿಂದ ಕೃತ್ಯಕ್ಕೆ ಬಳಸಿದ್ದ ಮೂರು ಕಾರು, ಎರಡು ದ್ವಿಚಕ್ರ ವಾಹನ ಸೇರದಂತೆ ಮೊಬೈಲುಗಳನ್ನು ವಶಕ್ಕೆ ಪಡೆದಿದ್ದಾರೆ.

ಮೊಬೈಲುಗಳನ್ನು ವಶಕ್ಕೆ ಪಡೆದಿರುವ ಪೊಲೀಸರು ವಾಟ್ಸ್ ಅಪ್ ಸಂದೇಶ ಕರೆಗಳನ್ನು ಕಲೆಹಾಕಿ ಹೆಚ್ಚಿನ ತನಿಖೆ ಮುಂದುವರೆಸಿದ್ದಾರೆ.

ಮಡಿಕೇರಿಯಲ್ಲಿ ಮೊದಲ ವರ್ಷಧಾರೆ



ಮಡಿಕೇರಿ, ಜೂ.10–ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ವೇಳೆ ಉತ್ತಮ ಮಳೆಯಾದ ಬಗ್ಗೆ ವರದಿಯಾಗಿದೆ. ಮಧ್ಯಾಹ್ನದವರೆಗೆ ಮೋಡ ಬಿಸಿಲಿನ ವಾತಾವರಣ ಕಂಡು ಬಂದಿದ್ದು, ಸಂಜೆ ವೇಳೆಗೆ ಉತ್ತಮ ಮಳೆ ಸುರಿದಿದೆ. ಮಾನ್ಸೂನ್ ಆರಂಭದ ಬಳಿಕ ನಗರ ವ್ಯಾಪ್ತಿಯಲ್ಲಿ ಇದೇ ಮೊದಲ ಬಾರಿಗೆ ಮಳೆಗಾಲ ಪ್ರಾರಂಭದ ಅನುಭವ ಮೂಡಿಸಿದೆ. ನಗರ ವ್ಯಾಪ್ತಿಯಲ್ಲಿ 1 ಇಂಚು ಮಳೆಯಾಗಿದೆ ಎಂದು ಅಂದಾಜಿಸಲಾಗಿದೆ.

ಏಕಾಏಕಿ ಮಳೆ ಸುರಿದ ಪರಿಣಾಮ ನಗರದ ಗೌಳಿ ಬೀದಿ ರಸ್ತೆಯಲ್ಲಿ ಚರಂಡಿ ನೀರು ಸರಾಗವಾಗಿ ಹರಿಯದೆ ರಸ್ತೆಯನ್ನು ಆವರಿಸಿತ್ತು. ಪರಿಣಾಮ ಅಲ್ಲಿರುವ ಗ್ಯಾರೇಜ್ ಒಂದರ ತಗ್ಗು ರಸ್ತೆಯಲ್ಲಿ ಚರಂಡಿ ನೀರು ನಿಂತು ಪಾದಚಾರಿಗಳು ಮತ್ತು ವಾಹನ ಸವಾರರು ಪರದಾಡಿದ ಘಟನೆಯೂ ನಡೆಯಿತು. ಮಳೆಗಾಲಕ್ಕೂ ಮುನ್ನ ನಗರ ಸಭೆ ಮುಖ್ಯ ಕಾಲುವೆಗಳನ್ನು ಶುಚಿಗೊಳಿಸಿದ್ದು, ಚರಂಡಿಗಳ ನಿರ್ವಹಣೆ ಮರೆತಿದೆ. ಈ ಹಿನ್ನೆಲೆಯಲ್ಲಿ ಮೊದಲ ಮಳೆಯಲ್ಲೇ ಚರಂಡಿಗಳು ತುಂಬಿ ಹರಿಯುತ್ತಿದೆ. ಈ ಕುರಿತು ನಗರ ಸಭೆ ಗಮನಹರಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಂಪಾಜೆ ವ್ಯಾಪ್ತಿಯಲ್ಲಿ ಕಾಡಾನೆ ದಾಳಿ

ನಾಪೋಕ್ಲು: ಸಂಪಾಜೆ ಗ್ರಾಮ ವ್ಯಾಪ್ತಿಯ ಗೂನಡ್ಕ, ಪೇರ ಭಾಗಗಳಲ್ಲಿ ಕಾಡಾನೆಗಳು ನಿರಂತರವಾಗಿ ತೋಟಗಳಿಗೆ ದಾಳಿ ಮಾಡಿ ಕೃಷಿ ಹಾನಿ ಉಂಟು ಮಾಡುತ್ತಿದೆ. ಆನೆಗಳನ್ನು ಕಾಡಿಗಟ್ಟುವುದಕ್ಕಾಗಿ ವಿಶೇಷ ಕಾರ್ಯಪಡೆಯ ಸಿಬ್ಬಂದಿ ಸತತ ಕಾರ್ಯ ನಿರ್ವಹಿಸುತ್ತಾರೆ.

ಸಂಪಾಜೆ ಗ್ರಾಮದ ಗೂನಡ್ಕದಲ್ಲಿ ಕಾಡಾನೆಗಳ ಹಾವಳಿ ಅಧಿಕವಾಗಿದ್ದು, ಆನೆ ಕಂದಕ ನಿರ್ಮಾಣ, ವಿದ್ಯುತ್ ಬೇಲಿ ನಿರ್ಮಾಣಗಳನ್ನು ಕೈಗೊಳ್ಳಲಾಗಿದೆ. ಕಾಡಾನೆಗಳು ಗೂನಡ್ಕ ಬೈಲಬಾಗದಿಂದ ಬಂದು ಪೇರಡ್ಕ ಪ್ರದೇಶಗಳಿಗೆ ಹೋಗುತ್ತಿವೆ. ಸಂಜೆಯಾಗುತ್ತಿದ್ದಂತೆ ಕಾಡಿನಿಂದ ಹೊರಬರುವ ಕಾಡಾನೆಗಳು ಕೃಷಿ ಫಸಲು ಧ್ವಂಸ ಮಾಡು ತ್ತಿರುವುದು ಕೃಷಿಕರನ್ನು ಕಂಗೆಡಿಸಿದೆ.

ಕಾರ್ಯಾಚರಣೆ ಪಡೆ ಕಾಡಾನೆಗಳನ್ನು ಕಾಡಿಗಟ್ಟುವಲ್ಲಿ ಶ್ರಮಿಸಿದರು. ಗ್ರಾಮಸ್ಥರಿಗೆ ಕಾಡಾನೆಗಳಿಂದ ಉಂಟಾಗುವ ತೊಂದರೆಯಿಂದ ರಕ್ಷಣೆ ನೀಡುವತ್ತ ಹೆಚ್ಚಿನ ಗಮನ ನೀಡುವಂತೆ ಆರೋಗ್ಯ ಸಚಿವ ಯು.ಟಿ. ಖಾದರ್ ಅರಣ್ಯಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಆನೆ ಕಾರ್ಯ ಪಡೆಯನ್ನು ಎರಡು ಭಾಗಗಳನ್ನಾಗಿ ಮಾಡಿ, ಹಗಲು ರಾತ್ರಿ ಕಾಡಾನೆಗಳ ಉಪಟಳದ ನಿಗ್ರಹಕ್ಕೆ ಪ್ರಯತ್ನಿಸಲಾಗಿದೆ. ಕಾಡಾನೆಗಳು ಕೃಷಿಕರ ತೋಟಗಳಿಗೆ ಇಳಿಯದೆ ಕಾಡಲ್ಲೇ ಉಳಿಯುವಂತೆ ಮಾಡಲು ರಕ್ಷಣಾ ಕಾರ್ಯವನ್ನು ರಕ್ಷಣಾ ಪಡೆ ಮಾಡುತ್ತಿದ್ದು ಅರಣ್ಯ ಇಲಾಖೆಯೊಂದಿಗೆ ಗ್ರಾಮಸ್ಥರು ಕೂಡ ಕೈಜೋಡಿಸಿದ್ದಾರೆ.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳು ಜೂನ್‌ನಲ್ಲಿ ಕಾರ್ಯಾರಂಭ

ಕ್ರಮ ವಹಿಸಲು ಜಿಪಂ ಸೂಚನೆ



ಜಿಪಂ ಮುಖ್ಯ ಕಾರ್ಯದರ್ಶಿ ನಂದಿನಿ ಸಭೆ ನಡೆಸಿದರು.

ಮಂಡ್ಯ: ಸ್ವಚ್ಛ ಭಾರತ್ ಮಿಷನ್ ಗ್ರಾಮೀಣ ಯೋಜನೆಯ ಹಂತ 2 ರ ಮಾರ್ಗಸೂಚಿಗಳ ಅನ್ವಯ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗಾಗಿ ವ್ಯವಸ್ಥೆ ಕಲ್ಪಿಸುವುದಕ್ಕೆ ಆದ್ಯತೆಯನ್ನು ನೀಡಲಾಗಿದ್ದು, ಪಾಂಡವಪುರ ತಾಲ್ಲೂಕಿನ ಚಿನಕುರಳಿ ಗ್ರಾಮ ಪಂಚಾಯಿತಿ, ನಾಗಮಂಗಲ ತಾಲೂಕಿನ ಹುಲಿಕೆರೆ ಗ್ರಾ.ಪಂ., ಕೆ.ಆರ್.ಪೇಟೆ ತಾಲ್ಲೂಕಿನ ಚೌಡೇನಹಳ್ಳಿ ಗ್ರಾ.ಪಂ. ಮತ್ತು ಶ್ರೀರಂಗಪಟ್ಟಣ ತಾಲೂಕಿನ ಮಹದೇವಪುರ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಗಳಲ್ಲಿ ತಲಾ 16 ಲಕ್ಷಗಳ ವೆಚ್ಚದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ.

ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಚ್ಛ ಸಂಕೀರ್ಣ ಘಟಕಗಳಲ್ಲಿ ಸಂಗ್ರಹಣೆ ಮಾಡಲಾಗುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಆಯಾ ತಾಲೂಕಿನ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳಿಗೆ ಸಾಗಾಣಿಕೆ ಮಾಡಲಾಗುವುದು ಎಂದು ಜಿಪಂ ಮುಖ್ಯ ಕಾರ್ಯದರ್ಶಿ ನಂದಿನಿ ತಿಳಿಸಿದರು.

ತ್ಯಾಜ್ಯದಿಂದ ಸಂಪತ್ತು ಎಂಬ ಪರಿಕಲ್ಪನೆಯೊಂದಿಗೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳಲ್ಲಿ ಸ್ವಸಹಾಯ ಸಂಘದ ಮಹಿಳೆಯರು ಪ್ಲಾಸ್ಟಿಕ್ ತ್ಯಾಜ್ಯಗಳನ್ನು ವಿವಿಧ ಮಾದರಿಯಾಗಿ ವಿಂಗಡಣೆ ಹಾಗೂ ಬೇಲಿಂಗ್ ಮಾಡಿ, ಸಿಮೆಂಟ್ ಉತ್ಪಾದನಾ ಕಾರ್ಖಾನೆಗಳಿಗೆ ಮಾರಾಟ ಮಾಡಲು ಅನುವಾಗುವಂತೆ ಅಗತ್ಯ ಯಂತ್ರೋಪಕರಣಗಳನ್ನು ಸರಬರಾಜು ಮಾಡಲಾಗುವುದು ಎಂದು ಅವರು ತಿಳಿಸಿದರು.

ಈ ಘಟಕಗಳಿಗೆ ತುರ್ತಾಗಿ ವಿದ್ಯುತ್ ವ್ಯವಸ್ಥೆ ಕಲ್ಪಿಸಲು ಚೆಸ್ಕಾಂ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳಿಗೆ ಇತ್ತೀಚೆಗೆ ನಡೆದ ಸಭೆಯಲ್ಲಿ ಸಿ.ಇ.ಒ. ಸೂಚನೆ ನೀಡಿದರು. ಜಿಲ್ಲೆಗೆ ಅನುಮೋದನೆಗೊಂಡಿರುವ ನಾಲ್ಕು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕಗಳು ಜೂನ್ ಅಂತ್ಯದೊಳಗೆ ಕಾರ್ಯಾರಂಭಕ್ಕೆ ಕ್ರಮ ವಹಿಸಲು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯವನ್ನು ಮದ್ದೂರು ತಾಲೂಕಿನ ಕದಲೂರು ಗ್ರಾಮ ಪಂಚಾಯಿತಿಯ ಹೊಸಹಳ್ಳಿ ಗ್ರಾಮದಲ್ಲಿ ನಿರ್ಮಾಣವಾಗಿರುವ ವಸ್ತು ಪುನಸಂಪಾದನಾ ಕೇಂದ್ರದಲ್ಲಿ ನಿರ್ವಹಣೆ ಮಾಡಲಾಗುವುದು ಎಂದು ತಿಳಿಸಿದರು.

ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026 ರಲ್ಲಿ ಉಲ್ಲೇಖಿಸಲಾಗಿರುವ ನಿಯಮಗಳನ್ನು ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಅಳವಡಿಸಲು ಕ್ರಮವಹಿಸಲಾಗುತ್ತಿದೆ. ಈ ನಿಯಮದಂತೆ ಮನೆಯ ಹಂತದಲ್ಲಿಯೇ ತ್ಯಾಜ್ಯವನ್ನು ನಾಲ್ಕು ವಿಧಗಳಾದ ಹಸಿ ಕಸ, ಒಣ ಕಸ, ಸ್ಯಾನಿಟರಿ ತ್ಯಾಜ್ಯ ಹಾಗೂ ವಿಶೇಷ ಕಾಳಜಿಯ ತ್ಯಾಜ್ಯಗಳಾಗಿ (ಬ್ಯಾಟರಿ, ಬ್ಲೇಡ್, ಬಲ್ಬ್, ಔಷಧಿ. ಇತರೆ) ವಿಂಗಡಿಸುವುದು. ಹಸಿ ತ್ಯಾಜ್ಯವನ್ನು ಮನೆಯ ಹಂತದಲ್ಲಿಯೇ ನಿರ್ವಹಣೆ ಮಾಡಲು ಕಾಂಪೋಸ್ಟಿಂಗ್ ವಿಧಾನ ಅನುಸರಿಸಲು ತಿಳುವಳಿಕೆ ಮೂಡಿಸಲು ಸೂಚಿಸಲಾಗಿದೆ. ಜಿಲ್ಲೆಯಲ್ಲಿ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು–2026ನ್ನು ಪರಿಣಾಮಕಾರಿಯಾಗಿ ಅಳವಡಿಸುವ ಕುರಿತು ಎಲ್ಲಾ ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕಾರ್ಯಾಗಾರ ಆಯೋಜಿಸಲು ನಿರ್ಣಯಿಸಲಾಗಿದೆ.

ಸಭೆಯಲ್ಲಿ ಸುಂದರ್ ರಾಜ್, ಯೋಜನಾ ನಿರ್ದೇಶಕರು, ಜಿ.ಪಂ., ಮಂಡ್ಯ, ಶ್ರೀ ಜಿ. ಶ್ರೀಹರ್ಷ, ಸಹಾಯಕ ಯೋಜನಾಧಿಕಾರಿ, ಜಿ.ಪಂ., ಮಂಡ್ಯ ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆ ಮತ್ತು ಶ್ರೀರಂಗಪಟ್ಟಣ ವ್ಯಾಪ್ತಿಯ ಚೆಸ್ಕಾಂ ಕಾರ್ಯಪಾಲಕ ಅಭಿಯಂತರರು ಹಾಗೂ ಪಾಂಡವಪುರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಾಂಡವಪುರ, ನಾಗಮಂಗಲ, ಕೆ.ಆರ್.ಪೇಟೆ ಮತ್ತು ಶ್ರೀರಂಗಪಟ್ಟಣ ತಾಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಡುಕೊತ್ತನಹಳ್ಳಿಯಲ್ಲಿ ಚಿರತೆ ದಾಳಿಗೆ ಹಸು ಬಲಿ: ಗ್ರಾಮಸ್ಥರ ಆಕ್ರೋಶ



ಭಾರತೀನಗರ, ಜೂ.10– ಇಲ್ಲಿಗೆ ಸಮೀಪದ ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ಹಸುವಿನ ಮೇಲೆ ಚಿರತೆ ದಾಳಿ ನಡೆಸಿ ಬಲಿ ಪಡೆದಿರುವ ಘಟನೆ ಜರುಗಿದೆ.

ಕಾಡುಕೊತ್ತನಹಳ್ಳಿ ಗ್ರಾಮದ ಕಪನೀಗೌಡರಿಗೆ ಸೇರಿದ ಹಸು ಚಿರತೆ ದಾಳಿಗೆ ಬಲಿಯಾಗಿರುವುದು. ಜಮೀನಿನಲ್ಲಿ ಹಸು ಮೇಯುತ್ತಿದ್ದ ವೇಳೆ ಚಿರತೆ ದಾಳಿ ನಡೆಸಿ ಅರೆ ಬರೆ ತಿಂದು ಪರಾರಿಯಾಗಿದೆ.

ಚಿರತೆ ದಾಳಿಯಿಂದ ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಬೋನ್ ಇಡದೆ ವಾಪಸ್ ಆಗಿದ್ದಾರೆ. ಇದರಿಂದ ಗ್ರಾಮಸ್ಥರು ಅರಣ್ಯ ಇಲಾಖೆ ನಿರ್ಲಕ್ಷ್ಯದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಚಿರತೆ ಸೆರೆ ಹಿಡಿಯುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಅಭಿನಂದನೆ



ಮಂಡ್ಯ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಂ ನಂದೀಶ್ ಅವರನ್ನು ಶ್ರೀರಂಗಪಟ್ಟಣ ತಾಲೂಕು ಒಕ್ಕಲಿಗರ ಸಂಘದ ಸಭಾಂಗಣದಲ್ಲಿ ತಾಲೂಕು ಒಕ್ಕಲಿಗರ ಸಂಘದ ನಿರ್ದೇಶಕರು ಅಭಿನಂದಿಸಿದರು. ಈ ಸಂದರ್ಭದಲ್ಲಿ ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಎಲ್.ದಿನೇಶ್, ಕಾರ್ಯದರ್ಶಿ ಗುರುಮೂರ್ತಿ, ಕಾರ್ಯಾಧ್ಯಕ್ಷ ಶಿವಸ್ವಾಮಿ, ತಿಲಕ್ ಬಾಬು, ಪ್ರಸನ್ನ ಕುಮಾರ್, ಯತೀಶ್, ಯೋಗಣ್ಣ, ಅರೆಕಾರ್ರೆ ಮರಿಗೌಡ ಹಾಗೂ ಇತರರು ಉಪಸ್ಥಿತರಿದ್ದರು.

ಜನ, ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಚಿರತೆ ಬೋನಿಗೆ



ಮಂಗಳವಾರ ರಾತ್ರಿ ಬೋನಿಗೆ ಬಿದ್ದಿರುವ ಚಿರತೆ.

ಕಿಕ್ಕೇರಿ: ಹೋಬಳಿಯ ರಾಮನಹಳ್ಳಿ ಗ್ರಾಮದ ಪುಟ್ಟರಾಜು ಜಮೀನು ಬಳಿ ಅರಣ್ಯ ಇಲಾಖೆ ಇರಿಸಿದ್ದ ಬೋನಿನಲ್ಲಿ ಮಂಗಳವಾರ ರಾತ್ರಿ ಸುಮಾರು 5 ವರ್ಷದ ಗಂಡು ಚಿರತೆ ಸೆರೆಯಾಗಿದ್ದು, ಆತಂಕದಲ್ಲಿದ್ದ ರೈತರಿಗೆ ತುಸು ನೆಮ್ಮದಿ ತಂದಿದೆ.

ಈ ವ್ಯಾಪ್ತಿಯಲ್ಲಿ ಸಾಕಷ್ಟು ಕಬ್ಬಿನ ಗದ್ದೆ, ಗುಡ್ಡ ಪ್ರದೇಶವಿದ್ದು, ಸುತ್ತಮುತ್ತಲ ಪ್ರದೇಶದಲ್ಲಿ ಚಿರತೆ ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಿತ್ತು. ರೈತರು ಸಾಕಿದ್ದ ಜಾನುವಾರು, ಕುರಿ, ಮೇಕೆ, ಕೋಳಿ, ಸಾಕು ನಾಯಿಗಳ ಮೇಲೆ ದಾಳಿ ಮಾಡಿ ಕೊಂದು ತಿಂದು ಹಾಕುತ್ತಿತ್ತು. ರೈತರ ಕೊಟ್ಟಿಗೆಗಳಿಗೆ ನುಗ್ಗಿ ಕಟ್ಟಿ ಹಾಕಲಾಗುತ್ತಿದ್ದ ಜಾನುವಾರುಗಳನ್ನು ಹೊತ್ತುಕೊಂಡು ಹೋಗಿ ತಿಂದು ಹಾಕುತ್ತಿತ್ತು. ಚಿರತೆ ಉಪಟಳಕ್ಕೆ ರೋಸಿ ಹೋಗಿದ್ದ ರೈತರು ತಾಲೂಕು ವಲಯ ಅರಣ್ಯ ಇಲಾಖೆಗೆ ಚಿರತೆ ಸೆರೆ ಹಿಡಿದು ಜಾನುವಾರು, ಸಾಕು ಪ್ರಾಣಿಗಳನ್ನು ರಕ್ಷಿಸಲು ಮನವಿ ಮಾಡಿದ್ದರು.

ಗ್ರಾಮಸ್ಥರ ಮನವಿ ಮೇರೆ ಸುತ್ತಮುತ್ತಲ ಪ್ರದೇಶ ವೀಕ್ಷಣೆ ಮಾಡಿದ ವಲಯ ಅರಣ್ಯ ಇಲಾಖೆಯವರು ರಾಮನಹಳ್ಳಿಯ ಪುಟ್ಟೇಗೌಡರ ಜಮೀನು ಬಳಿ ಚಿರತೆ ಸೆರೆಗಾಗಿ ವಾರದ ಹಿಂದೆ ಬೋನು ಇರಿಸಿದ್ದರು. ನಿತ್ಯವೂ ಚಿರತೆ ಚಲನವಲನ ವೀಕ್ಷಣೆ ಮಾಡಲಾಗುತ್ತಿತ್ತು.

ಮಂಗಳವಾರ ರಾತ್ರಿ ಆಹಾರ ಹುಡುಕುತ್ತ ಬಂದ ಚಿರತೆ ಬೋನಿನಲ್ಲಿದ್ದ ನಾಯಿ ತಿನ್ನಲು ನುಗ್ಗಿ ಬೋನಿನಲ್ಲಿ ಬಂಧಿಯಾಗಿದೆ. ವಿಷಯ ತಿಳಿದ ಗ್ರಾಮಸ್ಥರು ಚಿರತೆ ವೀಕ್ಷಿಸಲು ಸ್ಥಳಕ್ಕೆ ತಂಡೋಪತಂಡವಾಗಿ ಆಗಮಿಸಿದರು.

ತಾಲೂಕು ವಲಯ ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕೆ ಆಗಮಿಸಿ ಬೋನಿನಲ್ಲಿದ್ದ ಚಿರತೆಯನ್ನು ತಾಲೂಕು ಅರಣ್ಯ ಇಲಾಖೆ ಕಚೇರಿಗೆ ಸುರಕ್ಷಿತವಾಗಿ ರವಾನಿಸಿದರು. ಚಿರತೆ ಆರೋಗ್ಯ ತಪಾಸಣೆ ಮಾಡಿ ಮೇಲಾಧಿಕಾರಿಗಳ ಆದೇಶದಂತೆ ಬಂಡೀಪುರ ಅಥವಾ ನಾಗರಹೊಳೆಯಂತಹ ಸೂಕ್ತವಾದ ರಕ್ಷಿತ ಅಭಯಾರಣ್ಯಕ್ಕೆ ಚಿರತೆ ಬಿಡಲಾಗುವುದು ಎಂದು ತಾಲೂಕು ವಲಯ ಅರಣ್ಯ ಅಧಿಕಾರಿ ಎಂ.ವಿ. ಅನಿತಾ ತಿಳಿಸಿದರು.

ಸಿಬ್ಬಂದಿಗಳಾದ ಉಪವಲಯ ಅರಣ್ಯ ಅಧಿಕಾರಿ ಚೇತನ್, ಅರಣ್ಯ ಪಾಲಕಿ ರಕ್ಷಕಿ ಅಭಿ, ಸಿಬ್ಬಂದಿಗಳಾದ ರವಿಕುಮಾರ್, ಶ್ರೀನಿವಾಸ್, ಚಿರತೆ ಕಾರ್ಯಪಡೆಯ ರಾಜೇಶ್, ಕುಮಾರ್ ಉಪಸ್ಥಿತರಿದ್ದರು.


ಜೂ.13ರಂದು ಪುಸ್ತಕ ಬಿಡುಗಡೆ ಸಮಾರಂಭ


ಮಂಡ್ಯ: ನಂಜಮ್ಮ ಮೋಟೇಗೌಡ ಚಾರಿಟಬಲ್ ಮತ್ತು ಎಜುಕೇಷನಲ್ ಟ್ರಸ್ಟ್ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಿಡುಗಡೆ ಸಮಾರಂಭವನ್ನು ಜೂ.13ರಂದು ಸಂಜೆ 4 ಗಂಟೆಗೆ ನಗರದ ಗಾಂಧಿಭವನದಲ್ಲಿ ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಕೆ.ಟಿ.ಹನುಮಂತು ತಿಳಿಸಿದರು. ಕಾರ್ಯಕ್ರಮದಲ್ಲಿ ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಪ್ರದಾನ ಮಾಡುವರು ಎಂದರು.

ಹಾಸ್ಟೆಲ್, ವಸತಿ ಶಾಲೆ, ಆಸ್ಪತ್ರೆ, ಇಂದಿರಾ ಕ್ಯಾಂಟಿನ್ ಸೇರಿದಂತೆ ವಿವಿಧ ಸ್ಥಳಗಳಿಗೆ ಜಿಲ್ಲಾಧಿಕಾರಿ ಭೇಟಿ

ಚಾಮರಸಿ ಬಗ್ಗೆ ಚರ್ಚೆ, ವಿದ್ಯಾರ್ಥಿಗಳೊಂದಿಗೆ ಊಟ, ಕಾಮಗಾರಿ ವೀಕ್ಷಣೆ, ಬಳೆ ಮಂಟಪ ವೀಕ್ಷಣೆ







ಚಾಮರಾಜನಗರ, ಜೂ.10– ಜಿಲ್ಲಾಧಿಕಾರಿ ಶ್ರೀರೂಪ ಅವರು ಜಿಲ್ಲೆಯ ಹಾಸ್ಟೆಲ್, ವಸತಿ ಶಾಲೆ, ಆಸ್ಪತ್ರೆ, ಇಂದಿರಾ ಕ್ಯಾಂಟಿನ್ ಸೇರಿದಂತೆ ಇನ್ನಿತರ ಸ್ಥಳಗಳಿಗೆ ಅಧಿಕಾರಿಗಳೊಂದಿಗೆ ಬುಧವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮೊದಲಿಗೆ ಉಮ್ಮತ್ತೂರಿನಲ್ಲಿರುವ ಬಾಳೆದಿಂಡಿನಿಂದ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿರುವ ವರ್ಷ ಶ್ರೀಕಂಠಸ್ವಾಮಿ ಅವರ ಆಕೃತಿ ಇಕೋ ಫ್ರೆಂಡ್ಲಿ ಎಂಟರ್ ಪ್ರೈಸಸ್ ಘಟಕಕ್ಕೆ ಭೇಟಿ ನೀಡಿ ವೀಕ್ಷಿಸಿದರು. ಮಹಿಳೆಯರಿಂದ ತಯಾರಿಸಲ್ಪಡುವ ಕರಕುಶಲ ವಸ್ತುಗಳ ಮಾರಾಟ ಹಾಗೂ ಮಾರುಕಟ್ಟೆ ಉತ್ತೇಜನಕ್ಕೆ ಜಿಲ್ಲಾಡಳಿತ ಅನುಷ್ಠಾನಗೊಳಿಸುತ್ತಿರುವ ಚಾಮರಸಿ ಕಾರ್ಯಕ್ರಮದಡಿ ತರಬೇತಿ ನೀಡುವಂತೆಯೂ ಪ್ರಸ್ತಾಪಿಸಿದರು.

ಘಟಕದಲ್ಲಿ ಬಾಳೆದಿಂಡಿನಿಂದ ತಯಾರಿಸಿರುವ ಚಾಪೆ, ಬುಟ್ಟಿ, ಕೈಚೀಲ, ಹಪ್ಪಳ, ಉಪ್ಪಿನಕಾಯಿ, ಇನ್ನಿತರ ಉತ್ಪನ್ನಗಳನ್ನು ಜಿಲ್ಲಾಧಿಕಾರಿಯವರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಬಳಿಕ ಯಳಂದೂರು ಪಟ್ಟಣದ ಐತಿಹಾಸಿಕ ಬಳೆಮಂಟಪಕ್ಕೆ ಭೇಟಿ ನೀಡಿ ವೀಕ್ಷಿಸಿದರು. ಅಲ್ಲಿನ ನಿರ್ವಹಣೆ ಬಗ್ಗೆ ಮಾಹಿತಿ ಪಡೆದರು. ಇದೇ ವೇಳೆ ಸ್ಥಳೀಯರು ನೀಡಿದ ಮನವಿಗಳನ್ನು ಸ್ವೀಕರಿಸಿ ಅಗತ್ಯ ಕ್ರಮ ವಹಿಸುವುದಾಗಿ ತಿಳಿಸಿದರು. ಇಂದಿರಾ ಕ್ಯಾಂಟಿನ್‌ಗೆ ತೆರಳಿ ಪರಿಶೀಲಿಸಿದರು. ಗ್ರಾಹಕರ ಸಂಖ್ಯೆಗೆ ಅನುಗುಣವಾಗಿ ಆಹಾರ ತಯಾರಿಸಿ ಪೂರೈಸಲಾಗುತ್ತಿಲ್ಲ ಎಂಬ ದೂರುಗಳು ಬಂದಿವೆ. ಇನ್ನು ಮುಂದೆ ಇಂತಹವು ಕೇಳಿ ಬರಬಾರದು. ಗ್ರಾಹಕರ ಬೇಡಿಕೆಗೆ ಅನುಸಾರವಾಗಿ ಇಂದಿರಾ ಕ್ಯಾಂಟಿನ್ ಕಾರ್ಯನಿರ್ವಹಿಸಬೇಕು. ಗುಣಮಟ್ಟ ಶುಚಿತ್ವ ಕಾಪಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿದರು.

ಯಳಂದೂರು ಪಟ್ಟಣದಲ್ಲಿ ನಿರ್ಮಾಣ ಹಂತದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಬಾಲಕರ ಹಾಗೂ ಬಾಲಕಿಯರ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ ಕಟ್ಟಡ ಕಾಮಗಾರಿ ವೀಕ್ಷಿಸಿದರು. ವಿಳಂಬ ಮಾಡದೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ವಿದ್ಯಾರ್ಥಿಗಳ ವಾಸ್ತವ್ಯಕ್ಕೆ ಅನುಕೂಲ ಕಲ್ಪಿಸಿಕೊಡುವಂತೆ ಜಿಲ್ಲಾಧಿಕಾರಿಯವರು ಸೂಚನೆ ನೀಡಿದರು. ಘನತ್ಯಾಜ್ಯ ವಿಂಗಡಣಾ ಘಟಕಕ್ಕೆ ಭೇಟಿ ನೀಡಿ ತ್ಯಾಜ್ಯ ವಿಂಗಡಣೆ ನಿರ್ವಹಣೆ ಕ್ರಮಗಳ ಕುರಿತು ಮಾಹಿತಿ ಪಡೆದು ಸ್ವಚ್ಛತೆ ಹಾಗೂ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡುವಂತೆ ತಿಳಿಸಿದರು.

ಕೊಳ್ಳೇಗಾಲ ಪಟ್ಟಣಕ್ಕೆ ಭೇಟಿ ನೀಡಿ ಅಲ್ಲಿನ ಉಪವಿಭಾಗ ಆಸ್ಪತ್ರೆಯ ಎ.ಆರ್.ಟಿ ಕೇಂದ್ರಕ್ಕೆ ತೆರಳಿ ಹೆಚ್.ಐ.ವಿ ಸೋಂಕಿತರಿಗೆ ನೀಡಲಾಗುತ್ತಿರುವ ಚಿಕಿತ್ಸೆ, ಔಷಧಗಳ ದಾಸ್ತಾನು ಪರಿಶೀಲಿಸಿದರು. ಈವರೆಗೆ ಎಷ್ಟು ಮಂದಿ ಸೋಂಕಿತರು ಎ.ಆರ್.ಟಿ. ಕೇಂದ್ರದಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂಬ ಮಾಹಿತಿ ಪಡೆದ ಜಿಲ್ಲಾಧಿಕಾರಿಯವರು ಯುವಜನರಲ್ಲಿ ಹೆಚ್.ಐವಿ ಏಡ್ಸ್ ವಿರುದ್ದ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಎಲ್.ಇ.ಡಿ ದೃಶ್ಯಾವಳಿಗಳ ಮೂಲಕ ಪರಿಣಾಮಕಾರಿಯಾಗಿ ಹೆಚ್.ಐ.ವಿ ಬಗೆಗಿನ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಬೇಕು ಎಂದು ಸಲಹೆ ನೀಡಿದರು. ಇಂದಿರಾ ಕ್ಯಾಂಟಿನ್‌ಗೆ ಭೇಟಿ ನೀಡಿ ಅಲ್ಲಿನ ನಿರ್ವಹಣೆಯನ್ನು ವೀಕ್ಷಿಸಿದರು.

ಬಳಿಕ ತಿಮ್ಮರಾಜಿಪುರದಲ್ಲಿರುವ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಭೇಟಿ ನೀಡಿ ಅಲ್ಲಿನ ಭೋಜನಾಲಯದಲ್ಲಿ ವಿದ್ಯಾರ್ಥಿಗಳೊಂದಿಗೆ ಸರತಿ ಸಾಲಿನಲ್ಲಿ ನಿಂತು ಊಟ ಹಾಕಿಸಿಕೊಂಡು ವಿದ್ಯಾರ್ಥಿಗಳೊಂದಿಗೆ ಸೇವಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಜಿಲ್ಲಾಧಿಕಾರಿಗಳು ವಸತಿ ಶಾಲೆಯಲ್ಲಿ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಧ್ಯಯನಕ್ಕೆ ನಿಮಗೆ ಯಾವುದೇ ತೊಡಕುಗಳಿಲ್ಲ. ಏಕಾಗ್ರತೆಯಿಂದ ವ್ಯಾಸಂಗ ಮಾಡಿ ಮತ್ತಷ್ಟು ಪರಿಶ್ರಮದಿಂದ ಸಾಧನೆ ಮಾಡಿ ಮುಂಬರುವ ಫಲಿತಾಂಶದಲ್ಲಿ ಎಲ್ಲರು ಅಗ್ರಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಎಂದು ಸಲಹೆ ಮಾಡಿದರು.

ಇದೇ ವೇಳೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಅತಿ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಜಿಲ್ಲಾಧಿಕಾರಿಯವರು ಸನ್ಮಾನಿಸಿದರು.

ತದನಂತರ ಮಂಗಲದ ಏಕಲವ್ಯ ಮಾದರಿ ವಸತಿ ಶಾಲೆಗೆ ಭೇಟಿ ನೀಡಿ ಅಲ್ಲಿಯ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಶಾಲೆಯಲ್ಲಿ ಶಿಕ್ಷಣದ ಜೊತೆಗೆ ನೀಡಲಾಗುತ್ತಿರುವ ಕೌಶಲ್ಯ ತರಬೇತಿ ಚಟುವಟಿಕೆಗಳನ್ನು ವೀಕ್ಷಿಸಿದರು.

ತಹಸೀಲ್ದಾರ್ ಗಿರಿಜಾ, ಬಸವರಾಜು, ಚೈತ್ರ, ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ಮುನಿರಾಜು, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಹೆಚ್.ಎಸ್. ಬಿಂದ್ಯಾ, ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ವಿಶ್ವನಾಥ್, ಪಂಚಾಯತ್ ರಾಜ್ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ರಮೇಶ್ ಕುಮಾರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವೆಂಕಟೇಶ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಹೇಶ್, ಕೊಳ್ಳೇಗಾಲ ತಾಲೂಕು ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಕೆ.ಎಲ್. ಲೋಕೇಶ್ವರಿ, ಸೇರಿದಂತೆ ಇತರೆ ಅಧಿಕಾರಿಗಳು ಭೇಟಿಯ ವೇಳೆ ಇದ್ದರು.

ಚಾಮರಾಜನಗರ ಜಿಲ್ಲಾ ಪಿಯು ಉಪನ್ಯಾಸಕರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ

ಚಾಮರಾಜನಗರ: ಜಿಲ್ಲಾ ಪದವಿಪೂರ್ವ ಉಪನ್ಯಾಸಕರ ಸಂಘಕ್ಕೆ 2026–31 ಸಾಲಿಗೆ ನಡೆದ ಚುನಾವಣೆಯಲ್ಲಿ ನೂತನ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾದರು. ನಗರದ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆದ ಚುನಾವಣೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ಭೌತಶಾಸ್ತ್ರ ಉಪನ್ಯಾಸಕ ಟಿ.ಮಧು, ಕಾರ್ಯಾಧ್ಯಕ್ಷರಾಗಿ–ಹನೂರು ತಾಲೂಕು ಜಿ.ವಿ.ಗೌಡ ಕಾಲೇಜಿನ ನಂಜುಂಡಯ್ಯ, ಮಹಿಳಾ ಮೀಸಲು ಉಪಧ್ಯಕ್ಷೆಯಾಗಿ ಕೊಳ್ಳೇಗಾಲ ಎಸ್‌ವಿಕೆ ಕಾಲೇಜಿನ ಧನಲಕ್ಷ್ಮೀ, ಪ್ರಧಾನ ಕಾರ್ಯದರ್ಶಿಯಾಗಿ ಆಲೂರಿನ ಸರ್ಕಾರಿ ಪದವಿಪೂರ್ವ ಕಾಲೇಜು, ಆರ್.ಕೃಷ್ಣಮೂರ್ತಿ, ಖಜಾಂಚಿಯಾಗಿ ಸಂತೆಮರಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಮಹದೇವಪ್ರಭು, ಕಾರ್ಯದರ್ಶಿಯಾಗಿ ಅಮಚವಾಡಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಶಿವರಾಮು, ಪ್ರಧಾನ ಸಂಘಟನಾ ಕಾರ್ಯದರ್ಶಿಯಾಗಿ ಕುದೇರು ಸರ್ಕಾರಿ ಪದವಿಪೂರ್ವ ಕಾಲೇಜಿನ ಡಾ.ಎಚ್.ಎಂ.ಮಣಿಕಂಠ ಆಯ್ಕೆಯಾದರು.

ಲಾಟರಿ ಮಾರುತ್ತಿದ್ದ ಆರೋಪಿ ಬಂಧನ



ಗುಂಡ್ಲುಪೇಟೆ ಜೂ.10– ಪಟ್ಟಣದ ಪೊಲೀಸರು ಕಾರ್ಯಾಚರಣೆ ನಡೆಸಿ ಕೇರಳಂ ಲಾಟರಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಮಾಲು ಸಮೇತ ಬಂಧಿಸಿದ್ದಾರೆ.

ಸರ್ಕಲ್ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್ ಅವರಿಗೆ ದೊರೆತ ಖಚಿತ ಮಾಹಿತಿಯ ಮೇರೆಗೆ ಕಾರ್ಯಾಚರಣೆ ನಡೆಸಿ ಮಡಹಳ್ಳಿ ಸರ್ಕಲ್ ಸಮೀಪ ಅಕ್ರಮವಾಗಿ ಲಾಟರಿ ಮಾರಾಟ ಮಾಡುತ್ತಿದ್ದ ಹೊಸೂರಿನ ಮಹೇಶ್ (54) ಎಂಬಾತನಿಂದ 3.5 ಸಾವಿರ ಮೌಲ್ಯದ 70 ಲಾಟರಿಗಳು ಹಾಗೂ ಮೈಸೂರಿನ ಅಮೃತ್(42) ಎಂಬಾತನಿಂದ 2 ಲಕ್ಷದ 2 ಸಾವಿರ ಮೌಲ್ಯದ 3490 ಲಾಟರಿ ಟಿಕೆಟ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಡಿಕೆ, ಬಿಕೆ ಬೆನ್ನ ಹಿಂದೆಯೇ ದೆಹಲಿಗೆ ಸಚಿವಾಕಾಂಕ್ಷಿಗಳ ದಂಡೇ ದೌಡು!

ಬೆಂಗಳೂರು, ಜೂ.10(ಕೆಎಂಶಿ)– ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಂತೆ ಸಚಿವ ಆಕಾಂಕ್ಷಿಗಳ ದಂಡೇ ರಾಷ್ಟ್ರ ರಾಜಧಾನಿಗೆ ದೌಡಾಯಿಸಿದೆ.

ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಎರಡು–ಮೂರು ದಿನಗಳ ದೆಹಲಿ ಪ್ರವಾಸಕ್ಕೆ ತೆರಳಿದರೆ, ಎಐಸಿಸಿ ಗುರುವಾರ ಕರೆದಿರುವ ಸಭೆಯಲ್ಲಿ ಭಾಗವಹಿಸಲು ಹರಿಪ್ರಸಾದ್ ಹೋಗಿದ್ದಾರೆ.

ವಿಧಾನಸಭೆಯಿಂದ ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದ್ದಂತೆ ಮುಖ್ಯಮಂತ್ರಿ, ತಮ್ಮ ಮಂತ್ರಿಮಂಡಲ ವಿಸ್ತರಿಸಿ 20 ಸದಸ್ಯರನ್ನು ಸೇರ್ಪಡೆ ಮಾಡಿಕೊಳ್ಳಲಿದ್ದಾರೆ.

ದೆಹಲಿ ಪ್ರವಾಸ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷರೊಂದಿಗೆ ಔಪಚಾರಿಕವಾಗಿ ಚರ್ಚೆ ಮಾಡಲಿದ್ದಾರೆ. ಇದನ್ನು ಅರಿತ ಸಚಿವ ಆಕಾಂಕ್ಷಿಗಳು ದೆಹಲಿಯಲ್ಲೇ ಬಿಡಾರ ಹೂಡಿ ಮಂತ್ರಿ ಪದವಿ ಪಡೆಯಲು ಎಐಸಿಸಿ ನಾಯಕರ ಭೇಟಿ ಮಾಡಲಿದ್ದಾರೆ.

ಇದರ ಮಧ್ಯೆ, ಖಾತೆ ಹಂಚಿಕೆಗೆ ಅಸಮಾಧಾನಗೊಂಡಿರುವ ಕೃಷ್ಣಬೈರೇಗೌಡ ಬೆಂಗಳೂರು ಅಭಿವೃದ್ಧಿ ಖಾತೆಗೆ ಸಂಬಂಧಿಸಿದ ಪೂರ್ಣ ಅಧಿಕಾರ ನೀಡದಿದ್ದರೆ ಕರ್ತವ್ಯ ನಿರ್ವಹಿಸುವುದಿಲ್ಲ ಎಂಬುದಾಗಿ ವರಿಷ್ಠರನ್ನು ಭೇಟಿ ಮಾಡಿ ಸ್ಪಷ್ಟಪಡಿಸಿದ್ದಾರೆ.

ಸಂಪುಟ ವಿಸ್ತರಣೆ ವೇಳೆ ಯುವಜನರಿಗೆ ಮುಖ್ಯಮಂತ್ರಿ ಅವಕಾಶ ಮಾಡಿಕೊಡಬೇಕೆಂದು ಮನವಿ ಮಾಡಿರುವುದಲ್ಲದೆ, ತಮ್ಮ ಜೊತೆ ದೆಹಲಿಗೆ ಬಂದಿರುವ ಅರ್ಷದ್ ರಿಜ್ವಾನ್, ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಪುತ್ರ ಅಜಯ್ ಸಿಂಗ್ ಹಾಗೂ ಶ್ರೀನಿವಾಸ ಮಾನೆ ಅವರಿಗೆ ಸಚಿವ ಸ್ಥಾನ ನೀಡುವಂತೆ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ.

ಈ ಮಧ್ಯೆ ಮುಖ್ಯಮಂತ್ರಿ, ದೆಹಲಿಯಲ್ಲಿನ ಎಐಸಿಸಿ ಕಚೇರಿಗೆ ತೆರಳಿ, ಎಲ್ಲಾ ವಿಭಾಗಗಳ ಮುಖ್ಯಸ್ಥರನ್ನು ಭೇಟಿ ಮಾಡಿದ್ದಲ್ಲದೆ, ಪ್ರಮುಖ ನಾಯಕರನ್ನೂ ಭೇಟಿ ಮಾಡಿದ್ದಾರೆ.

ರೇಣುಕಾಸ್ವಾಮಿ ಕೊಲೆ ಕೇಸ್: ದರ್ಶನ್ ಬಂಧನವಾಗಿ ಇಂದಿಗೆ ಎರಡು ವರ್ಷ



ಬೆಂಗಳೂರು, ಜೂ.10– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿ ನಟ ದರ್ಶನ್ ಅರೆಸ್ಟ್ ಆಗಿ ನಾಳೆಗೆ (ಜೂ.11) 2 ವರ್ಷ ಪೂರೈಸಲಿದೆ. ಕೊಲೆ ಕೇಸಲ್ಲಿ 2024 ಜೂನ್ 11ರಂದು ಮೈಸೂರಿನಲ್ಲಿ ಹೋಟೆಲ್‌ನಲ್ಲಿದ್ದಾಗಲೇ ಅರೆಸ್ಟ್ ಮಾಡಲಾಗಿತ್ತು. 1 ಬಾರಿ ಮಧ್ಯಂತರ ಜಾಮೀನು ಪಡೆದು ಹೊರಬಂದಿದ್ದರು. ಅದಾದ ಬಳಿಕ ಸುಪ್ರೀಂನಲ್ಲಿ ಜಾಮೀನು ರದ್ದಾದ ಹಿನ್ನೆಲೆ ದರ್ಶನ್ ಸೇರಿ 7 ಆರೋಪಿಗಳು ಮತ್ತೆ ಜೈಲುಪಾಲಾಗಿದ್ದಾರೆ.

ಇನ್ನು, ದರ್ಶನ್ ಸಹಚರರಿಗೆ ಬಿಗ್ ರಿಲೀಫ್ ಸಿಕ್ಕಿದೆ. ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಐವರು ಆರೋಪಿಗಳ ಜಾಮೀನು ರದ್ದು ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಯನ್ನ ಹೈಕೋರ್ಟ್ ವಜಾ ಮಾಡಿದೆ.

ಪ್ರಕರಣದಲ್ಲಿ ಭಾಗಿಯಾಗಿದ್ದ ಎ–3 ಪವನ್, ಎ–4 ರಾಘವೇಂದ್ರ, ಎ–5– ನಂದೀಶ್, ಎ–9 ಧನರಾಜು ಹಾಗೂ ಎ–10 ವಿನಯ್ ಸೇರಿ ಜಾಮೀನಿಗಾಗಿ ಅರ್ಜಿ ಸಲ್ಲಿದ್ದರು. ಈ ಮಧ್ಯೆ, ದರ್ಶನ್ ಪತ್ನಿ ವಿಜಯಲಕ್ಷ್ಮಿಗೆ ಮತ್ತೆ ಕಿಡಿಗೇಡಿಗಳ ಕಾಟ ಮುಂದುವರೆದಿದೆ. ಸೋಷಿಯಲ್ ಮೀಡಿಯಾದಲ್ಲಿ ವಿಜಯಲಕ್ಷ್ಮಿ ಮೂವಿಗೆ ಹೋದ ವೀಡಿಯೊ ಹಾಕಿ ಕೆಟ್ಟ ಕಾಮೆಂಟ್ ಮಾಡುವ ಮೂಲಕ ನಿಂದನೆ ಮಾಡಿದ್ದಾರೆ.

ಮೈಸೂರು ಮಿತ್ರ ಗುರುವಾರ 11 ಜೂನ್ 2026

ನೆಹರು ದಾಖಲೆ ಹಿಂದಿಕ್ಕಿ ಮೋದಿ ಐತಿಹಾಸಿಕ ಸಾಧನೆ

ಜಿಪಂ ಮಾಜಿ ಅಧ್ಯಕ್ಷ ಕಾ.ಪು.ಸಿದ್ದವೀರಪ್ಪ ಅಭಿಪ್ರಾಯ

ತಿ.ನರಸೀಪುರ, ಜೂ.10– ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರು ಅವರ ಅಧಿಕಾರಾವಧಿಯ ದಾಖಲೆ ಹಿಂದಿಕ್ಕಿರುವುದು ದೇಶದ ರಾಜಕೀಯ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲಾಗಿದೆ ಎಂದು ಜಿಪಂ ಮಾಜಿ ಅಧ್ಯಕ್ಷ ಕಾ.ಪು.ಸಿದ್ದವೀರಪ್ಪ ಅಭಿಪ್ರಾಯಪಟ್ಟರು.



ಮೋದಿ ಅವರು ಸುದೀರ್ಘ ಅವಧಿಯ ಪ್ರಧಾನಿಯಾಗಿ ದಾಖಲೆ ನಿರ್ಮಿಸಿದ ಹಿನ್ನೆಲೆಯಲ್ಲಿ ಕಾರ್ಯಕರ್ತರು ವಿಶೇಷ ಪೂಜೆ ಸಲ್ಲಿಸಿದರು.

ಮೋದಿಯವರು ಪ್ರಧಾನಿಯಾಗಿ 12 ವರ್ಷ ಅಧಿಕಾರ ಪೂರೈಸಿದ ಹಿನ್ನೆಲೆಯಲ್ಲಿ ವರುಣ ಬ್ಲಾಕ್ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ ನೇತೃತ್ವದಲ್ಲಿ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹದಿನಾರು ಗ್ರಾಮದ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ಬಿಜೆಪಿ ಕಾರ್ಯಕರ್ತರು ಆಯೋಜಿಸಿದ್ದ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶದ ಜನತೆ ಮೋದಿಯವರ ನಾಯಕತ್ವ ಮೆಚ್ಚಿ ಅವರನ್ನು ನಿರಂತರವಾಗಿ ಬೆಂಬಲಿಸಿದ್ದರಿಂದ ಅವರು ಈ ಅಪರೂಪದ ದಾಖಲೆಗೆ ಭಾಜನರಾಗಿದ್ದಾರೆ. ಕಳೆದ ಹಲವು ವರ್ಷಗಳಿಂದ ದೇಶದ ಅಭಿವೃದ್ಧಿ, ರಾಷ್ಟ್ರೀಯ ಭದ್ರತೆ, ಮೂಲ ಸೌಕರ್ಯ ವಿಸ್ತರಣೆ, ಡಿಜಿಟಲ್ ಪರಿವರ್ತನೆ ಹಾಗೂ ಜಾಗತಿಕ ಮಟ್ಟದಲ್ಲಿ ಭಾರತದ ಗೌರವ ಹೆಚ್ಚಿಸುವ ನಿಟ್ಟಿನಲ್ಲಿ ಮೋದಿಯವರು ಕೈಗೊಂಡಿರುವ ಕ್ರಮಗಳು ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಅವರ ಆಡಳಿತದಲ್ಲಿ ಭಾರತ ವಿಶ್ವದ ಪ್ರಮುಖ ರಾಷ್ಟ್ರಗಳ ಪೈಕಿ ಒಂದು ಪ್ರಭಾವಿ ರಾಷ್ಟ್ರವಾಗಿ ಹೊರಹೊಮ್ಮಿದೆ ಎಂದರು.

ರಾಜ್ಯದಲ್ಲಿ ಬಿಜೆಪಿ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ಕಾರ್ಯ ನಡೆಯುತ್ತಿದ್ದು, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ ಪಕ್ಷ ಮುಂದಿನ ದಿನಗಳಲ್ಲಿ ಇನ್ನಷ್ಟು ಸಂಘಟಿತವಾಗಲಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ವಿಶ್ವಾಸ ವ್ಯಕ್ತಪಡಿಸಿದ ಅವರು, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜ ಯೇಂದ್ರ ಅವರ ನೇತೃತ್ವದಲ್ಲಿ ಪಕ್ಷ ಜನ ಬೆಂಬಲ ಗಳಿಸುತ್ತಿದ್ದು, ಮುಂದಿನ ದಿನ ಗಳಲ್ಲಿ ಅವರು ರಾಜ್ಯದ ಮುಖ್ಯಮಂತ್ರಿಯಾಗುವ ಎಲ್ಲಾ ಅರ್ಹತೆ ಮತ್ತು ನಾಯಕತ್ವ ಗುಣಗಳನ್ನು ಹೊಂದಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಜಿಪಂ ಮಾಜಿ ಸದಸ್ಯ ಸದಾನಂದ ಮಾತನಾಡಿ, ಪ್ರಧಾನಿ ಮೋದಿ ಅವರು 4,399 ದಿನಗಳನ್ನು ಪ್ರಧಾನಿಯಾಗಿ ಪೂರೈಸುವ ಮೂಲಕ ಭಾರತದ ಮೊದಲ ಪ್ರಧಾನಿ ನೆಹರು ಅವರ ಹೆಸರಿನಲ್ಲಿದ್ದ ಅತೀ ಹೆಚ್ಚು ಕಾಲ ದೇಶದ ಪ್ರಧಾನಿಯಾಗಿದ್ದ ದಾಖಲೆ ಹಿಂದಿಕ್ಕಿದ್ದಾರೆ. 1952ರ ಸಾರ್ವತ್ರಿಕ ಚುನಾವಣೆ ನಂತರ ನೆಹರು ಅವರು ನಿರ್ಮಿಸಿದ್ದ 4,398 ದಿನಗಳ ದಾಖಲೆಯನ್ನು ಮೀರಿ ಹೊಸ ಇತಿಹಾಸ ನಿರ್ಮಿಸಿದ್ದಾರೆ. ಇದು ಕೇವಲ ವೈಯಕ್ತಿಕ ಸಾಧನೆಯಲ್ಲ. ದೇಶದ ಜನತೆ ಮೋದಿಯವರ ನಾಯಕತ್ವದ ಮೇಲೆ ಇಟ್ಟಿರುವ ವಿಶ್ವಾಸದ ಪ್ರತೀಕ ಎಂದರು.

ಕಳೆದ ಒಂದು ದಶಕಕ್ಕೂ ಹೆಚ್ಚು ಕಾಲ ದೇಶದ ಮೂಲ ಸೌಕರ್ಯ ಅಭಿವೃದ್ಧಿ, ಡಿಜಿಟಲ್ ಕ್ರಾಂತಿ, ಆತ್ಮನಿರ್ಭರ ಭಾರತ, ರೈತರ ಕಲ್ಯಾಣ, ಮಹಿಳಾ ಸಬಲೀಕರಣ, ಬಡವರ ಅಭಿವೃದ್ಧಿ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಕೇಂದ್ರ ಸರ್ಕಾರ ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿದೆ. ಇದರ ಪರಿಣಾಮ ಭಾರತ ಜಾಗತಿಕ ಮಟ್ಟದಲ್ಲಿ ತನ್ನ ಪ್ರಭಾವ ಮತ್ತಷ್ಟು ವಿಸ್ತರಿಸಿಕೊಂಡಿದ್ದು, ವಿಶ್ವದ ಪ್ರಮುಖ ರಾಷ್ಟ್ರಗಳ ನಡುವೆ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ವರುಣ ಬ್ಲಾಕ್ ಬಿಜೆಪಿ ಅಧ್ಯಕ್ಷ ನಗರ್ಲೆ ಮಹದೇವಸ್ವಾಮಿ, ಬಿಜೆಪಿ ಮುಖಂಡ ಶರತ್ ಪುಟ್ಟಬುದ್ದಿ, ಬಿಜೆಪಿ ವರುಣ ಘಟಕದ ಮಾಜಿ ಅಧ್ಯಕ್ಷ ಶಿವಯ್ಯ, ಕಾರ್ಯದರ್ಶಿ ಆಲಗೂಡು ವೆಂಕಟರಮಣಶೆಟ್ಟಿ, ಎಪಿಎಂಸಿ ಮಾಜಿ ಅಧ್ಯಕ್ಷ ಚಿನ್ನಂಬಳ್ಳಿ ಮಂಜು, ಎಸ್‌ಟಿ ಮೋರ್ಚಾ ಅಧ್ಯಕ್ಷ ಪ್ರಕಾಶ್, ಯುವ ಮೋರ್ಚಾ ಅಧ್ಯಕ್ಷ ಜೈ ಕುಮಾರ್, ಮಹಿಳಾ ಮೋರ್ಚಾ ಅಧ್ಯಕ್ಷೆ ಲಕ್ಷ್ಮಿ, ಪುಷ್ಪಲತಾ, ರಾಜೇಶ್ವರಿ, ರೇಣುಕಾ, ರೈತ ಮೋರ್ಚಾ ಅಧ್ಯಕ್ಷ ಮಹೇಶ್, ಖಜಾಂಚಿ ಡಿ.ಎಲ್.ಮಹದೇವಪ್ಪ, ತಾಪಂ ಮಾಜಿ ಸದಸ್ಯ ಚಿಕ್ಕಮಾದಪ್ಪ, ಶಂಕರ, ಹದಿನಾರು ರೇವಣ್ಣ, ಮಾಧ್ಯಮ ವಕ್ತಾರ ಕಿರಗಸೂರು ಮಹಾದೇವಸ್ವಾಮಿ, ನಾಗೇಶ್, ಪ್ರದೀಪ್, ಮಹದೇವಪ್ಪ ಹದಿನಾರು ನಂಜುಂಡಸ್ವಾಮಿ, ರೇವಣ್ಣ, ಕೂಡನಹಳ್ಳಿ ಶಂಕರ, ಕೀಳನಪುರ ಮಹದೇವಪ್ಪ, ಮಹದೇವ, ಮಾದಪ್ಪ, ಶಿವರಾಜು ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

> “ಪ್ರಧಾನಿ ನರೇಂದ್ರ ಮೋದಿಯವರು ಮುಂದಿನ ಅವಧಿಗೂ ದೇಶದ ಪ್ರಧಾನಿಯಾಗುವ ಮೂಲಕ ಕಾಂಗ್ರೆಸ್‌ನ ದುರಾಡಳಿತದಿಂದ ಒಡೆದು ಛಿದ್ರವಾಗಿರುವ ದೇಶವನ್ನು ಮತ್ತಷ್ಟು ಬಲಿಷ್ಠವಾಗಿ ಒಗ್ಗೂಡಿಸುವ ಕೆಲಸ ಮಾಡಲಿ. ಅವರ ನಾಯಕತ್ವದಲ್ಲಿ ದೇಶದ ಅಭಿವೃದ್ಧಿ, ಭದ್ರತೆ ಹಾಗೂ ಜಾಗತಿಕ ಮಟ್ಟದಲ್ಲಿ ಭಾರತದ ಗೌರವ ಇನ್ನಷ್ಟು ಹೆಚ್ಚಾಗಲಿ. ಮೋದಿಯವರು ಸತತವಾಗಿ ಜನಪರ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದೇಶದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಮುಂದಿನ ದಿನಗಳಿಗೂ ಅವರ ನಾಯಕತ್ವ ದೇಶಕ್ಕೆ ಅಗತ್ಯ.
> – ಗುರುಸ್ವಾಮಿ, ಜಿಪಂ ಮಾಜಿ ಸದಸ್ಯ

ಪ್ರತ್ಯೇಕ ಪ್ರಕರಣ: ಪಾದಚಾರಿ ಸಾವು, ಬೈಕ್ ಸವಾರನಿಗೆ ಗಂಭೀರ ಗಾಯ



ಗಿರಿನಾಯಕ

ಮೈಸೂರು, ಜೂ.10– ಮೈಸೂರು–ಮಾನಂದವಾಡಿ ರಾಜ್ಯ ಹೆದ್ದಾರಿ ಜಯಪುರ ಹೋಬಳಿ ಕೆಂಚಲಗೂಡು ಗೇಟ್ ಮತ್ತು ಡಿ.ಸಾಲುಂಡಿ ಗ್ರಾಮದ ಬಳಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ ಪಾದಚಾರಿ ಸಾವನ್ನಪ್ಪಿ, ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಬುಧವಾರ ನಡೆದಿದೆ.

ಜಯಪುರ ಹೋಬಳಿ ಡಿ.ಸಾಲುಂಡಿ ಗ್ರಾಮದ ಗಿರಿನಾಯಕ(56) ಸಾವನ್ನಪ್ಪಿದವರು. ಇಂದು ಬೆಳಗ್ಗೆ ಡಿ.ಸಾಲುಂಡಿ ಕಡೆಯಿಂದ ಕೆಂಚಲಗೂಡು ಗೇಟ್ ಕಡೆಗೆ ನಡೆದುಕೊಂಡು ಹೋಗುತ್ತಿದ್ದ ವೇಳೆ ವೇಗವಾಗಿ ಬಂದ ಪಲ್ಸರ್ ಬೈಕ್(ಕೆ.ಎ55, ಯು. 4073) ಗಿರಿನಾಯಕ ಅವರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಆತ ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಬೈಕ್ ಸವಾರನಿಗೂ ಸಣ್ಣಪುಟ್ಟ ಗಾಯಗಳಾಗಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಯಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಬೈಕ್, ಸವಾರನನ್ನು ವಶಕ್ಕೆ ಪಡೆದು, ಶವವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ರವಾನಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬೈಕ್ ಸವಾರನ ಸ್ಥಿತಿ ಗಂಭೀರ: ಬೈಕ್‌ಗೆ ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಬುಧವಾರ ಮಧ್ಯಾಹ್ನ ಮೈಸೂರು–ಮಾನಂದವಾಡಿ ಹೆದ್ದಾರಿಯ ಡಿ.ಸಾಲುಂಡಿ ಗ್ರಾಮದ ಬಳಿಯ ತಿರುವಿನಲ್ಲಿ ನಡೆದಿದೆ.

ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿ ಬೆಟ್ಟದಬೀಡು ಗ್ರಾಮದ ನಿವಾಸಿ ಕಿರಣ್ ಗಾಯಗೊಂಡವರು. ಈತ ಮೈಸೂರಿನಿಂದ ಸ್ವಗ್ರಾಮ ಬೆಟ್ಟದಬೀಡು ಗ್ರಾಮಕ್ಕೆ ತೆರಳುತ್ತಿದ್ದ ವೇಳೆ ಎದುರಿನಿಂದ ಬಂದ ಕೆಎಸ್‌ಆರ್‌ಟಿಸಿ ಬಸ್, ಸ್ಪ್ಲೆಂಡರ್(ಕೆಎ–09, ಹೆಚ್‌ಪಿ–0392) ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕಿರಣ್ ತೀವ್ರ ಗಾಯಗೊಂಡಿದ್ದು, ಆತನನ್ನು ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಯಪುರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಸಾರಿಗೆ ಬಸ್ ಅನ್ನು ವಶಕ್ಕೆ ಪಡೆದಿದ್ದಾರೆ. ಈ ಎರಡೂ ಪ್ರಕರಣ ಸಂಬಂಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ಅಗಲೀಕರಣಕ್ಕೆ ಆಗ್ರಹ: ಮೈಸೂರು–ಮಾನಂದವಾಡಿ ರಾಜ್ಯ ಹೆದ್ದಾರಿ ಕಿರಿದಾಗಿದ್ದು, ನಿತ್ಯ ಸಾವಿರಾರು ವಾಹನಗಳು ವೇಗವಾಗಿ ಸಂಚರಿಸುತ್ತಿವೆ. ಈ ಹೆದ್ದಾರಿಯಲ್ಲಿ ದ್ವಿಚಕ್ರ ವಾಹನ ಸವಾರರು ಜೀವ ಕೈಯಲ್ಲಿ ಹಿಡಿದುಕೊಂಡು ಸಂಚರಿಸಬೇಕಿದೆ. ಪಾದಚಾರಿಗಳು ರಸ್ತೆ ದಾಟಲು ಹರಸಾಹಸ ಪಡುವಂತಾಗಿದೆ. ನಿತ್ಯ ಅಪಘಾತಗಳು ಸಂಭವಿಸುತ್ತಿದೆ. ಹೀಗಾಗಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಹೆದ್ದಾರಿ ಅಗಲೀಕರಣಕ್ಕೆ ಮುಂದಾಗಬೇಕು. ಭಾರೀ ವಾಹನಗಳ ವೇಗ ತಗ್ಗಿಸಬೇಕು. ಅಪಘಾತ ವಲಯಗಳನ್ನು ಗುರುತಿಸಿ ಬ್ಯಾರಿಕೇಡ್ ಅಳವಡಿಸಿ ಸಂಚಾರ ನಿಯಂತ್ರಿಸಬೇಕು ಎಂದು ಡಿ.ಸಾಲುಂಡಿ ಗ್ರಾಮಸ್ಥರು ಆಗ್ರಹಿಸಿದರು.

ಅಧಿಕಾರಿಗಳ ಕಿರುಕುಳ ಹಿನ್ನೆಲೆ ಡೆತ್‌ನೋಟ್ ಬರೆದಿಟ್ಟು

ನೆಸ್ಲೆ ಕಾರ್ಖಾನೆ ನೌಕರ ನೇಣಿಗೆ ಶರಣು



ಕುಮಾರಸ್ವಾಮಿ

ನಂಜನಗೂಡು, ಜೂ.10– ನನ್ನ ಸಾವಿಗೆ ಸಂಸ್ಥೆಯ ಅಧಿಕಾರಿಗಳ ಕಿರುಕುಳ ಕಾರಣ ಎಂದು ಡೆತ್ ನೋಟ್ ಬರೆದಿಟ್ಟು ನೌಕರನೋರ್ವ ಕಾರ್ಖಾನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಕೈಗಾರಿಕಾ ಪ್ರದೇಶದಲ್ಲಿರುವ ನೆಸ್ಲೆ ಕಾರ್ಖಾನೆಯಲ್ಲಿ ಬುಧವಾರ ನಡೆದಿದೆ.

ತಾಲೂಕಿನ ಕಪ್ಪಸೋಗೆ ಗ್ರಾಮದ ನಿವಾಸಿ ಕುಮಾರಸ್ವಾಮಿ(44) ಆತ್ಮಹತ್ಯೆ ಮಾಡಿಕೊಂಡವರು. ಈತ ನೆಸ್ಲೆ ಕಾರ್ಖಾನೆಯಲ್ಲಿ ಕಳೆದ 23 ವರ್ಷಗಳಿಂದ ಗುತ್ತಿಗೆ ಕಾರ್ಮಿಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಎನ್ನಲಾಗಿದೆ. ಬುಧವಾರ ಮನೆಯಿಂದ ಎಂದಿನಂತೆ ಕೆಲಸಕ್ಕೆ ಆಗಮಿಸಿದ್ದ ಕುಮಾರಸ್ವಾಮಿ ಮಧ್ಯಾಹ್ನ 3 ಗಂಟೆ ವೇಳೆಯಲ್ಲಿ ಕಾರ್ಖಾನೆ ಒಳಾವರಣದಲ್ಲಿರುವ ಲ್ಯಾಬ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಇದನ್ನು ಗಮನಿಸಿದ ಸಹೋದ್ಯೋಗಿಗಳು, ಸಿಬ್ಬಂದಿ ಆತ್ಮಹತ್ಯೆ ಮಾಡಿಕೊಂಡಿರುವುದನ್ನು ಮೇಲಧಿಕಾರಿಗಳ ಗಮನಕ್ಕೆ ತಂದು ಬಳಿಕ ನಂಜನಗೂಡು ನಗರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿದಾಗ ಡೆತ್‌ನೋಟ್ ಲಭ್ಯವಾಗಿದೆ. ಇದರಲ್ಲಿ ಕುಮಾರಸ್ವಾಮಿ ತನ್ನ ಸಾವಿಗೆ ಸಂಸ್ಥೆ ಅಧಿಕಾರಿಗಳಾದ ವಿದ್ಯಾಶ್ರೀ, ರಾಘವೇಂದ್ರ ಹಾಗೂ ದಿನೇಶ್ ನೀಡುತ್ತಿದ್ದ ಕಿರುಕುಳವೇ ಕಾರಣ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಸ್ಥಳಕ್ಕಾಗಮಿಸಿದ ಮೃತನ ಕುಟುಂಬದವರು ಕುಮಾರಸ್ವಾಮಿ ಸಾವಿಗೆ ಕಾರಣವಾಗಿರುವ ಮೂವರನ್ನು ಬಂಧಿಸಿ, ಕಠಿಣ ಕ್ರಮ ಕೈಗೊಳ್ಳಬೇಕು. ಸೂಕ್ತ ಪರಿಹಾರ ನೀಡಬೇಕು ಹಾಗೂ ಮೃತನ ಪುತ್ರನಿಗೆ ಕಾರ್ಖಾನೆಯಲ್ಲಿ ಖಾಯಂ ಉದ್ಯೋಗ ನೀಡಬೇಕು. ಅಲ್ಲಿವರೆಗೆ ಶವವನ್ನು ಮರಣೋತ್ತರ ಪರೀಕ್ಷೆ ನಡೆಸಲು ಅವಕಾಶ ನೀಡುವುದಿಲ್ಲ ಎಂದು ಪಟ್ಟು ಹಿಡಿದರು.

ಈ ಸಂದರ್ಭ ಕಾರ್ಮಿಕ ಅಧಿಕಾರಿ ಅಂಬಿಕಾ ಹಾಗೂ ನಂಜನಗೂಡು ಪಟ್ಟಣ ಠಾಣೆ ಸಿಪಿಐ ರವೀಂದ್ರ ಸ್ಥಳದಲ್ಲಿ ಹಾಜರಿದ್ದರು. ಈ ಸಂಬಂಧ ನಂಜನಗೂಡು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾ.ರಾ.ಸ್ನೇಹ ಬಳಗದಿಂದ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣೆ

ಕೆ.ಆರ್.ನಗರ, ಜೂ.10– ಗ್ರಾಮೀಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಸಾ.ರಾ.ಸ್ನೇಹ ಬಳಗದ ಮೂಲಕ ಉಚಿತ ನೋಟ್‌ಬುಕ್ ವಿತರಿಸುವ ಕಾರ್ಯ ಶ್ಲಾಘನೀಯ ಎಂದು ಪುರಸಭೆ ಮಾಜಿ ಸದಸ್ಯ ಕೆ.ಎಲ್.ಜಗದೀಶ್ ತಿಳಿಸಿದರು.



ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಲಾಯಿತು.

ಪಟ್ಟಣದ ಬಿ.ಎಸ್.ಮಾದಪ್ಪ ಸ್ಮಾರಕ ಪ್ರೌಢಶಾಲೆಯಲ್ಲಿ ಸಾ.ರಾ.ಸ್ನೇಹ ಬಳಗದ ಮೂಲಕ ಮಾಜಿ ಸಚಿವ ಸಾ.ರಾ.ಮಹೇಶ್ ಕೊಡ ಮಾಡುವ ಉಚಿತ ನೋಟ್‌ಬುಕ್ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಸಮಾಜದೇವೋಭವ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್, ನೊಂದವರು, ಬಡವರಿಗೆ ಹೊಲಿಗೆ ಯಂತ್ರ ತರಬೇತಿ ನೀಡಿ ಉಚಿತವಾಗಿ ಹೊಲಿಗೆ ಯಂತ್ರ ವಿತರಣೆ, ಬೀದಿ ಬದಿ ವ್ಯಾಪಾರಿಗಳಿಗೆ ಉಚಿತ ತಳ್ಳುವ ಗಾಡಿ ಹಾಗೂ 6 ಹೋಬಳಿಗೂ ಉಚಿತವಾಗಿ ಆಂಬುಲೆನ್ಸ್, ಗರ್ಭಿಣಿಯರಿಗೆ ಪ್ರತ್ಯೇಕ ಆಂಬುಲೆನ್ಸ್ ನೀಡುವ ಜೊತೆಗೆ ವಿಕಲಚೇತನ ಮಕ್ಕಳಿಗೆ ವಿಮಾ ಹಣ, ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಬಸ್‌ಪಾಸ್‌ಗೆ ನೆರವು ನೀಡುತ್ತಿದ್ದಾರೆ ಎಂದು ಕೊಂಡಾಡಿದರು.

ಪುರಸಭೆ ಮಾಜಿ ಸದಸ್ಯ ಕೆ.ಉಮೇಶ್ ಮಾತನಾಡಿ, ಮಾಜಿ ಸಚಿವ ಸಾ.ರಾ. ಮಹೇಶ್ ವಿದ್ಯಾರ್ಥಿಗಳ ಸಂಕಷ್ಟವನ್ನು ಹತ್ತಿರದಿಂದ ಕಂಡವರು. ಹೀಗಾಗಿ ಪ್ರತಿ ವರ್ಷ ಕ್ಷೇತ್ರದ 26 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ವಿತರಿಸುವ ಗುರಿ ಹೊಂದಿದ್ದಾರೆ. ಇದಕ್ಕಾಗಿ ಈ ಹಿಂದೆ 50 ರಿಂದ 60 ಲಕ್ಷ ಖರ್ಚು ಮಾಡುತ್ತಿದ್ದರು. ಈ ಬಾರಿ ನೋಟ್ ಬುಕ್ ಬೆಲೆ ಹೆಚ್ಚಾಗಿರುವುದರಿಂದ 80 ಲಕ್ಷ ಖರ್ಚಾಗಿದೆ ಎಂದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ಜನತೆಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಮಾಜಿ ಸಚಿವ ಸಾ.ರಾ. ಮಹೇಶ್ ಅವರು ನೋಟ್‌ಬುಕ್ ವಿತರಣೆ ಸೇರಿದಂತೆ ವಿವಿಧ ಸೇವಾ ಕಾರ್ಯಗಳನ್ನು ಹಮ್ಮಿಕೊಂಡಿದ್ದು 2028ಕ್ಕೆ ಮತ್ತೆ ಸಾ.ರಾ.ಮಹೇಶ್ ಕ್ಷೇತ್ರದ ಶಾಸಕರಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಾ.ರಾ.ಸ್ನೇಹ ಬಳಗದ ಅಧ್ಯಕ್ಷ ವಿಜಯ್ ಕುಮಾರ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ತಾಲೂಕು ಯುವ ಜೆಡಿಎಸ್ ಎಸ್‌ಟಿ. ಘಟಕದ ಅಧ್ಯಕ್ಷ ಸೂರಿ ಮಾತನಾಡಿದರು. ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ದ್ರಾಕ್ಷಾಯಿಣಿ, ತಾಲೂಕು ಅಧ್ಯಕ್ಷೆ ರಾಜಲಕ್ಷ್ಮೀ, ನಗರ ಕಾರ್ಯದರ್ಶಿ ಭಾಗ್ಯಲಕ್ಷ್ಮೀ, ಮೋಹನಕುಮಾರಿ, ಪುರಸಭೆ ಮಾಜಿ ಅಧ್ಯಕ್ಷೆ ಗೀತಾ, ಸಾ.ರಾ. ಸ್ನೇಹ ಬಳಗದ ಕಾರ್ಯದರ್ಶಿ ಸಿ.ಜೆ. ಆನಂದ್, ದೀಪು, ರಾಘು, ಸಾ.ರಾ.ನಾಗೇಶ್, ಬಾಲಾಜಿ ಗಣೇಶ್ ಇತರರಿದ್ದರು.

ಮೂರನೇ ಪುಟದಿಂದ

ಬಾಂಧವ್ಯ ರಾಜ್ಯಸಭಾ ಸ್ಥಾನವನ್ನು ಮೀರಿದ್ದು

ಬಗ್ಗೆ ನಡೆಯುತ್ತಿರುವ ಚರ್ಚೆಗೆ ತೆರೆ ಎಳೆದ ಮಾಜಿ ಪ್ರಧಾನಿಗಳು; ಈ ಚರ್ಚೆ ಅನಗತ್ಯ. ಕೆಲವರು ಸುಖಾಸುಮ್ಮನೆ ಮಾತಾಡುತ್ತಿದ್ದಾರೆ. ಈ ವಿಚಾರದಲ್ಲಿ ನನಗೆ ಅಪಮಾನವಾಗಿದೆ ಎಂಬ ಹೇಳಿಕೆಗಳಿಗೆ ಯಾವುದೇ ಮಹತ್ವವನ್ನು ನಾನು ನೀಡುವುದಿಲ್ಲ. ಅದರಲ್ಲಿ ಯಾವುದೇ ಅರ್ಥವೂ ಇಲ್ಲ ಎಂದು ಹೇಳಿದರು.

ನನ್ನ ಮತ್ತು ಪ್ರಧಾನಿ ಮೋದಿ ಅವರ ನಡುವೆ ಉತ್ತಮ ಬಾಂಧವ್ಯ ಇದೆ. ಒಂದು ರಾಜ್ಯಸಭೆ ಸ್ಥಾನ ಇಂತಹ ಉತ್ತಮ ಬಾಂಧವ್ಯವನ್ನು ಹಾಳು ಮಾಡುತ್ತದೆ ಎಂದು ಯಾರಾದರೂ ಭಾವಿಸಿದ್ದರೆ ಅದು ಅವರ ಮೂರ್ಖತನ. ಒಂದು ಕಾಲದಲ್ಲಿ ನಾನು ಮೋದಿಯವರನ್ನು ಕಟುವಾಗಿ ಟೀಕಿಸಿದ್ದೆ ಎಂಬುದು ನಿಜ. ಆದರೆ ಕಳೆದ ಹಲವು ವರ್ಷಗಳಿಂದ ನಾನು ಅವರನ್ನು ಬಹಳಷ್ಟು ಅರ್ಥ ಮಾಡಿಕೊಂಡಿದ್ದೇನೆ. ಅವರಲ್ಲಿ ವಿಶ್ವಾಸ ಇರಿಸಿದ್ದೇನೆ. ಅವರ ಒಳ್ಳೆಯ ಕೆಲಸಗಳನ್ನು ಹೃದಯಪೂರ್ವಕವಾಗಿ ಶ್ಲಾಘಿಸಿದ್ದೇನೆ ಎಂದು ಮಾಜಿ ಪ್ರಧಾನಿಗಳು ಒತ್ತಿ ಹೇಳಿದರು.

ಸುಮ್ಮನೆ ಕೂರಲ್ಲ: ಕಾಂಗ್ರೆಸ್ ಪಕ್ಷದ ನಾಯಕರ ಹೇಳಿಕೆಗಳಿಗೆ ಅತೀವ ಬೇಸರ ವ್ಯಕ್ತಪಡಿಸಿದ ದೇವೇಗೌಡರು; ನಾನು ಸುಮ್ಮನೆ ಕೂರುವುದಿಲ್ಲ. ಪಕ್ಷದ ಬಲವರ್ಧನೆಗೆ ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ರಾಜ್ಯ ಮತ್ತು ದೇಶದ ವಿಚಾರಗಳನ್ನು ಸಂಸತ್ತಿನ ಒಳಗೆ ಮತ್ತು ಹೊರಗೆ ನೇರವಾಗಿ ಮಾತನಾಡಿದ್ದೇನೆ ಎಂದು ಹೇಳಿದರು.

ನರೇಂದ್ರ ಮೋದಿ ಅವರ ಬಗ್ಗೆ ಭಾರತ ಅಷ್ಟೇ ಅಲ್ಲ ಜಗತ್ತಿನ ಎಲ್ಲಾ ಭಾಗಗಳಲ್ಲಿಯೂ ಗೌರವಭಾವ ಇದೆ. ಅದರಿಂದ ರಾಷ್ಟ್ರಕ್ಕೂ ಒಳ್ಳೆಯದಾಗುತ್ತಿದೆ. ಅವರ ಮಟ್ಟಕ್ಕೆ ಯಾವ ನಾಯಕನು ಬೆಳೆಯಲು ಸಾಧ್ಯವಿಲ್ಲ. ಅವರೊಂದಿಗೆ ನಾನು ಹೊಂದಿರುವ ಬಾಂಧವ್ಯ ವೈಯಕ್ತಿಕ ಮಟ್ಟದ್ದು. ಅದನ್ನು ರಾಜಕೀಯ ಕಾರಣಕ್ಕಾಗಿ ಕಳೆದುಕೊಳ್ಳಲು ಬಯಸುವುದಿಲ್ಲ. ನಾನು ಸಂಸತ್ತಿನಲ್ಲಿ ಇರಲಿ... ಇಲ್ಲದಿರಲಿ ಮೋದಿ ಅವರ ನಡುವಿನ ಸಂಬಂಧಕ್ಕೆ ಧಕ್ಕೆ ಬರುವುದಿಲ್ಲ. ಕೊನೆಯವರೆಗೂ ನಮ್ಮ ಸಂಬಂಧ ಹೀಗೆ ಇರುತ್ತದೆ ಎಂದು ಮಾಜಿ ಪ್ರಧಾನಿಗಳು ಸ್ಪಷ್ಟಪಡಿಸಿದರು.

ಸ್ಥಾನಕ್ಕೆ ಹಾತೊರೆಯಲ್ಲ: ತಮ್ಮ ರಾಜಕೀಯ ಜೀವನದ ಆರಂಭದ ದಿನಗಳನ್ನು ಸ್ಮರಿಸಿದ ದೇವೇಗೌಡರು, ನಾನು ರಾಜಕಾರಣಕ್ಕೆ ಬಂದು ಎಷ್ಟು ವರ್ಷವಾಯಿತು ಎಂದು ಒಮ್ಮೆ ಯೋಚಿಸಿ. 1954–55 ರಿಂದಲೇ ನಾನು ಸಕ್ರಿಯ ರಾಜಕಾರಣದಲ್ಲಿದ್ದೇನೆ. ಅಂದು ಕೇವಲ ಗುತ್ತಿಗೆ ಕೆಲಸ ಮಾಡುತ್ತಿದ್ದ ನಾನು, ಅದರ ಜೊತೆಜೊತೆಗೆ ಜನರ ಕಷ್ಟಗಳಿಗೆ ಸ್ಪಂದಿಸುತ್ತಾ ರಾಜಕೀಯಕ್ಕೆ ಬಂದವನು. ಅಂದಿನಿಂದ ಇಂದಿನವರೆಗೆ ನಿರಂತರವಾಗಿ ಜನರ ಮಧ್ಯೆಯೇ ಇದ್ದೇನೆ. ಹಾಗಾಗಿ, ಇಂದು ಒಂದು ಸ್ಥಾನಕ್ಕಾಗಿ ನಾನು ಹಾತೊರೆಯುವ ಅಗತ್ಯವಿಲ್ಲ ಎಂದರು.

ರಾಜ್ಯಸಭೆ ಸ್ಥಾನ ತಪ್ಪಿಸಿ ಬಿಜೆಪಿ ದೇವೇಗೌಡರಿಗೆ ಅಪಮಾನ ಮಾಡಿದೆ ಎಂದು ಕಾಂಗ್ರೆಸ್ ನಾಯಕರು ಪದೇಪದೆ ದೂರುತ್ತಿದ್ದಾರಲ್ಲ ಎನ್ನುವ ಪ್ರಶ್ನೆಗೆ ಖಡಕ್ಕಾಗಿ ಉತ್ತರಿಸಿದ ದೇವೇಗೌಡರು; ಮೋದಿ ಅವರ ವಿಶ್ವಾಸದ ಮುಂದೆ ಇವರೆಲ್ಲರ ಹೇಳಿಕೆಗಳು ಟೀಕೆ ಟಿಪ್ಪಣಿಗಳು ಬಹಳ ಸಣ್ಣವು ಎಂದರು.

ರಾಜ್ಯಸಭಾ ಸ್ಥಾನಕ್ಕೆ ಬೇಡಿಕೆ ಇಟ್ಟಿರಲಿಲ್ಲ: ಕೆಲವರು ನನ್ನ ಬಗ್ಗೆ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಬಹಳ ಅಪಮಾನವಾಯಿತು ಎಂದು ನೋವು ವ್ಯಕ್ತಪಡಿಸುತ್ತಿದ್ದಾರೆ. ಆದರೆ, ನನ್ನ ಹೆಸರು ಪರಿಗಣನೆಗೆ ಬರುತ್ತದೆ ಎಂದು ಮಾಧ್ಯಮಗಳಲ್ಲಿ ಪ್ರಚಾರವಾಗಿದ್ದು ಬಿಟ್ಟರೆ, ನಾನು ಆ ಬಗ್ಗೆ ಎಲ್ಲಿಯೂ ನನಗೆ ರಾಜ್ಯಸಭೆ ಸ್ಥಾನ ಬೇಕೆಂದು ಬೇಡಿಕೆ ಇಟ್ಟಿರಲಿಲ್ಲ. ಈ ಬಗ್ಗೆ ನಮ್ಮ ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಕೇಂದ್ರ ಸಚಿವರು ಆಗಿರುವ ಕುಮಾರಸ್ವಾಮಿಯವರು ಸ್ಪಷ್ಟವಾಗಿಯೇ ಹೇಳಿದ್ದಾರೆ. ಇದರಲ್ಲಿ ಮತ್ತೊಮ್ಮೆ ನಾನು ಹೇಳುವಂಥದ್ದು ಏನು ಇಲ್ಲ ಎಂದು ಮಾಜಿ ಪ್ರಧಾನಿಗಳು ಸ್ಪಷ್ಟಪಡಿಸಿದರು.

ಆದರೆ ಕಾಂಗ್ರೆಸ್ ಪಕ್ಷದ ಸ್ನೇಹಿತರು ಮಾತ್ರ ಇದನ್ನೇ ದೊಡ್ಡದಾಗಿ ಬಿಂಬಿಸಿ, ಅದಕ್ಕೆ ರಾಜಕೀಯ ಬಣ್ಣ ಲೇಪಿಸಲು ಪ್ರಯತ್ನ ಮಾಡುತ್ತಿದ್ದಾರೆ. ಒಂದು ವೇಳೆ ರಾಜ್ಯಸಭೆಗೆ ಸ್ಪರ್ಧಿಸುವ ಆಸಕ್ತಿ ನನಗೆ ಇದ್ದಿದ್ದೇ ಆದಲ್ಲಿ ಕಳೆದ ಮೇ 26ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮಕ್ಕಾಗಿ ನವದೆಹಲಿಗೆ ಹೋಗಿದ್ದಾಗ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುತ್ತಿದ್ದೆ. ನಾನು ಯಾರೊಂದಿಗೂ ಈ ಬಗ್ಗೆ ಮಾತುಕತೆ ನಡೆಸಲಿಲ್ಲ. ಅಂದಿನ ಕಾರ್ಯಕ್ರಮ ಮುಗಿದ ಕೂಡಲೇ ನಾನು ಬೆಂಗಳೂರಿಗೆ ವಾಪಸ್ ಬಂದೆ ಎಂದು ಮಾಧ್ಯಮಗಳಿಗೆ ಮಾಜಿ ಪ್ರಧಾನಿಗಳು ಮಾಹಿತಿ ನೀಡಿದರು.

ಕಾಂಗ್ರೆಸ್ ಪಕ್ಷ ನೀಡುತ್ತಿರುವ ಹೇಳಿಕೆಗಳು ಮತ್ತು ಮಾಡುತ್ತಿರುವ ಟೀಕೆಗಳ ಬಗ್ಗೆ ಉತ್ತರಿಸಲು ನನಗೆ ಆಸಕ್ತಿ ಇಲ್ಲ ಎಂದ ದೇವೇಗೌಡರು; ಪಕ್ಷಕ್ಕಾಗಿ ಮತ್ತು ಕಾರ್ಯಕರ್ತರ ಸಲುವಾಗಿ ನಾನು ಕೆಲಸ ಮಾಡಲು ಸದಾ ಮುಂದೆ ಇರುತ್ತೇನೆ. ಈಗಲೂ ನಿಮ್ಮೆಲ್ಲರನ್ನು (ಮಾಧ್ಯಮ ಮಿತ್ರರು) ಭೇಟಿಯಾಗಿದ್ದು ನನಗೆ ಬಹಳ ಸಂತೋಷ ಉಂಟು ಮಾಡಿದೆ ಎಂದರು.

ಇವತ್ತು ಒಂದು ವಿಷಯ ಇಟ್ಟುಕೊಂಡು ನನ್ನ ಬಗ್ಗೆ ಇಷ್ಟೆಲ್ಲಾ ಅನುಕಂಪದ ನಾಟಕ ಆಡುತ್ತಿರುವ ಕಾಂಗ್ರೆಸ್ ನಾಯಕರು ಹಿಂದೆಲ್ಲಾ ನನ್ನ ವಿಚಾರದಲ್ಲಿ ಹೇಗೆಲ್ಲಾ ನಡೆದುಕೊಂಡರು ಎಂಬುದು ಗೊತ್ತಿದೆ. ಇದರ ಬಗ್ಗೆ ಹೇಳುತ್ತಾ ಹೋದರೆ ಬಹಳಷ್ಟು ಹೇಳಬಹುದು. ನನಗೆ ಅದರ ಬಗ್ಗೆ ಆಸಕ್ತಿ ಇಲ್ಲ ಎಂದು ಅವರು ತಿಳಿಸಿದರು.

ಪಕ್ಷದ ಗ್ರೇಟರ್ ಬೆಂಗಳೂರು ಅಧ್ಯಕ್ಷ ಹೆಚ್.ಎಂ. ರಮೇಶ್ ಗೌಡ, ಮಾಜಿ ಶಾಸಕರಾದ ಕೆ.ಎ.ತಿಪ್ಪೇಸ್ವಾಮಿ, ಚೌಡರೆಡ್ಡಿ ತೂಪಲ್ಲಿ, ದೊಡ್ಡನಗೌಡ ಪಾಟೀಲ್, ಜೆಡಿಎಸ್ ರಾಜ್ಯ ಕಾನೂನು ವಿಭಾಗದ ಅಧ್ಯಕ್ಷ ಎ.ಪಿ. ರಂಗನಾಥ್, ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷ ಚಂದನ್ ಸೇರಿದಂತೆ ಪಕ್ಷದ ಹಲವಾರು ಮುಖಂಡರು ಹಾಜರಿದ್ದರು.

ಮೇಲುಕೋಟೆ ಬೆಟ್ಟದ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ನಗ–ನಾಣ್ಯ ಕಳವು

ಮೇಲುಕೋಟೆ, ಜೂ.10– ಇಲ್ಲಿನ ಪ್ರಸಿದ್ಧ ಬೆಟ್ಟದ ಯೋಗಾನರಸಿಂಹಸ್ವಾಮಿ ದೇವಾಲಯದ ಹುಂಡಿಯಲ್ಲಿ ಚಿನ್ನಾಭರಣ ಮತ್ತು ನಗದು ಕಳ್ಳತನವಾಗಿರುವ ಸಂಬಂಧ ದೇವಾಲಯದ ಇಓ ಎನ್.ಎಸ್.ಶೀಲಾ ಮೇಲುಕೋಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪ್ರಕರಣ ಸಂಬಂಧ ಪಾರುಪತ್ತೇಗಾರ ಶ್ರೀಧರ್, ಅರ್ಚಕ ನಾರಾಯಣ ಭಟ್ಟ, ಪರಿಚಾರಕ ತಿರುವೆಂಗಡಾಚಾರ್, ಮಣೆಗಾರರಾದ ಕಸ್ತೂರಿ ಶ್ರೀನಿವಾಸ್ ಹಾಗೂ ಕಾವಲುಗಾರರಾದ ಗಂಗಾಧರ್, ಬಸವರಾಜ್ ಎಂ.ಎನ್. ವಿರುದ್ಧ ದೂರು ನೀಡಿದ್ದು, ದೇವಸ್ಥಾನದಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾ ವೈರ್‌ಗಳನ್ನು ತುಂಡರಿಸಿ, ಡಿವಿಆರ್ ಸುಟ್ಟು ಹಾಕಿ ಹುಂಡಿಯಲ್ಲಿದ್ದ ಕಾಣಿಕೆ ಹಣ, ಚಿನ್ನ, ಬೆಳ್ಳಿ ಪದಾರ್ಥಗಳನ್ನು ಕಳ್ಳತನ ಮಾಡಲಾಗಿದೆ. ಸೇವಾ ಕೌಂಟರಿನ ಬೀಗವನ್ನು ತೆಗೆದು ಈ ಕೃತ್ಯ ಎಸಗಲಾಗಿದೆ. ದೇವಸ್ಥಾನದ ಭದ್ರತಾ ವಿಷಯಗಳನ್ನು ತಿಳಿದಿರುವ ದೇವಾಲಯದ ಸಿಬ್ಬಂದಿ ಮತ್ತು ಇವರ ನೆರವು ಪಡೆದು ಕಳ್ಳತನ ಮಾಡಲಾಗಿದೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ಲಂಚ ಪಡೆಯುವಾಗ ಎಎಸ್‌ಐ ಲೋಕಾಯುಕ್ತ ಬಲೆಗೆ

ಮಂಡ್ಯ, ಜೂ.10– ಆರೋಪಿಯೊಬ್ಬನನ್ನು 'ಸ್ಟೇಷನ್ ಬೇಲ್' ಮೇಲೆ ಬಿಡುಗಡೆ ಮಾಡಲು 10 ಸಾವಿರ ಲಂಚ ಪಡೆಯುತ್ತಿದ್ದ ಮಳವಳ್ಳಿ ಗ್ರಾಮಾಂತರ ಠಾಣೆ ಸಹಾಯಕ ಸಬ್‌ಇನ್‌ಸ್ಪೆಕ್ಟರ್ (ಎಎಸ್‌ಐ) ಶಿವಕುಮಾರ್ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಗಲಾಟೆ ಪ್ರಕರಣದಲ್ಲಿ ಮಳವಳ್ಳಿ ರಾಜೇಗೌಡ ವಿರುದ್ಧ ಪ್ರಕರಣ ದಾಖಲಾಗಿತ್ತು. ಠಾಣೆಯಲ್ಲೇ ಜಾಮೀನು ನೀಡುವ ಮೂಲಕ ಪ್ರಕರಣ ಇತ್ಯರ್ಥಗೊಳಿಸುತ್ತೇವೆ ಎಂದು ಎಎಸ್‌ಐ ಶಿವಕುಮಾರ್ ಕರೆ ಮಾಡಿದ್ದರು. ಕರೆಯನ್ನು ರೆಕಾರ್ಡ್ ಮಾಡಿದ್ದ ರಾಜೇಗೌಡ ಲೋಕಾಯುಕ್ತ ಪೊಲೀಸರಿಗೆ ಸಾಕ್ಷ್ಯ ಒದಗಿಸಿ ದೂರು ನೀಡಿದ್ದರು. ಬುಧವಾರ ರಾತ್ರಿ ಪೊಲೀಸ್ ಠಾಣೆಯಲ್ಲೇ ಲಂಚ ಪಡೆಯುವ ವೇಳೆ ಎಎಸ್‌ಐ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

12 ವರ್ಷಗಳಿಂದ ನಿರಂತರ, ಸುದೀರ್ಘ ಸೇವೆ ಹಿನ್ನೆಲೆ

ಪ್ರಧಾನಿ ನರೇಂದ್ರ ಮೋದಿಯವರ ಹೆಸರಲ್ಲಿ ವಿಶೇಷ ಪೂಜೆ

ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಿಜೆಪಿ ನಗರ ಎಸ್‌ಟಿ ಮೋರ್ಚಾ



ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮೈಸೂರು,ಜೂ.10 (ಪಿಎಂ)– ಕಳೆದ 12 ವರ್ಷಗಳಿಂದ ದೇಶದ ಪ್ರಧಾನ ಮಂತ್ರಿಯಾಗಿ ನರೇಂದ್ರ ಮೋದಿಯವರು ನಿರಂತರ ಮತ್ತು ಸುದೀರ್ಘವಾಗಿ ಸೇವೆ ಸಲ್ಲಿಸುತ್ತಿರುವ ಪ್ರಯುಕ್ತ ಬಿಜೆಪಿ ಮೈಸೂರು ನಗರ ಎಸ್‌ಟಿ ಮೋರ್ಚಾ ವತಿಯಿಂದ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನಲ್ಲಿ ಅರ್ಚನೆ ಮತ್ತು ವಿಶೇಷ ಪೂಜೆ ಮಾಡಿಸಲಾಯಿತು.

ಇದೇ ವೇಳೆ ಮಾತನಾಡಿದ ಮಾಜಿ ಮೇಯರ್ ಶಿವಕುಮಾರ್, ಮೋದಿಯವರು ವಿಶ್ವಗುರು ಸ್ಥಾನ ಪಡೆದು ಜಗತ್ತೇ ಮೆಚ್ಚುವಂತೆ ಆಡಳಿತ ನಡೆಸುತ್ತಿದ್ದಾರೆ. ದೇಶದಲ್ಲಿ ಸುಭದ್ರ–ಸ್ಥಿರ ಸರ್ಕಾರ ಇದ್ದು, ಕೇಂದ್ರ ಸರ್ಕಾರದ ಜನಪರ ಆಡಳಿತದ ಬಗ್ಗೆ ದೇಶದ ಜನತೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಯುವ ಜನತೆ ಪ್ರೀತಿಯಿಂದ ಅವರನ್ನು ಗೌರವಿಸಿದ್ದಾರೆ. ಅವರಿಗೆ ಇನ್ನೂ ಹೆಚ್ಚಿನ ಶಕ್ತಿಯನ್ನು ಭಗವಂತ ನೀಡಲೆಂದು ಪ್ರಾರ್ಥಿಸುವುದಾಗಿ ಹೇಳಿದರು.

ಇದೇ ವೇಳೆ ನಾಗರಿಕರಿಗೆ ಸಿಹಿ ವಿತರಿಸಲಾಯಿತು. ಬಿಜೆಪಿ ನಗರ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ. ರಾಮಕೃಷ್ಣ, ರಾಜ್ಯ ಕಾರ್ಯಕಾರಿ ಸಮಿತಿಯ ಸದಸ್ಯರಾದ ಗುರು ವಿನಾಯಕ, ಎಂ.ಮಹೇಶ್, ಪ್ರಧಾನ ಕಾರ್ಯದರ್ಶಿ ಕೃಷ್ಣ ನಾಯಕ, ಕೆ.ನಾಗೇಶ್ ನಾಯಕ, ನಾರಾಯಣ ಲೋಲಪ್ಪ, ಎಸ್‌ಸಿ ಮೋರ್ಚಾ ಅಧ್ಯಕ್ಷ ಕಾರ್ತಿಕ್ ಮರಿಯಪ್ಪ, ಕೆ.ಆರ್ ಕ್ಷೇತ್ರದ ಅಧ್ಯಕ್ಷ ಸುಣ್ಣದಕೇರಿ ನಂದೀಶ್, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಉದ್ಬೂರು ಉಮೇಶ್, ವಿಜಿ, ಹಂಚ್ಯ ರವಿಕುಮಾರ್, ಮಂಜುನಾಥಪುರಂ ಎಂ. ಮಹೇಶ್, ವಕೀಲ ಮಂಜುನಾಥ್, ವೀರನಗೆರೆ ಶ್ರೀನಿವಾಸ, ಎಂ.ಶಿವಕುಮಾರ್, ಜಿ. ಶಿವಕುಮಾರ್, ಸಿದ್ದರಾಜು, ಡಿ.ಮಹೇಶ್ ನಾಯಕ, ಡಿ.ಸುನಿಲ್, ಪ್ರಕಾಶ, ರಮ್ಮನಹಳ್ಳಿ ಮದಕರಿ ಮತ್ತಿತರರು ಹಾಜರಿದ್ದರು.

ದಾಖಲೆ ಕನಸು ಕಂಡಿರಲಿಲ್ಲ...

2014ರಲ್ಲಿ ಭಾರತವು ತನಗೆ ಅಗತ್ಯ ವಿದ್ದ ಬಹುಪಾಲು ಮೊಬೈಲ್ ಫೋನ್‌ಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿತ್ತು. ಆದರೆ ಇಂದು, ದೇಶೀಯವಾಗಿಯೇ 33 ಕೋಟಿಗೂ (330 ಮಿಲಿಯನ್) ಹೆಚ್ಚು ಮೊಬೈಲ್ ಹ್ಯಾಂಡ್‌ಸೆಟ್‌ಗಳನ್ನು ತಯಾರಿಸುತ್ತಿದೆ. 2014ರಲ್ಲಿ ದೇಶದ ಸೌರಶಕ್ತಿ ಸಾಮರ್ಥ್ಯವು ಕೇವಲ 2.5 ಗಿಗಾವ್ಯಾಟ್ ಆಗಿತ್ತು. ಇಂದು ಅದು 150 ಗಿಗಾವ್ಯಾಟ್‌ಗಳನ್ನು ಮೀರಿದೆ. ಎಥೆನಾಲ್ ಮಿಶ್ರಣವು 2014ರಲ್ಲಿ ಕೇವಲ 1.5%ರಷ್ಟಿತ್ತು, ಆದರೆ ಇಂದು ಅದು 20% ತಲುಪಿದೆ. 2014ರಲ್ಲಿ ದೇಶದಲ್ಲಿ ಒಂದೇ ಒಂದು ಸೆಮಿಕಂಡಕ್ಟರ್ ಘಟಕ ಇರಲಿಲ್ಲ. ಇಂದು ನಿರ್ಮಾಣ ಹಂತದಲ್ಲಿರುವ 10ಕ್ಕೂ ಹೆಚ್ಚು ಸೆಮಿಕಂಡಕ್ಟರ್ ಘಟಕಗಳು ಭಾರತವನ್ನು ಆಧುನಿಕತೆಯತ್ತ ಮುನ್ನಡೆಸುತ್ತಿವೆ ಎಂದು ವಿವರಿಸಿದರು.

ಸಾಧನೆ ಪಟ್ಟಿ: ನಾವು ದೇಶದ ಅಗತ್ಯತೆ ಗಳನ್ನೇ ನಮ್ಮ ನೀತಿಗಳು ಮತ್ತು ನಿರ್ಧಾರ ಗಳ ಅಡಿಪಾಯವನ್ನಾಗಿ ಮಾಡಿಕೊಂಡೆವು. ಹೊಸ ಉಪಕ್ರಮಗಳನ್ನು ಕೈಗೊಳ್ಳಲು ಹೊಸ ಆಲೋಚನಾ ಶೈಲಿಯನ್ನು ಅಳವಡಿಸಿಕೊಂಡೆವು. ಯುವಕರಿಗಾಗಿ ನಾವು ಪ್ರತ್ಯೇಕ ಕೌಶಲ್ಯಾಭಿವೃದ್ಧಿ ಸಚಿವಾಲಯವನ್ನು ಸ್ಥಾಪಿಸಿದೆವು. ಸಹಕಾರ ವಲಯವನ್ನು ಬಲಪಡಿಸಲು ಪ್ರತ್ಯೇಕ ಸಹಕಾರ ಸಚಿವಾಲಯವನ್ನು ರಚಿಸಲಾಯಿತು ಮತ್ತು ನಮ್ಮ ಮೀನುಗಾರರಿಗಾಗಿ ಮೀಸಲಾದ ಮೀನುಗಾರಿಕೆ ಸಚಿವಾಲಯವನ್ನು ಸ್ಥಾಪಿಸಲಾಯಿತು. ಅಭಿವೃದ್ಧಿಯ ಈ ಓಟದಲ್ಲಿ ಯಾರೂ ಹಿಂದೆ ಉಳಿಯಬಾರದು ಎಂಬುದು ನಮ್ಮ ಸ್ಪಷ್ಟ ಗುರಿಯಾಗಿತ್ತು. ನಾವು ದಿವ್ಯಾಂಗರಿಗಾಗಿ (ವಿಕಲಚೇತನರು) ಕಾನೂನುಗಳನ್ನು ರೂಪಿಸಿದೆವು. ಬುಡಕಟ್ಟು ಜನಾಂಗದವರಿಗಾಗಿ 'ಜನ್ಮನ್'ನಂತಹ ಯೋಜನೆಗಳನ್ನು ಪ್ರಾರಂಭಿಸಿದೆವು ಎಂದು ತಮ್ಮ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡಿದರು.

ಸಾಮೂಹಿಕ ಸಾಧನೆ: ಇಂದು, ಈ ಸುದೀರ್ಘ ಪಯಣದ ಭಾಗವಾಗಿರುವ ಎಲ್ಲಾ ಸಹೋದ್ಯೋಗಿಗಳಿಗೆ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಸಂದರ್ಭದಲ್ಲಿ ಎನ್‌ಡಿಎ ಕುಟುಂಬದ ಸದಸ್ಯರು ಅಭಿನಂದನಾ ನಿರ್ಣಯವನ್ನು ಮಂಡಿಸಿದ್ದಾರೆ. ಇದು ನಿಮ್ಮ ಪ್ರೀತಿ ಮತ್ತು ಉದಾರತೆಯನ್ನು ಪ್ರತಿಬಿಂಬಿಸುತ್ತದೆ. ಆದರೆ ನಾನು ಈ ಪಯಣವನ್ನು ನನ್ನ ವೈಯಕ್ತಿಕ ಸಾಧನೆ ಎಂದು ಪರಿಗಣಿಸುವುದಿಲ್ಲ. ಇದು ಪ್ರತಿಯೊಂದು ವಿಷಯದಲ್ಲೂ ನಮ್ಮ ಸಾಮೂಹಿಕ ಸಾಧನೆಯಾಗಿದೆ. ಎನ್‌ಡಿಎಯ ಪ್ರತಿಯೊಂದು ಪಾಲುದಾರ ಪಕ್ಷದ ಜಂಟಿ ಯಶಸ್ಸಾಗಿದೆ. ಆದ್ದರಿಂದ, ನಾನು ಈ ನಿರ್ಣಯವನ್ನು ನಿಮಗೆ ಮತ್ತು ಬಿಜೆಪಿ ಸೇರಿದಂತೆ ನಮ್ಮ ಎನ್‌ಡಿಎ ಕುಟುಂಬದ ಪ್ರತಿಯೊಬ್ಬ ಕಾರ್ಯಕರ್ತನಿಗೆ ಅರ್ಪಿಸುತ್ತೇನೆ. ಭಾರತದ ಜನರ ಸಹಜ ಬುದ್ಧಿವಂತಿಕೆ ಯಾವಾಗಲೂ ಅಪಾರವಾದದ್ದು ಎಂದು ಮೋದಿ ಹೇಳಿದರು.

ಭಾರತ ಮಾತೆಗೆ ಇಷ್ಟು ಸುದೀರ್ಘ ಕಾಲ ಸೇವೆ ಸಲ್ಲಿಸುವುದು, ಆಕೆಯ ಸೇವೆ ಮಾಡುವ ಸೌಭಾಗ್ಯ ಸಿಗುವುದು ದೇವರ ವಿಶೇಷ ಕೃಪೆಯಿಂದ ಮಾತ್ರ ಸಾಧ್ಯ. ಮತ್ತು ನನಗೆ, ಜನರೇ ದೇವರ ಸ್ವರೂಪ. ಅದಕ್ಕಾಗಿಯೇ ನಾನು ಈ ಸೇವೆಯನ್ನು ಯಾವಾಗಲೂ ಒಂದು ಆಧ್ಯಾತ್ಮಿಕ ಸಾಧನೆ ಅಥವಾ ತಪಸ್ಸು ಎಂದು ಭಾವಿಸಿದ್ದೇನೆ. ಈ ಆಧ್ಯಾತ್ಮಿಕ ಸಾಧನೆ ಎಂದಿಗೂ ಏಕಾಂಗಿಯಾಗಿರಲಿಲ್ಲ. ಇದೊಂದು ಸಾಮೂಹಿಕ 'ಯಜ್ಞ'ವಾಗಿದ್ದು, ಇದರಲ್ಲಿ ನೀವೆಲ್ಲರೂ ಮತ್ತು ಇತರ ಅನೇಕ ಸಹೋದ್ಯೋಗಿಗಳು ಕರ್ತವ್ಯ ಪ್ರಜ್ಞೆಯಿಂದ ತಮ್ಮ ಸೇವೆಯನ್ನು ಕೊಡುಗೆಯಾಗಿ ನೀಡಿದ್ದೀರಿ ಎಂದು ಪ್ರಧಾನಿ ಮೋದಿ ಭಾವುಕರಾದರು.


ದಾಖಲೆ ಬ್ರೇಕ್: ಪ್ರಧಾನಿ ಮೋದಿ ಅವರು ಬುಧವಾರ ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ದಾಖಲೆಯನ್ನು ಮುರಿದರು. 1952ರ ಸಾರ್ವತ್ರಿಕ ಚುನಾವಣೆಯ ನಂತರ ಚುನಾಯಿತ ಪ್ರಧಾನಿಯಾಗಿ ನೆಹರು ಅವರು ಹೊಂದಿದ್ದ 4,398 ದಿನಗಳ ನಿರಂತರ ಅಧಿಕಾರಾವಧಿಯ ದಾಖಲೆಯನ್ನು ಮೋದಿ ಹಿಂದಿಕ್ಕಿದ್ದಾರೆ. ನೆಹರು ಅವರ 1947ರಿಂದ 1952ರವರೆಗಿನ ಅವಧಿಯು ಮಧ್ಯಂತರ ಸರ್ಕಾರದ ಮುಖ್ಯಸ್ಥರಾಗಿದ್ದ ಅವಧಿಯಾಗಿತ್ತು. ಏಕೆಂದರೆ 1952ರವರೆಗೆ ದೇಶದಲ್ಲಿ ಚುನಾವಣೆಗಳು ನಡೆದಿರಲಿಲ್ಲ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ಒಟ್ಟು 14 ವರ್ಷಗಳಿಗಿಂತ ಹೆಚ್ಚು ಕಾಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆಯಾದರೂ ಅವರ ಅಧಿಕಾರಾವಧಿಯು ನಿರಂತರವಾಗಿರಲಿಲ್ಲ. ಇದೀಗ ಸಚಿವ ಸಂಪುಟದಲ್ಲಿ ಸತತ 4,399 ದಿನಗಳನ್ನು ಪೂರೈಸುವ ಮೂಲಕ ಮೋದಿ ಭಾರತದ ಇತಿಹಾಸದಲ್ಲೇ ಅತ್ಯಂತ ಸುದೀರ್ಘ ಅವಧಿಗೆ ಸತತವಾಗಿ ಚುನಾಯಿತರಾದ ಪ್ರಧಾನ ಮಂತ್ರಿಯಾಗಿದ್ದಾರೆ.

ಅಭಿನಂದಿಸಿದ ಹೆಚ್.ಡಿ.ಕುಮಾರಸ್ವಾಮಿ

ಸಚಿವರು ಪ್ರಧಾನಿಗಳನ್ನು ಗೌರವಿಸಿದರು. ಬಳಿಕ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿದ ಸಚಿವರು; ಪ್ರಧಾನಿ ಮೋದಿ ಅವರ ದೂರದೃಷ್ಟಿಯ ನಾಯಕತ್ವದಲ್ಲಿ ಭಾರತವು ಮೂಲಸೌಕರ್ಯ, ಉತ್ಪಾದನೆ, ಡಿಜಿಟಲ್ ಸಬಲೀಕರಣ, ಕಲ್ಯಾಣ ವಿತರಣೆ, ಆರೋಗ್ಯ ರಕ್ಷಣೆ, ಹಣಕಾಸು ಸೇರ್ಪಡೆ, ರಾಷ್ಟ್ರೀಯ ಭದ್ರತೆ ಮತ್ತು ಜಾಗತಿಕ ನಿಶ್ಚಿತಾರ್ಥ ಸೇರಿದಂತೆ ಕ್ಷೇತ್ರಗಳಲ್ಲಿ ಪರಿವರ್ತನಾತ್ಮಕ ಪ್ರಗತಿಯನ್ನು ಕಂಡಿದೆ ಎಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ.

ಕಳೆದ ದಶಕದ ಸಾಧನೆಗಳು ಭಾರತದ ಆರ್ಥಿಕ ಸ್ಥಿತಿಯನ್ನು ಬಲಪಡಿಸಿವೆ. ನಾಗರಿಕರಿಗೆ ಅವಕಾಶಗಳನ್ನು ವಿಸ್ತರಿಸಿವೆ ಮತ್ತು ಅಭಿವೃದ್ಧಿ ಹೊಂದಿದ ದೇಶವಾಗುವತ್ತ ರಾಷ್ಟ್ರದ ಪ್ರಯಾಣವನ್ನು ವೇಗಗೊಳಿಸಿವೆ ಎಂದು ಅವರು ತಿಳಿಸಿದ್ದಾರೆ. ಮೋದಿ ಅವರ ನಾಯಕತ್ವವು ಬೃಹತ್ ಪ್ರಮಾಣದ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ, ಪಾರದರ್ಶಕತೆಯನ್ನು ಉತ್ತೇಜಿಸುವಲ್ಲಿ ಮತ್ತು ಅಭಿವೃದ್ಧಿಯ ಪ್ರಯೋಜನಗಳು ಸಮಾಜದ ಪ್ರತಿಯೊಂದು ವರ್ಗವನ್ನು ತಲುಪುವಂತೆ ನೋಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ. ವಿಕಸಿತ ಭಾರತ 2047ರ ದೃಷ್ಟಿಕೋನಕ್ಕೆ ಪೂರಕವಾಗಿ ಕೆಲಸ ಮಾಡುವ ಬದ್ಧತೆಯನ್ನು ಕೇಂದ್ರ ಸಚಿವ ಕುಮಾರಸ್ವಾಮಿ ಪುನರುಚ್ಚರಿಸಿದರು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಿರಂತರ ಮಾರ್ಗದರ್ಶನದಲ್ಲಿ ಭಾರತವು ಪ್ರಗತಿ, ಸಮೃದ್ಧಿ ಮತ್ತು ಜಾಗತಿಕ ನಾಯಕತ್ವದ ಹೊಸ ಎತ್ತರವನ್ನು ಏರುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಂಜುಂಡಸ್ವಾಮಿ ನಿಧನ



ಮೈಸೂರು, ಜೂ.10– ಮೂಲತಃ ದೂರ ಗ್ರಾಮದವರಾದ, ನಿವೃತ್ತ ಶಾಲಾ ಮುಖ್ಯಶಿಕ್ಷಕ ಡಿ.ಪಿ.ನಂಜುಂಡಸ್ವಾಮಿ (94) ವಯೋಸಹಜ ಕಾಯಿಲೆಯಿಂದ ನಗರದ ದಟ್ಟಗಳ್ಳಿ 3ನೇ ಹಂತದ ಸೋಮನಾಥ ನಗರದ ನಿವಾಸದಲ್ಲಿಂದು (ಜೂ.10) ನಿಧನರಾದರು.

ಮೃತರು, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅವರ ಅಂತ್ಯಕ್ರಿಯೆಯು ನಾಳೆ(ಜೂ.11) ಮಧ್ಯಾಹ್ನ 1.30 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ ಗುರುವಾರ 11 ಜೂನ್ 2026

ಮೈಸೂರಲ್ಲಿ ಎಐ ಆಧಾರಿತ ಸ್ಟಾರ್ಟ್ ಅಪ್ ಸ್ಥಾಪನೆಗೆ ಭೂಮಿ ನೀಡದ ರಾಜ್ಯ ಸರ್ಕಾರ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪ

- ಭೂಮಿ ಇಲ್ಲದೆ ಸಂಕಷ್ಟಕ್ಕೆ ಸಿಲುಕಿರುವ ನವೋದ್ಯಮಿಗಳು
- ತಾಂತ್ರಿಕ ಕ್ಲಸ್ಟರ್ ಅಭಿವೃದ್ಧಿ ಸರ್ಕಾರದ ಬರೀ ಮಾತಷ್ಟೆ
- ದೇಶದಲ್ಲಿ ಮೋದಿ ಸರ್ಕಾರದ ಕ್ರಾಂತಿಕಾರಿ ಅಭಿವೃದ್ಧಿ
- ಡ್ರಗ್ಸ್‌ಗೆ ಕಡಿವಾಣ ಹಾಕುವಲ್ಲಿ ಮೈಸೂರು ಪೊಲೀಸರು ವಿಫಲ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಸಂಸದ ಯದುವೀರ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಜೂ.10(ಬಿಎಲ್‌ಯು)– ಮೈಸೂರಿನಲ್ಲಿ ಎಐ (ಕೃತಕ ಬುದ್ಧಿಮತ್ತೆ) ಆಧಾರಿತ ಸ್ಟಾರ್ಟ್ ಅಪ್ ಆರಂಭಿಸಲು ರಾಜ್ಯ ಸರ್ಕಾರ ಅಗತ್ಯ ಭೂಮಿ ನೀಡದ ಕಾರಣ ನವೋದ್ಯಮಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಆರೋಪಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ಸೇರಿದಂತೆ ವಿಶ್ವದೆಲೆಡೆ ಇಂದು ಎಐ ಆಧಾರಿತ ಸಂಶೋಧನೆ ನಡೆಯುತ್ತಿವೆ. ಎಐ ಆಧಾರಿತ ಕೈಗಾರಿಕಾ ಕಂಪನಿಗಳು ಎಲ್ಲಾ ಕಡೆ ಸ್ಥಾಪನೆಯಾಗುತ್ತಿದೆ. ಆದರೆ ಮೈಸೂರಿನಲ್ಲಿ ನವೋದ್ಯಮಿಗಳು ಎಐ ಆಧಾರಿತ ಸ್ಟಾರ್ಟ್ ಅಪ್ ಆರಂಭಿಸಲು ಕೆಐಎಡಿಬಿ ಅಗತ್ಯ ಭೂಮಿ ನೀಡುತ್ತಿಲ್ಲ ಎಂದು ಆಪಾದಿಸಿದರು.

ಕರ್ನಾಟಕದ ಎರಡನೇ ಹಂತದ ನಗರಗಳಾದ ಮೈಸೂರು, ಹುಬ್ಬಳ್ಳಿ, ಮಂಗಳೂರು ಮತ್ತು ಬೆಳಗಾವಿಯಂತಹ ನಗರಗಳಲ್ಲಿ ತಾಂತ್ರಿಕ ಕ್ಲಸ್ಟರ್ ಅಭಿವೃದ್ಧಿ ಉತ್ತೇಜಿಸುವುದಾಗಿ ರಾಜ್ಯ ಸರ್ಕಾರ ಹೇಳುತ್ತಿದೆಯೇ ಹೊರತು ಅಗತ್ಯ ಭೂಮಿ ಹಾಗೂ ಮೂಲಭೂತ ಸೌಕರ್ಯ ಕಲ್ಪಿಸುತ್ತಿಲ್ಲ ಎಂದು ದೂರಿದರು.

ಈ ವೇಳೆ ಕಳೆದ 12 ವರ್ಷಗಳ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಯದುವೀರ್ ಸಮಗ್ರವಾಗಿ ವಿವರಿಸಿದರು. ಮೋದಿ ಅವರು ಅಧಿಕಾರ ವಹಿಸಿಕೊಂಡಾಗ ಇದ್ದ ಬಹಳಷ್ಟು ಸಮಸ್ಯೆಗಳು ಇಂದು ಪರಿಹಾರವಾಗಿದೆ. ಆರ್ಥಿಕ ಅಸಮತೋಲನ ಹಾಗೂ ಆರ್ಥಿಕ ಅನಿಶ್ಚಿತತೆ ದೂರವಾಗಿದೆ ಎಂದು ಅಭಿಪ್ರಾಯಪಟ್ಟರು.

ಉತ್ಪಾದನಾ ವೆಚ್ಚ ಕಡಿಮೆ ಇದೆ ಎಂದು ವಿದೇಶಿ ಕಂಪನಿಗಳು ಭಾರತದಲ್ಲಿ ಬಂಡವಾಳ ಹೂಡುವ ಕಾಲವೊಂದಿತ್ತು. ಆದರೆ ಈಗ ಕೌಶಲ್ಯಾಧಾರಿತ ಉದ್ಯೋಗಿಗಳಿರುವ ಹಿನ್ನೆಲೆಯಲ್ಲಿ ಈಗ ಬಂಡವಾಳ ಹೂಡುತ್ತಿದ್ದು, ಅಂತಹ ಕೋಟ್ಯಾಂತರ ಕೌಶಲ್ಯಾಧಾರಿತ ಉದ್ಯೋಗಿಗಳನ್ನು ಕೇಂದ್ರ ಸರ್ಕಾರ ಸೃಷ್ಟಿಸಿದೆ ಎಂದು ಹೇಳಿದರು.

ದೇಶದಲ್ಲಿ 25 ಕೋಟಿ ಜನರು ಬಡತನ ರೇಖೆಯಿಂದ ಹೊರಗೆ ಬಂದಿದ್ದಾರೆ. ನೀತಿ ಆಯೋಗದ ಈ ಅಂಕಿ ಅಂಶಗಳ ಬಗ್ಗೆ ಅಪನಂಬಿಕೆ ಇದ್ದರೆ, ವಿಶ್ವ ಬ್ಯಾಂಕ್ ಸೇರಿದಂತೆ ಅಂತಾರಾಷ್ಟ್ರೀಯ ಸಂಸ್ಥೆಗಳ ವರದಿಯನ್ನು ಅವಲೋಕಿಸಲಿ ಎಂದು ಯದುವೀರ್ ಸಲಹೆ ನೀಡಿದರು.

ಸ್ವಚ್ಛ ಭಾರತ, ಪಿಎಂ ಕಿಸಾನ್ ಯೋಜನೆ, ಫಸಲ್ ಭೀಮಾ ಯೋಜನೆ, 91 ಲಕ್ಷ ಮಹಿಳಾ ಸ್ವಸಹಾಯ ಗುಂಪು ರಚನೆ, ಮಹಿಳಾ ಸಬಲೀಕರಣ, ಸೆಮಿ ಕಂಡಕ್ಟರ್ ಕೈಗಾರಿಕೆಗಳ ಸ್ಥಾಪನೆ, 41 ಪಾರಂಪರಿಕ ತಾಣಗಳು ಯೂನೆಸ್ಕೊ ಪಟ್ಟಿಗೆ ಸೇರ್ಪಡೆ, 500 ವರ್ಷಗಳಷ್ಟು ಹಳೆಯದಾದ ರಾಮಮಂದಿರ ನಿರ್ಮಾಣದ ವಿವಾದ ಪರಿಹಾರ, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ಯೋಗಕ್ಕೆ ವಿಶ್ವ ಮನ್ನಣೆ, ಜಮ್ಮು ಮತ್ತು ಕಾಶ್ಮೀರದಲ್ಲಿ ಆರ್ಟಿಕಲ್ 370 ರದ್ದು, ಜಾತಿ, ಜನಗಣತಿ ಆರಂಭ ಸೇರಿದಂತೆ ಹಲವು ಕ್ರಾಂತಿಕಾರಿ ಅಭಿವೃದ್ಧಿಯನ್ನು ನರೇಂದ್ರ ಮೋದಿ ಸರ್ಕಾರ ಮಾಡಿದೆ ಹಾಗೂ ಮಾಡುತ್ತಿದೆ ಎಂದು ವಿವರಿಸಿದರು.

ಇಂದು ಸಣ್ಣ ವ್ಯಾಪಾರಿ ಕೂಡ ಡಿಜಿಟಲ್ ಪಾವತಿ ಮೂಲಕ ವ್ಯವಹಾರ ನಡೆಸುತ್ತಾನೆ. ಡಿಜಿಟಲ್ ಫ್ಲಾಟ್ ಫಾರಂ ಅಕ್ಷರ ಮಟ್ಟಿಗೆ ಕ್ರಾಂತಿ ಮಾಡಿದ್ದು, ಈ ಬಗ್ಗೆ ವಿಶ್ವ ಬ್ಯಾಂಕ್ ಮೆಚ್ಚಿಗೆ ವ್ಯಕ್ತಪಡಿಸಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆ ಮೇಲೆ ಹಿಡಿತ ಸಾಧಿಸದೆ ಜನ ಸಾಮಾನ್ಯರಿಗೆ ಬರೆ ಎಳೆಯುತ್ತಿದೆ ಎಂಬ ಆರೋಪಕ್ಕೆ ಸ್ಪಷ್ಟನೆ ನೀಡಿದ ಯದುವೀರ್ ಅವರು, ಬೆಲೆ ಇಳಿಕೆಯಲ್ಲಿ ಕೇಂದ್ರದಂತೆ ರಾಜ್ಯ ಸರ್ಕಾರದ ಹೊಣೆಗಾರಿಕೆ ಕೂಡ ಇದೆ. ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹೆಚ್ಚಿನ ತೆರಿಗೆ ಹೇರಿಕೆಯಿಂದ ಅಗತ್ಯ ವಸ್ತುಗಳ ಬೆಲೆ ಹೆಚ್ಚಳವಾಗಿದೆ ಎಂದು ಆಪಾದಿಸಿದರು.

ಬೆಲೆ ಏರಿಕೆ ಸೇರಿದಂತೆ ರಾಜ್ಯದ ಪ್ರತಿಯೊಂದು ಸಂಕಷ್ಟಕ್ಕೂ ರಾಜ್ಯ ಕಾಂಗ್ರೆಸ್ ಸರ್ಕಾರದ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ತೋರಿಸುತ್ತಿದೆ ಎಂದು ಕಿಡಿಕಾರಿದರು.

ಆರ್‌ಎಸ್‌ಎಸ್ ನೋಂದಣಿ ಮಾಡಿಸಬೇಕು ಎಂಬ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರ ಆಗ್ರಹಕ್ಕೆ ಆಕ್ರೋಶ ವ್ಯಕ್ತಪಡಿಸಿದ ಯದುವೀರ್ ಅವರು, ಆರ್‌ಎಸ್‌ಎಸ್ ಭಾರತದ ಸಂಸ್ಕೃತಿ ಉಳಿಸುವ ಕೆಲಸ ಮಾಡುತ್ತಿದೆ. ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ. ಮೈಸೂರಿನಲ್ಲಂತೂ ಡ್ರಗ್ಸ್ ಹಾವಳಿ ಮಿತಿಮೀರಿದೆ. ಹೊರ ರಾಜ್ಯದ ಪೊಲೀಸರು ಮೈಸೂರಿಗೆ ಬಂದು ಡ್ರಗ್ಸ್ ಜಾಲ ಭೇದಿಸುತ್ತಿದ್ದಾರೆ. ಹಾಗಾದರೆ ಇಲ್ಲಿನ ಪೊಲೀಸರು ಏನು ಮಾಡುತ್ತಿದ್ದಾರೆ ಎಂದು ಯದುವೀರ್ ಪ್ರಶ್ನಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಹರ್ಷವರ್ಧನ್, ನಗರ ಬಿಜೆಪಿ ಅಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾಧ್ಯಕ್ಷ ಸುಬ್ಬಣ್ಣ, ಮಾಜಿ ಮೇಯರ್ ಶಿವಕುಮಾರ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ರಾಮಕೃಷ್ಣ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಬ್ಲಾಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಹೈ ಜವಾನಿ ತೋ ಇಷ್ಕ್ ಹೋನಾ ಹೈ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಪೆದ್ದಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಮ್ಯಾಂಗೋ ಪಚ್ಚ (ಕ)	4 ಪ್ರದರ್ಶನಗಳು
ಲಿಡೋ	
ಕೆಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಲೋ ನವೀನ (ಕ)	4 ಪ್ರದರ್ಶನಗಳು

ಅನಂತಗೀತ ವಿದ್ಯಾಲಯದಲ್ಲಿ ಅಕ್ಷರಾಭ್ಯಾಸ



ಮೈಸೂರಿನ ವಿಜಯನಗರದ ಅನಂತಗೀತ ವಿದ್ಯಾಲಯದಲ್ಲಿ ಪೂರ್ವ ಪ್ರಾಥಮಿಕ (ಪ್ರೀಕೆಜಿ ಮತ್ತು ಎಲ್‌ಕೆಜಿ) ವಿಭಾಗದ ಮಕ್ಕಳಿಗೆ ತಾಯಿ ಶಾರದಾಂಬೆಗೆ ಪೂಜೆ ಸಲ್ಲಿಸಿ ಪ್ರಾರ್ಥನೆ ಮಾಡುವ ಮೂಲಕ ಮಕ್ಕಳಿಗೆ ಭವ್ಯ ಭಾರತದ ಪರಂಪರೆ ಹಾಗೂ ಸನಾತನ ಸಂಸ್ಕೃತಿಯನುಸಾರ ಅಕ್ಷರಾಭ್ಯಾಸ ಮಾಡಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷ ವೇಣುಗೋಪಾಲ್ ಕಲ್ಲೂರು, ಮುಖ್ಯ ಶಿಕ್ಷಕ ಲೋಕೇಶ ಹೆಚ್.ಪಿ, ಶಿಕ್ಷಕರು ಮತ್ತು ಪೋಷಕರು ವಿದ್ಯಾರ್ಥಿಗಳು ಹಾಜರಿದ್ದರು.

ಅಭಿನಂದನೆ




ವಿಧಾನ ಪರಿಷತ್ ಚುನಾವಣೆಗೆ ಭಾರತೀಯ ಜನತಾ ಪಾರ್ಟಿಯ ಅಭ್ಯರ್ಥಿಯಾಗಿ ಆಯ್ಕೆಯಾದ ಭಾರತೀಯ ಜನತಾ ಪಾರ್ಟಿಯ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷರೂ, ಶಿಕ್ಷಣ ತಜ್ಞರೂ ಆದ ಆರ್. ರಘು ಕೌಟಿಲ್ಯ ಅವರನ್ನು ಭಾರತೀಯ ಜನತಾ ಪಾರ್ಟಿ ಓಬಿಸಿ ಮೋರ್ಚಾ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಮೈ ನಾ ಲೋಕೇಶ್ ಹಾಗೂ ಪಿ ಗಿರೀಶ್ ಅಭಿನಂದಿಸಿದರು.

ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ



ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡ ಮಾಜಿ ಮೇಯರ್ ಶಿವಕುಮಾರ್ ಅವರು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಅಭಿನಂದಿಸಿದರು. ಈ ವೇಳೆ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಕಂಬ್ರಳ್ಳಿ ಸುಬ್ಬಣ್ಣ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಹರ್ಷವರ್ಧನ್, ಮೈಸೂರು ನಗರ ಎಸ್.ಟಿ. ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷ ಅನಿಲ್ ಥಾಮಸ್, ಪ್ರಧಾನ ಕಾರ್ಯದರ್ಶಿಗಳಾದ ರಘು, ರುದ್ರಮೂರ್ತಿ, ವಸಂತಕುಮಾರ್, ಕೃಷ್ಣನಾಯಕ, ಗುರುವಿನಾಯಕ, ಸಂತೋಷ್, ಮಹೇಶ್ ರಾಜ್ ಅರಸ್, ನಂದೀಶ್ ರಾಜ ಅರಸ್, ರಂಗಸ್ವಾಮಿ, ಮಹೇಶ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು, ಜೂ.10– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿ ನಿರ್ವಹಣಾ ಕೆಲಸದ ನಿಮಿತ್ತ ಜೂನ್ 12 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಶ್ರೀರಾಂಪುರ 2ನೇ ಹಂತ, ರಮಾಬಾಯಿ ನಗರ, ಮಹದೇವಪುರ, ಜಯನಗರ 1 ರಿಂದ 20ನೇ ಕ್ರಾಸ್, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ ಕೆ ಬ್ಲಾಕ್, ಅಪೋಲೊ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶಗಳು. ಚಿಕ್ಕಹರದನಹಳ್ಳಿ, ಗೊರೂರು ಗ್ರಾಮ, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯರಸ್ತೆಯಿಂದ 6ನೇ ಮುಖ್ಯರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತಲಿನ ಪ್ರದೇಶಗಳು.

ವಿದ್ಯಾರಣ್ಯಪುರಂ 25 ರಿಂದ 30ನೇ ಕ್ರಾಸ್, ಕನಕಗಿರಿ, ಸ್ಟರ್ಲಿಂಗ್ ಸುತ್ತ–ಮುತ್ತ, ಕೃಷ್ಣಮೂರ್ತಿಪುರಂ, ಇಂಡಸ್ಟ್ರೀಯಲ್ ಸಬರ್ಬ್ 1 ರಿಂದ 3ನೇ ಹಂತ, ಚಾಮುಂಡಿಪುರಂ ವೃತ್ತ, ಸಿಲ್ಕ್ ಫ್ಯಾಕ್ಟರಿ ಸುತ್ತ–ಮುತ್ತ, ಆಶೋಕಪುರಂ, ಮೇದರಕೇರಿ, ಆರ್.ಟಿ.ಓ ಸುತ್ತ–ಮುತ್ತ, ನಂಜುಮಳಿಗೆ ಸುತ್ತ–ಮುತ್ತ, ಬಂಡಿಪಾಳ್ಯ ಗ್ರಾಮ, ಹೊಸಹುಂಡಿ ಗ್ರಾಮ, ಗುಡುಮಾದನಹಳ್ಳಿ ಗ್ರಾಮ, ಏಳಿಗೆಹುಂಡಿ, ಉತ್ತನಹಳ್ಳಿ ಗ್ರಾಮ, ಆಲನಹಳ್ಳಿ ರಿಂಗ್ ರಸ್ತೆ ಸುತ್ತ–ಮುತ್ತ, ನಾಚನಹಳ್ಳಿ ಪಾಳ್ಯ, ಕವಿತಾ ಬೇಕರಿ ಸರ್ಕಲ್, ಜೆ.ಪಿ ನಗರ ಎ ಯಿಂದ ಇ ಬ್ಲಾಕ್, ಗೊಬ್ಬಳಿ ಮರ, ಪೊಲೀಸ್ ಬೂತ್ ವೃತ್ತ, ಓಂಕಾರ್ ಬಡಾವಣೆ, ಸಿದ್ದಲಿಂಗೇಶ್ವರ ಬಡಾವಣೆ, ಅಮೋಘ ಪ್ಯಾಲೆಸ್ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಡಾ. ಶ್ರೀಲತಾ ಮನೋಹರ್ ಅವರ ಪ್ರೀತಿ ಮಾತನಾಡಲು ಕೃತಿ ಲೋಕಾರ್ಪಣೆ



ಮೈಸೂರು: ಹೂಟಗಳ್ಳಿಯ ಶ್ರೀ ಅನಂತೇಶ್ವರ ಸಮುದಾಯ ಭವನದಲ್ಲಿ ಅಲೈನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ಹಾಗೂ ಭೂಮಿಗಿರಿ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕವಯಿತ್ರಿ ಡಾ. ಶ್ರೀಲತಾ ಮನೋಹರ್ ಅವರ 4ನೇ ಕೃತಿಯಾದ 'ಪ್ರೀತಿ ಮಾತನಾಡಲು' ಪುಸ್ತಕ ಬಿಡುಗಡೆ ಮಾಡಲಾಯಿತು. ಈ ವೇಳೆ ಅಸೋಸಿಯೇಷನ್ ಆಫ್ ಅಲೈನ್ಸ್ ಕ್ಲಬ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಅಂತರರಾಷ್ಟ್ರೀಯ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಸುಗಮ ಸಂಗೀತ ಪರಿಷತ್ (ಮೈಸೂರು) ಅಧ್ಯಕ್ಷ ಅಲೈನ್ಸ್ ಡಾ. ನಾಗರಾಜ್ ವಿ.ಬೈರಿ, ಸಂಸ್ಕೃತಿ ಚಿಂತಕರು ಹಾಗೂ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಅಲೈನ್ಸ್ ಕ್ಲಬ್ ಇಂಟರ್‌ನ್ಯಾಷನಲ್ ಜಿಲ್ಲೆ 255ರ ಜಿಲ್ಲಾ ರಾಜ್ಯಪಾಲ ಮಹಾಬಲೇಶ್ವರ ಬೈರಿ, ಮೈಸೂರು ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಡಾ. ಕೆ.ಬಿ. ಲಿಂಗರಾಜು ಹಾಗೂ ಮಾಜಿ ಜಿಲ್ಲಾ ರಾಜ್ಯಪಾಲ ಡಾ. ಎಸ್. ವೆಂಕಟೇಶ್, ಭೂಮಿಗಿರಿ ಪ್ರಕಾಶನದ ಪ್ರಕಾಶಕರು ಹಾಗೂ ಅಲೈನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ಸಂಸ್ಥೆಯ ನೂತನ ಅಧ್ಯಕ್ಷ ಎನ್. ಬೆಟ್ಟೇಗೌಡ, ನಿವೃತ್ತ ಪ್ರಾಂಶುಪಾಲ ಮನೋಹರ್, ಕೃತಿಕಾರರು ಹಾಗೂ ಕವಯಿತ್ರಿ ಡಾ. ಶ್ರೀಲತಾ ಮನೋಹರ್ ಉಪಸ್ಥಿತರಿದ್ದರು.

ಲೆಕ್ಕ ಪತ್ರ ಸಲ್ಲಿಕೆ ಮಾಡದ ಸಂಸ್ಥೆಗಳಿಗೆ ನವೀಕರಣಕ್ಕೆ ಕೊನೆಯ ಅವಕಾಶ

ಮೈಸೂರು, ಜೂ.10– ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರಡಿ ನೋಂದಣಿಯಾದ ಪ್ರತಿಯೊಂದು ಸಂಘವು ಪ್ರತಿ ವರ್ಷ ಲೆಕ್ಕಪತ್ರಗಳ ಪೈಲಿಂಗ್ ಮಾಡಬೇಕಾಗಿರುತ್ತದೆ. 5 ವರ್ಷಗಳಿಗೂ ಮೇಲ್ಪಟ್ಟು ಪೈಲಿಂಗ್ ಮಾಡದೇ ಇರುವ ಸಂಘ ಸಂಸ್ಥೆಗಳ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಇಂತಹ ಸಂಸ್ಥೆಗಳಿಗೆ ನಿಯಮಾನುಸಾರ ದಂಡ ವಿಧಿಸಿ, ಲೆಕ್ಕಪತ್ರಗಳನ್ನು ಸಲ್ಲಿಸಿ ನವೀಕರಿಸಿಕೊಳ್ಳಲು ದಿನಾಂಕ: 31.12.2026 ರವರೆಗೆ ಕಾಲಾವಕಾಶ ವಿಸ್ತರಿಸಿ ಸಹಕಾರ ಇಲಾಖೆಯು ಆದೇಶ ಹೊರಡಿಸಿದೆ.

1)ಮೈಸೂರು ನಗರ, 2) ಮೈಸೂರು ತಾಲೂಕು, 3) ನಂಜನಗೂಡು ತಾಲೂಕು, 4) ಟಿ.ನರಸೀಪುರ ತಾಲೂಕು, 5) ಹುಣಸೂರು ತಾಲೂಕು, 6) ಪಿರಿಯಾಪಟ್ಟಣ ತಾಲೂಕು, 7) ಹೆಚ್.ಡಿ.ಕೋಟೆ ತಾಲೂಕು, 8) ಸರಗೂರು ತಾಲೂಕು, 9) ಕೆ.ಆರ್. ನಗರ ತಾಲೂಕು ಮತ್ತು 10) ಸಾಲಿಗ್ರಾಮ ತಾಲೂಕು ಈ ಕಚೇರಿಯ ವ್ಯಾಪ್ತಿಗೆ ಒಳಪಡುವ ತಾಲೂಕುಗಳಾಗಿವೆ.

ನವೀಕರಣ(ಪೈಲಿಂಗ್)ಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳಾದ ಬೈಲಾ ಪ್ರತಿ, ಆಡಿಟ್ ವರದಿಗಳು, ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿ(ಸದಸ್ಯರ ಭಾವಚಿತ್ರ ಸಹಿಯೊಂದಿಗೆ) ವಾರ್ಷಿಕ ಸರ್ವಸದಸ್ಯರ ಸಭೆಯ ನಡವಳಿಗಳು, ಸರ್ವಸದಸ್ಯರ ಸಭೆಗೆ ಹಾಜರಾದ ಸದಸ್ಯರ ವಿವರ ಮತ್ತು ಅವರ ಸಹಿಯೊಂದಿಗೆ, ಒಟ್ಟು ಸದಸ್ಯರ ಪಟ್ಟಿ, ನೋಂದಣಿ ಪ್ರಮಾಣ ಪತ್ರ, ನೋಟರಿಯವರಿಂದ ಪ್ರಮಾಣ ಪತ್ರ, ಮತ್ತು ಹಿಂದಿನ ಪೈಲಿಂಗ್ ಮಾಡಿರುವ ಬಗ್ಗೆ ಸ್ವೀಕೃತಿ ಪತ್ರ ಹಾಗೂ ಇನ್ನಿತರೆ ಅಗತ್ಯ ದಾಖಲಾತಿಗಳೊಂದಿಗೆ ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪ ನಿಬಂಧಕರು, ಸಾರ್ವಜನಿಕ ಸೇವೆಗಳ ಕಟ್ಟಡ, ನ್ಯೂ ಸಯಾಜಿರಾವ್ ರಸ್ತೆ, ಮೈಸೂರು–570004 ಇವರನ್ನು ಸಂಪರ್ಕಿಸಬಹುದೆಂದು ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೀರ್ಣಾಂಗ ಕಾಯಿಲೆಗಳ ಉಚಿತ ತಪಾಸಣಾ ಶಿಬಿರ

ಮೈಸೂರು, ಜೂ. 10– ಸುಯೋಗ್ ಆಸ್ಪತ್ರೆಯ ವತಿಯಿಂದ 13 ರವರೆಗೆ ಬೆಳಗ್ಗೆ 10ಗಂಟೆಯಿಂದ ಸಂಜೆ 6 ಗಂಟೆವರೆಗೆ ಜೀರ್ಣಾಂಗ ಕಾಯಿಲೆಗಳ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ಜೀರ್ಣಾಂಗ ಶಸ್ತ್ರಕ್ರಿಯಾತಜ್ಞರಾದ ಡಾ. ದಿಲೀಪ್ ನೇತೃತ್ವದಲ್ಲಿ ನಡೆಯಲಿರುವ ಈ ಶಿಬಿರದಲ್ಲಿ ಅಜೀರ್ಣ, ಮಲಬದ್ಧತೆ, ಹೊಟ್ಟೆನೋವು, ಹೊಟ್ಟೆಯಲ್ಲಿ ಉರಿ, ಹೊಟ್ಟೆಯಲ್ಲಿ ಸಂಕಟ, ಮಲದಲ್ಲಿ ರಕ್ತ ಮುಂತಾದ ಸಮಸ್ಯೆಗಳಿರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡು ಈ ಶಿಬಿರದ ಉಪಯೋಗವನ್ನು ಪಡೆಯಬಹುದೆಂದು ಕೋರಲಾಗಿದೆ.

ಹೆಚ್ಚಿನ ಮಾಹಿತಿಗೆ ಮೊ.ಸಂ.0821–2566966, 9986399862 ಅನ್ನು ಸಂಪರ್ಕಿಸಬಹುದು.

ಅತೀ ಮೊಬೈಲ್ ಬಳಕೆ ಮಕ್ಕಳ ನೆನಪಿನ ಶಕ್ತಿ ಕುಗ್ಗಿಸುತ್ತದೆ

- ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಎಚ್ಚರಿಕೆ
- ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ ಬೆಳೆಸಿ, ಪೋಷಕರಿಗೆ ಕಿವಿಮಾತು



ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯದಲ್ಲಿ ಮರು ಬಳಕೆ ಅಭಿಯಾನದಲ್ಲಿ ಖಾಲಿ ಹಾಳೆಗಳಿಂದ ತಯಾರಿಸಿದ್ದ ನೋಟ್ ಪುಸ್ತಕಗಳನ್ನು ವಿವಿಧ ಶಾಲಾ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.

ಮೈಸೂರು,ಜೂ.10(ಎಂಟಿವೈ)– ಅತಿಯಾದ ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ನೆನಪಿನ ಶಕ್ತಿ ಕಡಿಮೆಯಾಗುತ್ತಿದ್ದು, ಪೋಷಕರು ತಮ್ಮ ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ ಬೆಳೆಸಬೇಕು ಎಂದು ಪ್ರಾದೇಶಿಕ ಆಯುಕ್ತರೂ ಆಗಿರುವ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷ ನಿತೇಶ್ ಪಾಟೀಲ್ ಸಲಹೆ ನೀಡಿದ್ದಾರೆ.

ಮೈಸೂರಿನ ಪೀಪಲ್ಸ್ ಪಾರ್ಕ್‌ನಲ್ಲಿರುವ ನಗರ ಕೇಂದ್ರ ಗ್ರಂಥಾಲಯದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬಾಲ್ಯ ಫೌಂಡೇಷನ್ ಸಹಯೋಗದಲ್ಲಿ 'ನೋಟ್ ಪುಸ್ತಕಗಳ ಬಳಕೆಯಾಗದ ಹಾಳೆಗಳನ್ನು ಮರು ಬಳಕೆ ಮಾಡಲು ತಯಾರಿಸಿದ್ದ ನೋಟ್ ಪುಸ್ತಕಗಳನ್ನು ವಿವಿಧ ಶಾಲೆಗಳ ವಿದ್ಯಾರ್ಥಿಗಳಿಗೆ ವಿತರಿಸುವ ಅಭಿಯಾನದಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಮಕ್ಕಳ ಸ್ಕ್ರೀನ್ ಟೈಂ ಹೆಚ್ಚಾಗುವುದರಿಂದ ಅವರ ನೆನಪಿನ ಶಕ್ತಿ ಕಡಿಮೆಯಾಗುತ್ತಿದೆ. ಹಾಗಾಗಿ ಮಕ್ಕಳು ಮೊಬೈಲ್ ಬಳಕೆಯನ್ನು ಆದಷ್ಟು ತಗ್ಗಿಸಿ ಕೇವಲ ಓದಿಗಾಗಿ ಬಳಕೆ ಮಾಡಿಕೊಳ್ಳಬೇಕು. ಮೊಬೈಲ್ ಬಳಕೆಯಿಂದ ಮಕ್ಕಳಲ್ಲಿ ಸೃಜನಶೀಲತೆ ಕ್ಷೀಣಿಸುತ್ತದೆ. ಅಲ್ಲದೆ, ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳು ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು. ಇದಕ್ಕೆ ಪೋಷಕರು ಪ್ರೋತ್ಸಾಹ ನೀಡಬೇಕು ಎಂದರು.

ನೋಟ್ ಪುಸ್ತಕಗಳ ಖಾಲಿ ಹಾಳೆ ಬಳಕೆಯಿಂದ ಮರಗಳ ಕಡಿಯುವ ಪ್ರಮಾಣ ತಗ್ಗುತ್ತದೆ. ಹಾಗಾಗಿ ಇದೊಂದು ಪರಿಸರ ಸ್ನೇಹಿ ಅಭಿಯಾನವಾಗಿದೆ. ಮಕ್ಕಳು ಬಳಕೆಯಾಗದ ಹಾಳೆಗಳನ್ನು ನೀಡುವ ಮೂಲಕ ಬೇರೆಯವರ ಶಿಕ್ಷಣ ಮುಂದುವರಿಕೆಗೆ ಕೊಡುಗೆ ನೀಡಬೇಕೆಂದು ಮನವಿ ಮಾಡಿದರು.

ಏನಿದು ಅಭಿಯಾನ: ಶೈಕ್ಷಣಿಕ ವರ್ಷದ ಕೊನೆಯಲ್ಲಿ ನೋಟ್ ಪುಸ್ತಕಗಳಲ್ಲಿ ಬಳಕೆಯಾಗದೇ ಉಳಿಯುವ ಖಾಲಿ ಪುಟಗಳು ಮತ್ತೊಬ್ಬರ ಶೈಕ್ಷಣಿಕ ಅಭ್ಯಾಸಕ್ಕೆ ದಾರಿ ದೀಪವಾಗಬಲ್ಲದು. ಹಾಗಾಗಿ ಅಂತಹ ಖಾಲಿ ಪುಟಗಳನ್ನು ಸಂಗ್ರಹಿಸಿ ಅದಕ್ಕೆ ಪುಸ್ತಕ ರೂಪ ನೀಡಿ ಬಡ ಮಕ್ಕಳಿಗೆ ನೀಡುವ ಅಭಿಯಾನಕ್ಕೆ ಈ ಹಿಂದೆ ಚಾಲನೆ ನೀಡಿತ್ತು. ತಯಾರಾದ ಪುಸ್ತಕಗಳನ್ನು ನಗರದ ಸಿಎಸ್‌ಐ ವಿಕ್ಟೋರಿಯಾ ಶಾಲೆ, ಗಾಡಿ ಚೌಕ ಹಿರಿಯ ಪ್ರಾಥಮಿಕ ಶಾಲೆ, ಮಹಾಜನ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಪುನರ್ ಬಳಕೆಗೆ ನೀಡಲಾಯಿತು. ಅಲ್ಲದೇ ಅಭಿಯಾನಕ್ಕೆ ನೆರವಾಗುವ ಉದ್ದೇಶದಿಂದ ತಾವು ಬಳಕೆ ಮಾಡಿದ ನೋಟ್ ಪುಸ್ತಕದಲ್ಲಿ ಉಳಿದ ಖಾಲಿ ಹಾಳೆಗಳನ್ನು ಅಭಿಯಾನದ ಬಳಕೆಗೆ ಶಾಲೆ ಮಕ್ಕಳು ನೀಡಿದರು.

ಗ್ರಂಥಾಲಯಕ್ಕೆ ಹಾಳೆ ನೀಡಿ

ಈ ಅಭಿಯಾನಕ್ಕೆ ಕೈ ಜೋಡಿಸುವವರು ಬಳಕೆಯಾಗದೇ ಉಳಿಯುವ ನೋಟ್ ಪುಸ್ತಕದ ಹಾಳೆಗಳನ್ನು ಸಾರ್ವಜನಿಕರು ನಗರದಲ್ಲಿರುವ ಸಾರ್ವಜನಿಕರಿಂದ ಗ್ರಂಥಾಲಯಗಳಿಗೆ ನೀಡಿದರೆ. ಅದನ್ನು ಬಾಲ್ಯ ಫೌಂಡೇಷನ್ ಸೇರಿದಂತೆ ಇನ್ನಿತರ ಕೆಲ ಸಂಘ ಸಂಸ್ಥೆಗಳು ಅದನ್ನು ಸ್ವೀಕರಿಸಿ ವ್ಯವಸ್ಥಿತವಾಗಿ ಬೈಂಡಿಂಗ್ ಮಾಡಿಸಲಿವೆ. ನಂತರ ಅದನ್ನು ಅಗತ್ಯವಿರುವವರಿಗೆ ನೀಡುವ ಮೂಲಕ ಹಾಳೆ ತಯಾರಿಸಲು ಮರ ಕಡಿಯುವ ಪ್ರಮಾಣವನ್ನು ತಗ್ಗಿಸುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

ಕಾರ್ಯಕ್ರಮದಲ್ಲಿ ನಗರ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕ ಬಿ.ಮಂಜುನಾಥ್, ಬಿಇಒಗಳಾದ ಕೃಷ್ಣ, ರೇವಣ್ಣ, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಉಪ ಆಯುಕ್ತ ರಮೇಶ್ ನರಸಯ್ಯ, ಮಹಾರಾಜ ಕಾಲೇಜು ಪ್ರಾಂಶುಪಾಲ ಡಾ.ವಿ. ಷಣ್ಮುಗಂ, ಪತ್ರಕರ್ತ ರಮೇಶ್ ಉತ್ತಪ್ಪ ಬಾಲ್ಯ ಫೌಂಡೇಷನ್ ಸಂಸ್ಥಾಪಕ ಕೆ.ಎಸ್. ಅನಿಲ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪ್ರಧಾನಿ ಮೋದಿ ಸಾಧನೆಗೆ ಸಿಹಿ ಹಂಚಿ ಸಂಭ್ರಮ



ಭಾರತದ ಮೊದಲ ಪ್ರಧಾನಿ ಜವಹರಲಾಲ್ ನೆಹರು ಅವರ ಅವಧಿಯ ದಾಖಲೆಯನ್ನು ಮುರಿದು ದೇಶದ ಅತೀ ದೀರ್ಘಾವಧಿ ಚುನಾಯಿತ ಪ್ರಧಾನಿ ಹೆಗ್ಗಳಿಕೆಗೆ ಪಾತ್ರರಾಗಿರುವ ನರೇಂದ್ರ ಮೋದಿ ಅವರ ಭಾವಚಿತ್ರವನ್ನು ಹಿಡಿದು ಸಿಹಿ ಹಂಚಿ ಸಂಭ್ರಮಿಸಲಾಯಿತು. ಈ ವೇಳೆ ಬಿಜೆಪಿ ಮೈಸೂರು ನಗರ ನಿಕಟಪೂರ್ವ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಮಾಜಿನಗರ ಪಾಲಿಕೆ ಸದಸ್ಯ ಜಗದೀಶ್, ಅಪೂರ್ವ ಸುರೇಶ್, ಸಮಾಜ ಸೇವಕ ದೂರ ರಾಜಣ್ಣ, ಕದಂಬ ಸೇನೆ ನಗರ ಜಿಲ್ಲಾಧ್ಯಕ್ಷ ಶಿವರಾಜ್, ದಯಾನಂದ ನಾಯಕ್, ಪುಟ್ಟರಾಜು, ಪುರುಷೋತ್ತಮ್, ರಾಮಚಂದ್ರ, ನಿವೃತ್ತ ಶಿಕ್ಷಕ ಮಾದೇವಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ವಸತಿ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮೈಸೂರು, ಜೂ.10– ಪ್ರಧಾನಮಂತ್ರಿ ಆವಾಸ್ ಯೋಜನೆ (ನಗರ) 2.0 ಯೋಜನೆಯಡಿ ನಂಜನಗೂಡು ನಗರಸಭಾ ವ್ಯಾಪ್ತಿಯಲ್ಲಿರುವ ಅರ್ಹ ವಸತಿ ರಹಿತ, ನಿವೇಶನ ರಹಿತ ಫಲಾನುಭವಿಗಳು ಪ್ರಧಾನ ಮಂತ್ರಿ ಆವಾಸ್ (ನಗರ) 2.0 ಯೋಜನೆಯಡಿ ವಸತಿ ಸೌಕರ್ಯ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ದಿನಾಂಕವನ್ನು ಜೂನ್ 30 ವರೆಗೆ ವಿಸ್ತರಿಸಲಾಗಿದೆ.

ಅರ್ಜಿದಾರರು ಆಧಾರ್ ಕಾರ್ಡ್, ವಸತಿ ರಹಿತರಾದಲ್ಲಿ ನಿವೇಶನಕ್ಕೆ ಸಂಬಂಧಿಸಿದ ದಾಖಲೆಗಳು (ಹಕ್ಕು ಪತ್ರ/ಕ್ರಯಪತ್ರ/ದಾನಪತ್ರ/ಉಡುಗೊರೆ ಪತ್ರ/ಖಾತಾ), ಫಲಾನುಭವಿಯ ಭಾವಚಿತ್ರ, ಆದಾಯ ಮತ್ತು ಜಾತಿ ಪ್ರಮಾಣ ಪತ್ರ, ಪಡಿತರ ಚೀಟಿ, ಬ್ಯಾಂಕ್ ಖಾತೆಯ ವಿವರ, ಮೊಬೈಲ್ ಸಂಖ್ಯೆ, ಕಟ್ಟಡ ಪರವಾನಗಿ, ಪ್ಯಾನ್ ಕಾರ್ಡ್ (ಲಭ್ಯವಿದ್ದಲ್ಲಿ ಮಾತ್ರ) ದಾಖಲೆಗಳನ್ನು ಹೊಂದಿರಬೇಕು ಎಂದು ನಂಜನಗೂಡು ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಲಲಿತಾಭಿನಂದನ
ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ
ಅಭಿನಂದನಾ ಸಮಾರಂಭ
ಜೂನ್ 12 2026
ಶುಕ್ರವಾರ ಬೆಳಗ್ಗೆ 10 ಗಂಟೆಗೆ
ಘಟಿಕೋತ್ಸವ ಭವನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ
ಮಾನಸ ಗಂಗೋತ್ರಿ ಆವರಣ, ಮೈಸೂರು.
VISMAYA
8050302424
ಶುಭಕೋರುವವರು : ಶ್ರೀ ಜಿ.ಟಿ.ದೇವೇಗೌಡರ ಅಭಿಮಾನಿಗಳು ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು